ಸ್ವಾತಂತ್ರ್ಯೋತ್ಸವದ ಶುಭಾಶಯಗಳು

# ಕರ್ನಾಟಕ ವಿಕಾಸ

KARNATAKA VIKAS

ಆಗಸ್ಟ್ 2014 August 2014




ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ವತಿಯಿಂದ 2013-14ನೇ ಸಾಲಿನಲ್ಲಿ 1000 ನೀರಿನ ಶುದ್ಧೀಕರಣ ಘಟಕಗಳ ಬಗ್ಗೆ ಕಿರು ಹೊತ್ತಿಗೆಯನ್ನು ಇತ್ತೀಚೆಗೆ ವಿಧಾನಸೌಧದಲ್ಲಿ ಬಿಡುಗಡೆ ಮಾಡುತ್ತಿರುವ ಸನ್ಮಾನ್ಯ ಮುಖ್ಯಮಂತ್ರಿಗಳು.




ಮಂಡ್ಯ ಜಿಲ್ಲೆಯಲ್ಲಿ

ನಿರ್ಮಲ ಭಾರತ ಅಭಿಯಾನ

ಸ್ವಾಭಿಮಾನಕ್ಕಾಗಿ ಸ್ವಚ್ಛತೆ

ಸ್ವಚ್ಛತೆಗೆ ನಮ್ಮ ಆದ್ಯತೆ

ನಮ್ಮ ರಾಜ್ಯವನ್ನು
ಬಯಲು ಮಲ ವಿಸರ್ಜನಾ ಮುಕ್ತ ರಾಜ್ಯವನ್ನಾಗಿಸಲು
ನಿಮ್ಮೆಲ್ಲರ ಸಹಕಾರವಿರಲಿ




"ನಿರ್ಮಲ ಭಾರತ ಅಭಿಯಾನ"
ಕಾರ್ಯಕ್ರಮದ ಮಾಹಿತಿ, ಸೌಲಭ್ಯಗಳು ಹಾಗೂ
ಅನುಷ್ಠಾನ ಕುರಿತು ಹೆಚ್ಚಿನ ವಿವರಗಳಿಗೆ
ತಮ್ಮ ಗ್ರಾಮ ಪಂಚಾಯಿತಿಯನ್ನು ಸಂಪರ್ಕಿಸಿ

# ಸ್ವಚ್ಛತೆಗೆ ನಮ್ಮ ಆದ್ಯತೆ

# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ

ಆಗಸ್ಟ್ 2014 ಸಂಪುಟ: 55
Volume: 55
August 2014 ಸಂಚಿಕೆ : 09
Issue : 09




## ಈ ಸಂಚಿಕೆಯೊಳಗೆ


5. ಸಚಿವಾಲಯದಿಂದ ಸಂದೇಶ

7. ಮುಖಪುಟ ವರದಿ

14. ಯಶೋಗಾಥೆಗಳು

23. ಕಾವ್ಯ ವಿಕಾಸ – ಶ್ರೀ ಬೀರಪ್ಪ ಲ. ಹಳಮನಿ

24 ಲೇಖನಗಳು – ಶ್ರೀ ವಿನಾಯಕ ಎನ್. ಭಟ್ಟ

– ಡಾ. ಟಿ.ರಮೇಶ್

30. ಚಿಂತನೆ – ಪ್ರೊ|| ಎ.ಎಚ್. ಮಾಸಾಪತಿ

34. ಆರೋಗ್ಯ – ಡಾ|| ಲಕ್ಷ್ಮೀಶ್ ಡಿ.ಆರ್

38. ಕ.ವಿ.ಯ (ಕ್ವ) ಪ್ರಶ್ನೆ – ಶ್ರೀನಿವಾಸ ವಿ.

39. ಪಂಚತಂತ್ರ ವರದಿ

40. ಸಕಾಲ ವರದಿ

41. ಸುತ್ತೋಲೆಗಳು



ಪ್ರಕಾಶಕರು

**ಕೆ. ಯಾಲಕ್ಕಿ ಗೌಡ**

ನಿರ್ದೇಶಕರು (ಪಂ.ರಾಜ್)
ಹಾಗೂ ಸರ್ಕಾರದ ಪದನಿಮಿತ್ತ
ಜಂಟಿ ಕಾರ್ಯದರ್ಶಿ

ಪ್ರಧಾನ ಸಂಪಾದಕರು

**ಬೂವನಹಳ್ಳಿ ನಾಗರಾಜ್**

ನಿರ್ದೇಶಕರು, ಸುವರ್ಣ ಗ್ರಾಮೋದಯ
ಯೋಜನೆ ಹಾಗೂ ಸರ್ಕಾರದ ಪದನಿಮಿತ್ತ
ಉಪ ಕಾರ್ಯದರ್ಶಿ

ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿ

**ವೈ. ಮಹಾಂಕಾಳಪ್ಪ**

ಸಹಾಯಕ ಸಂಪಾದಕರು

**ಡಾ|| ಎಂ.ಎಸ್.ಮಂಜುನಾಥ**

ವ್ಯವಸ್ಥಾಪಕರು

**ಹೆಚ್.ಬಿ. ಗುರುಸ್ವಾಮಿ**


### ವಾರ್ಷಿಕ ಚಂದಾ

ವ್ಯಕ್ತಿಗಳಿಗೆ ರೂ. 100/–
ಸಂಸ್ಥೆಗಳಿಗೆ ರೂ 120/–
ಬಿಡಿ ಪ್ರತಿ ರೂ. 10/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ
ನಿಮ್ಮ ಸ್ಪಷ್ಟ ಅಂಚೆ ವಿಳಾಸ ಪಿನ್ ಕೋಡ್‌ನೊಂದಿಗೆ
ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು


### ಕಛೇರಿ ವಿಳಾಸ

ಸಂಪಾದಕರು, ಕರ್ನಾಟಕ ವಿಕಾಸ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ1
ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವೀಧಿ
ಬೆಂಗಳೂರು – 560 001.
ದೂರವಾಣಿ : 080–22353857
www.rdpr.kar.nic.in
email : kvrdpr@gmail.com


### ವಿಶೇಷ ಸೂಚನೆ

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ
ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು
ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು


ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ
ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

# ಪತ್ರಿಕೆಯ ಕುರಿತು ನಿಮ್ಮ ನುಡಿ




**ಮಾನ್ಯರೆ,**

'ಕರ್ನಾಟಕ ವಿಕಾಸ' ಗ್ರಾಮೀಣಾಭಿವೃದ್ಧಿಗೆ ಹಿಡಿದ ಕೈಗನ್ನಡಿಯಿದ್ದಂತೆ. ಗ್ರಾಮೀಣಾಭಿವೃದ್ಧಿಯ ಬಗ್ಗೆ ಸವಿವರವಾದ ಸ್ಪಷ್ಟ ಹಾಗೂ ನಿಖರ ಮಾಹಿತಿಯನ್ನು ಪ್ರತಿ ತಿಂಗಳು ರಾಜ್ಯದ ಜನತೆಗೆ ತಿಳಿಯುವಂತೆ ಕಾರ್ಯನಿರ್ವಹಿಸುತ್ತಿರುವ ಪತ್ರಿಕೆಯ ಸಂಪಾದಕ ಮಂಡಳಿಯ ಎಲ್ಲಾ ಸಿಬ್ಬಂದಿ ವರ್ಗದವರಿಗೂ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸುತ್ತಿರುವ ಇಲಾಖೆಯ ಮುಖ್ಯಸ್ಥರಾದ ಟಿ.ಎಂ.ವಿಜಯ ಭಾಸ್ಕರ್ ಸಾಹೇಬರಿಗೂ ಈ ಮೂಲಕ ಗೌರವದ ನಮನಗಳು

**ಎಲ್.ಎಸ್.ದಿನೇಶ್,**
ಕೆ.ಲಕ್ಕಿಹಳ್ಳಿ, ಕೊನೇಹಳ್ಳಿ (ಅಂಚೆ), ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ.

ಜುಲೈ 2014ರ ಕರ್ನಾಟಕ ವಿಕಾಸದಲ್ಲಿ ಪ್ರೊ|| ಕೆ.ಚಂದ್ರಶೇಖರ್ ಅವರು ಬರೆದಿರುವ 'ಅಭಿವೃದ್ಧಿ ಪಥದಲ್ಲಿ ಅಧಿಕಾರಿಗಳು ಮತ್ತು ಜನತೆಯ ಪಾತ್ರ' ಲೇಖನ ಉತ್ತಮವಾಗಿ, ಉಪಯುಕ್ತವಾಗಿ, ಅರ್ಥಪೂರ್ಣವಾಗಿ, ಯೋಗ್ಯವಾಗಿ, ಚನ್ನಾಗಿ ಮೂಡಿಬಂದಿದೆ. ಇಂದಿನ ಆಧುನಿಕ ಪ್ರಜಾಪ್ರಭುತ್ವ ಸರಕಾರದ ಗುರಿ ಉದ್ದೇಶವೆಂದರೆ ಜನತೆಯ ಸುಖ, ಸಂತೋಷ, ಅಭಿವೃದ್ಧಿ, ಕಲ್ಯಾಣ ಸಾಧಿಸುವುದೇ ಆಗಿದೆ. ಈ ನಿಟ್ಟಿನಲ್ಲಿ ಅಧಿಕಾರಿಗಳ ಪಾತ್ರ ಮುಖ್ಯವಾಗಿದೆ. ಹೊಣೆಗಾರಿಕೆ ಅಧಿಕಾರಿಗೆ ಅಧಿಕಾರವಿದ್ದಂತೆ. ಜನತೆಯ ಸಂಪೂರ್ಣ ಅಭಿವೃದ್ಧಿಗೆ ಅಧಿಕಾರಿಗಳು ಅಧಿಕಾರ ಬಳಸಬೇಕು. ಜನತೆಗೆ ಸ್ಪಂಧಿಸಬೇಕು ಎಂಬ ಸಂದೇಶದೊಂದಿಗೆ ಲೇಖನವು ಉತ್ತಮವಾಗಿದೆ.

**ಸಂತೋಷ ಶಾಮರಾವ್ ಆಚಾರ್ಯ,**
ಸಹ ಶಿಕ್ಷಕರು, ದುಬಲಗುಂಡಿ ಅಂಚೆ, ತಾ:ಹುಮನಾಬಾದ್ ಬೀದರ್ 585418.

ಜುಲೈ 2014ರ 'ಕರ್ನಾಟಕ ವಿಕಾಸ' ತುಂಬಾ ವಿಷಯಗಳನ್ನೊಳಗೊಂಡು ಪ್ರಕಟವಾಗಿ ಮುಂದೆ ಬಂದಿದೆ. ಅದರಲ್ಲೂ ಪ್ರೊ||ಎ.ಹೆಚ್.ಮಾಸಾಪತಿರವರ 'ಗ್ರಾಮೀಣಾಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯ' ಬಹಳ ಉತ್ತಮ ತಿಳುವಳಿಕೆ ಮೂಡಿಸುವ ಲೇಖನವಾಗಿದೆ. 'ದುರ್ಬಲ ಸಮುದಾಯಗಳ ಸಮಸ್ಯೆ', ದಾರಿದ್ರ್ಯ ವಿರೋಧಿ ಕಾರ್ಯಕ್ರಮ, ನಿರುದ್ಯೋಗ ಸಮಸ್ಯೆ ಪರಿಹಾರ ಇವುಗಳ ಮನವರಿಕೆ ಅರ್ಥಗರ್ಭಿತ ವಿಚಾರವಾಗಿದೆ. ಇಂತಹ ಹಲವಾರು ವಿಷಯಗಳ ಅರಿವು ಜನಸಾಮಾನ್ಯರ ಮನ ಮುಟ್ಟುವ ಲೇಖನ ಇದಾಗಿದೆ.

**ಅಣ್ಣೂರು ಅಪ್ಪಾಜಿ ಎ.ಎಂ,**
ಕನ್ನಡ ಸಾಹಿತ್ಯ ಪರಿಷತ್ ಸದಸ್ಯರು, ಗ್ರಂಥಪಾಲಕರು, ಅಣ್ಣೂರು ಗ್ರಾಮ ಪಂಚಾಯಿತಿ,
ಭಾರತಿನಗರ ಅಂಚೆ, ಮದ್ದೂರು ತಾ, ಮಂಡ್ಯ-571422.

'ಕರ್ನಾಟಕ ವಿಕಾಸ' ಮಾಸ ಪತ್ರಿಕೆಯು ಕರ್ನಾಟಕ ಸರ್ಕಾರ ಪ್ರಕಟಿಸಿ ಮಾಹಿತಿಯನ್ನು ಕೊಡುತ್ತಿರುವುದು ಅತ್ಯಂತ ಮಹತ್ವವಾದ ಮತ್ತು ಗಂಭೀರವಾದಂತಹ ಕೆಲಸವಾಗಿರುತ್ತದೆ. ಇದರಿಂದ ಶಾಲಾ ವಿದ್ಯಾರ್ಥಿಗಳಿಗೆ, ಸ್ಪರ್ಧಾತ್ಮಕ (IAS, KAS, PSI, PDO ಇತ್ಯಾದಿ) ಪರೀಕ್ಷೆ ಅಭ್ಯರ್ಥಿಗಳಿಗೆ ಬಹಳ ಉಪಯುಕ್ತವಾಗಿದೆ. ಈ ಪತ್ರಿಕೆಯ ಬಗ್ಗೆ ಇನ್ನು ಬಹಳಷ್ಟು ಜನರಿಗೆ ತಿಳಿಯದ ವಿಚಾರವಾಗಿದೆ. ಈ ಪತ್ರಿಕೆಯ ಬಗ್ಗೆ ಜನರಲ್ಲಿ ಮುಖ್ಯವಾಗಿ ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯಿತಿ ಕಚೇರಿಗಳಿಗೆ ಮತ್ತು ಸದಸ್ಯರುಗಳಿಗೆ ಮುಟ್ಟುವಲ್ಲಿ ದಿನಪತ್ರಿಕೆಗಳಲ್ಲಿ ಜಾಹೀರಾತಿನ ಮೂಲಕ ತಿಳಿಯಪಡಿಸಬೇಕೆಂಬುದು ನನ್ನ ಆಶಯ.

ಜುಲೈ ತಿಂಗಳ ಪತ್ರಿಕೆಯಲ್ಲಿ ಪ್ರಕಟವಾದ 'ಅಭಿವೃದ್ಧಿ ಪಥದಲ್ಲಿ ಅಧಿಕಾರಿಗಳು ಮತ್ತು ಜನತೆಯ ಪಾತ್ರ' ಎಂಬ ಚಿಂತನೆ ಲೇಖನ ಬರೆದ ಪ್ರೊ|| ಕೆ.ಚಂದ್ರಶೇಖರ್ ರವರಿಗೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಲೇಖನದಲ್ಲಿ ಆಡಳಿತದ ಅಧಿಕಾರಿಗಳು ಹೇಗೆ ತಮ್ಮ ಕರ್ತವ್ಯವನ್ನು ಮಾಡಬೇಕೆಂಬುದನ್ನು ಅತ್ಯಂತ ವಿಸ್ತಾರವಾಗಿ ವಿವರಿಸಿರುತ್ತಾರೆ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ಬರೆದ ಸಂಪಾದಕೀಯವು ಸಹ ಅತ್ಯಂತ ಮಹತ್ವದ್ದಾಗಿದೆ. ಮಹಿಳೆಯರಿಗಾಗಿಯೇ ವಿಶೇಷ ಗ್ರಾಮ ಸಭೆಗಳು ನಡೆಸುವದು ತುಂಬಾ ಒಳ್ಳೆಯದಾಗಿದೆ. ಈ ಪತ್ರಿಕೆಯನ್ನು ಇನ್ನು ದೊಡ್ಡಮಟ್ಟದಲ್ಲಿ ಬೆಳೆಯಲು ಶ್ರೀ ಟಿ.ಎಂ.ವಿಜಯಭಾಸ್ಕರ್ ರವರಿಗೆ ಆ ದೇವರು ಇನ್ನು ಶಕ್ತಿ ಕೊಡಲೆಂದು ಹಾರೈಸುತ್ತೇನೆ.

**ಕೆ.ವೆಂಕಟೇಶ್ವರ್,**
ಪೊಲೀಸ್, ಸಿಂಧನೂರು (ಗ್ರಾ), ಪೊಲೀಸ್ ಠಾಣೆ, ಸಿಂಧನೂರು ತಾಲ್ಲೂಕು, ರಾಯಚೂರು ಜಿಲೆ

## ಸಚಿವಾಲಯದಿಂದ ಸಂದೇಶ

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಬಹುಮಹಡಿ ಕಟ್ಟಡ, ಬೆಂಗಳೂರು.



ಟಿ.ಎಂ. ವಿಜಯಭಾಸ್ಕರ್, ಭಾ.ಆ.ಸೇ
ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ

ಪ್ರಿಯ ಬಂಧುಗಳೇ,

### ಪಂಚಾಯತ್ ಕಚೇರಿಗಳಲ್ಲಿ ರಾಷ್ಟ್ರ ಧ್ವಜ; ಘನತೆಗೆ ಕುಂದುಂಟಾಗದಿರಲಿ . . . .

'ರಾಷ್ಟ್ರೀಯ ಸ್ವಾಭಿಮಾನ, ವೈಭವ ಮತ್ತು ಹೆಗ್ಗಳಿಕೆಯ ಪ್ರತೀಕವಾಗಿರುವ ನಮ್ಮ ರಾಷ್ಟ್ರ ಧ್ವಜವನ್ನು 15ನೇ ಆಗಸ್ಟ್ 2013 ರಿಂದ ಪ್ರಾರಂಭಿಸಿ, ಪ್ರತಿ ದಿನ ನಿಯಮಾನುಸಾರ ರಾಜ್ಯದ ಎಲ್ಲಾ ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯಿತಿಗಳು ತಮ್ಮ ಕಾರ್ಯಾಲಯದ ಆವರಣದಲ್ಲಿ ಪ್ರತಿ ದಿನ ಘನತೆ ಮತ್ತು ಗೌರಯುತವಾಗಿ ಅಭಿಮಾನದಿಂದ ಹಾರಿಸಲು ಅರ್ಪಿತರಾಗೋಣ' ಎಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಕರೆ ನೀಡಿ ಒಂದು ವರ್ಷವಾಗಿದೆ.

ರಾಜ್ಯದ ಎಲ್ಲಾ ಪಂಚಾಯತ್ ಕಚೇರಿಗಳಲ್ಲಿ 'ಭಾರತದ ಧ್ವಜ ಸಂಹಿತೆ 2002' ರ ಮಾರ್ಗಸೂಚಿಯಂತೆ ಪ್ರತೀ ದಿನವೂ ರಾಷ್ಟ್ರ ಧ್ವಜವನ್ನು ಹಾರಿಸುವ ಬಗ್ಗೆ ಈಗಾಗಲೇ ಸುತ್ತೋಲೆಯನ್ನು ಹೊರಡಿಸಿ ಕಾರ್ಯರೂಪಕ್ಕೆ ತರಲಾಗಿದೆ. ಈ ಪ್ರಕ್ರಿಯೆಯಲ್ಲಿ ಒಂದಿನಿತೂ ಕುಂದುಂಟಾಗದಂತೆ ಮತ್ತು ಯಾವುದೇ ಸಂದರ್ಭದಲ್ಲಿಯೂ ರಾಷ್ಟ್ರ ಧ್ವಜದ ಗೌರವ ಮತ್ತು ಘನತೆಗೆ ಚ್ಯುತಿಬಾರದಂತೆ ನಮ್ಮೆಲ್ಲಾ ಅಧಿಕಾರಿ/ಸಿಬ್ಬಂದಿ ಕಡ್ಡಾಯವಾಗಿ ಎಚ್ಚರ ವಹಿಸಬೇಕು.

### ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳೆ, ನಿಮ್ಮ ಸೇವೆ ಅನುಕರಣೀಯವಾಗಿರಲಿ . . . .

ಕೇಂದ್ರ, ರಾಜ್ಯ ಮತ್ತು ವಿದೇಶಿ ನೆರವಿನ ಮೂಲಗಳಿಂದ ಹತ್ತು ಹಲವು ಅಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕಾಗಿ ನಮ್ಮ ಗ್ರಾಮ ಪಂಚಾಯತ್‌ಗಳಿಗೆ ಅನುದಾನ ಹರಿದು ಬರುತ್ತಿದೆ. ಈ ಎಲ್ಲಾ ಯೋಜನೆಗಳ ಯಶಸ್ವೀ ಅನುಷ್ಠಾನದೊಂದಿಗೆ ಕ್ರಿಯಾಶೀಲ ಆಡಳಿತ, ಹಣಕಾಸು ನಿರ್ವಹಣೆಯ ಸಂಪೂರ್ಣ ಜವಾಬ್ಧಾರಿಯನ್ನು ವಹಿಸುವ ಸಲುವಾಗಿ ಉತ್ತಮ ಶೈಕ್ಷಣಿಕ ಹಿನ್ನೆಲೆಯುಳ್ಳ ಉತ್ಸಾಹಿ ಪದವೀಧರರು ರಾಜ್ಯ ಎಲ್ಲಾ ಗ್ರಾಮ ಪಂಚಾಯಿತಿ ಕಚೇರಿಗಳಲ್ಲಿ ಕಾರ್ಯನಿರ್ವಹಿಸುವಂತಾಗಬೇಕು ಎಂಬ ಸರ್ಕಾರದ

ಆಶಯಕ್ಕನುಗುಣವಾಗಿ 'ಪಂಚಾಯತ್ ಅಭಿವೃದ್ಧಿ ಅಧಿಕಾರಿ'ಗಳನ್ನು ನೇಮಕ ಮಾಡಿಕೊಂಡು ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್ ಕಚೇರಿಗಳ ಕಾರ್ಯಭಾರ ವಹಿಸಿರುವುದು ಸರಿಯಷ್ಟೆ.

ಗ್ರಾಮ ಪಂಚಾಯತ್‌ಗಳ ಸಂಪೂರ್ಣ ಕಾರ್ಯಚಟುವಟಿಕೆಗಳು ಪಂಚಾಯತ್ ರಾಜ್ ಅಭಿವೃದ್ಧಿ ಅಧಿಕಾರಿಗಳ ಮೇಲೆ ಕೇಂದ್ರೀಕೃತಗೊಂಡಿರುತ್ತದೆ. ಅಧಿಕಾರಿಗಳು, ಸಾರ್ವಜನಿಕರು ಮತ್ತು ಚುನಾಯಿತ ಪ್ರತಿನಿಧಿಗಳೊಂದಿಗೆ ಸಮನ್ವಯ ಸಾಧಿಸುವುದರೊಂದಿಗೆ ಕ್ರಿಯಾಶೀಲ ಅಭಿವೃದ್ಧಿಪರ ಕಾರ್ಯಚಟುವಟಿಕೆಗಳನ್ನು ಪಾರದರ್ಶಕವಾಗಿ ಮತ್ತು ಪ್ರಾಮಾಣಿಕವಾಗಿ ನಿರ್ವಹಿಸಬೇಕಾದ ಗುರುತರ ಜವಾಬ್ದಾರಿ ಎಲ್ಲಾ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳದ್ದಾಗಿರುತ್ತದೆ. ಇದಕ್ಕಾಗಿ ಸರ್ಕಾರದ ಸಂಪೂರ್ಣ ಸಹಕಾರ ನಿರಂತರವಾಗಿರುತ್ತದೆ.

## ಅಭಿವೃದ್ಧಿ ಅಧಿಕಾರಿಗಳ ಅಂಗಳದಿಂದ . . . . .

ದಕ್ಷತೆ, ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯಿಂದ ತಾವುಗಳು ನಿರ್ವಹಿಸುವ ಅಭಿವೃದ್ಧಿಪರ ಕಾರ್ಯಚಟುವಟಿಕೆಗಳು ಮತ್ತು ಒದಗಿಸುವ ಕಾಮಗಾರಿಗಳ ಮಾಹಿತಿ/ವಿವರಗಳು ಇತರರಿಗೂ ಮಾದರಿಯಾಗಿ ಮಾರ್ಗದರ್ಶಕವಾಗಿರಬೇಕು. ಇಲಾಖೆಯ ಮುಖವಾಣಿ ಪತ್ರಿಕೆಯಾದ 'ಕರ್ನಾಟಕ ವಿಕಾಸ' ಪತ್ರಿಕೆಯಲ್ಲಿ ನಿಮ್ಮ ಕಾರ್ಯಚಟುವಟಿಕೆಗಳನ್ನು / ಯಶೋಗಾಥೆಗಳನ್ನು ಬಿಂಬಿಸುವ ಸಲುವಾಗಿಯೇ 'ಅಭಿವೃದ್ಧಿ ಅಧಿಕಾರಿಗಳ ಅಂಗಳದಿಂದ' ಎಂಬ ಶೀರ್ಷಿಕೆಯಡಿ ನೀವುಗಳು ನೀಡುವ ಅಭಿವೃದ್ಧಿಪರ ಮಾಹಿತಿಯನ್ನು ಪ್ರಕಟಗೊಳಿಸಿ ನಮ್ಮೆಲ್ಲಾ ಗ್ರಾಮೀಣ ಪ್ರದೇಶದ ಜನರಿಗೆ ಅರಿವು ಮೂಡಿಸಲು ತೀರ್ಮಾನಿಸಲಾಗಿದೆ. ಆದ್ದರಿಂದ ಸ್ಥಳೀಯ ಮಟ್ಟದಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಂಡ ಅಭಿವೃದ್ಧಿ ಯೋಜನೆಗಳು, ಕಾಮಗಾರಿಗಳು ಮುಂತಾದವುಗಳ ಫಲಶ್ರುತಿಯಿಂದುಂಟಾದ ಯಶೋಗಾಥೆಗಳು ಹಾಗೂ ಸ್ಥಳೀಯ ಸಾಧಕರ ಬಗ್ಗೆ ಅಗತ್ಯ ಮಾಹಿತಿಯನ್ನು ವರ್ಣ ಛಾಯಾಚಿತ್ರಗಳೊಂದಿಗೆ ಕರ್ನಾಟಕ ವಿಕಾಸ ಪತ್ರಿಕೆಗೆ ನಿರಂತರವಾಗಿ ಕಳುಹಿಸಬೇಕು, ಮತ್ತಷ್ಟು ಕ್ರಿಯಾಶೀಲರಾಗಿ ಅಭಿವೃದ್ಧಿಪರ ಕಾರ್ಯಗಳಲ್ಲಿ ಗುರುತಿಸಿಕೊಂಡು ಇತರರಿಗೂ ಅನುಕರಣೀಯವಾಗಲಿ ಎಂದು ಆಶಿಸುತ್ತೇನೆ.

## ಗಾಂಧೀಜಿ ಕನಸು . . . . .

'ಗಾಂಧೀಜಿ ಕನಸು' ಎಂಬ ಚಲನಚಿತ್ರ ಶೀಘ್ರದಲ್ಲಿ ಬಿಡುಗಡೆ ಆಗಲಿದೆ. ಈ ಚಲನಚಿತ್ರವನ್ನು ಪ್ರಸ್ತಾಪಿಸುವ ಕಾರಣವೇನೆಂದರೆ ಇದು ಮನರಂಜಕವಾಗಿ, ಮನಮುಟ್ಟುವ ರೀತಿ ಗ್ರಾಮೀಣ ಶೈಲಿಯಲ್ಲಿ ಗ್ರಾಮ ನೈರ್ಮಲ್ಯ, ಶೌಚಾಲಯ ವ್ಯವಸ್ಥೆ, ಗ್ರಾಮ ಪಂಚಾಯತ್, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಬಗ್ಗೆ ತೆಗೆದ ಅಪರೂಪದ ಚಿತ್ರ. ಈ ಚಿತ್ರವನ್ನು ಅವಕಾಶ ಸಿಕ್ಕರೆ ತಪ್ಪದೆ ನೋಡಲು ಸಲಹೆ ಮಾಡುವೆ.

ಎಲ್ಲರಿಗೂ ಸ್ವಾತಂತ್ರ್ಯೋತ್ಸವದ ಶುಭಾಶಯಗಳು.

(ಟಿ.ಎಂ. ವಿಜಯಭಾಸ್ಕರ್)

**ಮುಖಪುಟ ವರದಿ**

# ನಿರ್ಮಲ ಭಾರತ ಅಭಿಯಾನ
# ನಿರ್ಮಲ ಭಾರತದತ್ತ ಮಂಡ್ಯ ಜಿಲ್ಲೆಯ ಚಿತ್ತ

ನಿರ್ಮಲ ಭಾರತ ಅಭಿಯಾನ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲೊಂದು. ಎಲ್ಲೆಡೆ ಸ್ವಚ್ಛ ಪರಿಸರದ ನಿರ್ಮಾಣವೇ ಇದರ ಹೆಗ್ಗುರಿ. ಗ್ರಾಮೀಣ ಪ್ರದೇಶಗಳಲ್ಲಿ ರೂಢಿಯಲ್ಲಿರುವ ಬಯಲು ಮಲ ವಿಸರ್ಜನೆಯನ್ನು ತೊಡೆದುಹಾಕಲು ಹಾಗೂ ಹಳ್ಳಿಗಳಲ್ಲಿ ಸ್ವಚ್ಛ, ಸುಂದರ, ನಿರ್ಮಲ ಪರಿಸರವನ್ನು ರೂಪಿಸಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ರಾಜ್ಯಾದಂತ ನಿರ್ಮಲ ಭಾರತ ಅಭಿಯಾನವನ್ನು ಕೈಗೊಂಡಿದೆ.

**ಬಯಲು ಮಲವಿಸರ್ಜನ ಪದ್ಧತಿಯನ್ನು ತೊಡೆದು ಹಾಕಲು ಮಂಡ್ಯ ಜಿಲ್ಲಾ ಪಂಚಾಯತ್ ಪಣ ತೊಟ್ಟಿದೆ . . .**

ನಮ್ಮ ಹಳ್ಳಿಗಳಲ್ಲಿ ಬಯಲು ಮಲ ವಿಸರ್ಜನೆ ಪದ್ಧತಿಯು ಸ್ಥಳೀಯ ಸಂಪ್ರದಾಯ/ಆಚರಣೆಗಳ ನೆರವಿನಲ್ಲಿ ಮತ್ತು ನಾನಾ ಕಾರಣಗಳಿಂದಾಗಿ ಇನ್ನೂ ಉಳಿದುಕೊಂಡಿರುವುದು ನಿಜಕ್ಕೂ ಸವಾಲಿನ ಸಂಗತಿಯಾಗಿದೆ. ಶೌಚಾಲಯವು ಸ್ವಾಭಿಮಾನದ ಪ್ರತೀಕ. ಗ್ರಾಮೀಣ ಪ್ರದೇಶಗಳಲ್ಲಿ ಸ್ವಂತ ಶೌಚಾಲಯ ಇಲ್ಲದೇ ಇರುವುದರಿಂದ ಗ್ರಾಮೀಣ ಜನರು ಅದರಲ್ಲಿಯೂ ಪ್ರಮುಖವಾಗಿ ಮಹಿಳೆಯರು, ವಯೋವೃದ್ಧರು ನಾನಾ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಬಯಲು ಬಹಿರ್ದೆಸೆಗೆ ಹೋದಾಗ ಬೀದಿ ನಾಯಿಗಳ ದಾಳಿಗೆ, ಹಾವು ಚೇಳು ಮುಂತಾದ ವಿಷ ಜಂತುಗಳ ಕಡಿತಕ್ಕೆ ಒಳಗಾಗಿರುವ ಪ್ರಕರಣಗಳೂ ಸಹ ಸಾಕಷ್ಟಿವೆ. ಸರ್ಕಾರವು ಗ್ರಾಮೀಣ




ನಿರ್ಮಲ ಭಾರತ ಅಭಿಯಾನ ಕಾರ್ಯಕ್ರಮದಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಮತ್ತು ಗಣ್ಯರು

– ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ.




ಪ್ರದೇಶಗಳಲ್ಲಿ ಶೌಚಾಲಯ ನಿರ್ಮಿಸಿಕೊಳ್ಳಲು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯಗತಗೊಳಿಸಿದ್ದರೂ ಸಹ ಸಮಸ್ಯೆಗೆ ತಾತ್ವಿಕ ಅಂತ್ಯ ದೊರೆತಿಲ್ಲದಿರುವುದು ವಿಷಾದದ ಸಂಗತಿಯಾಗಿಯೇ ಉಳಿದಿದೆ. ಗ್ರಾಮೀಣ ಪ್ರದೇಶದ ಮನೆಗಳಲ್ಲಿ ಶೌಚಾಲಯ ಇಲ್ಲದಿರುವುದು ಹಲವಾರು ಸಾಮಾಜಿಕ ಹಾಗೂ ಆತಂಕಕಾರಿ ಸಮಸ್ಯೆಗೆ ಕಾರಣವಾಗಿದೆ. ಜೊತೆಗೆ ನೈರ್ಮಲ್ಯವೂ ಹಾಳಾಗುತ್ತಿದೆ.

ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ ಸ್ವಚ್ಛತೆ ಸ್ವಾತಂತ್ರ್ಯಕ್ಕಿಂತಲೂ ಶ್ರೇಷ್ಟ ಹಾಗೂ ಬಹುಮುಖ್ಯ ಅಂತರಂಗದ ಹಾಗೂ ಬಹಿರಂಗದ ಶುದ್ಧತೆ ದೈವತ್ವಕ್ಕೆ ಕರೆದೊಯ್ಯುತ್ತದೆ ಎಂಬ ಮಾತಿನಂತೆ ಸ್ವಚ್ಛತೆ ಹಾಗೂ ಸುಂದರತೆ ನಮ್ಮ ಆತ್ಮಾಭಿಮಾನದ ಸಂಕೇತ. ವೈಯಕ್ತಿಕ ಶುಚಿತ್ವ ಸ್ವಾಭಿಮಾನದ ಸಂಕೇತ. ಮಂಡ್ಯ ಜಿಲ್ಲೆಯ ಎಲ್ಲೆಡೆ ಸ್ವಚ್ಛ ಪರಿಸರ ನಿರ್ಮಾಣದ ಹೆಗ್ಗುರಿಯನ್ನು ಇಟ್ಟುಕೊಂಡು 'ನಿರ್ಮಲ ಭಾರತ ಅಭಿಯಾನ'ವನ್ನು ಒಂದು ಆಂದೋಲನದ ಮಾದರಿಯಲ್ಲಿ ಕಾರ್ಯಗತಗೊಳಿಸಲು ಮಂಡ್ಯ ಜಿಲ್ಲಾ ಪಂಚಾಯತ್ ಕಾರ್ಯೋನ್ಮುಖವಾಗಿದೆ.


ಇದರ ಅಂಗವಾಗಿ ಜುಲೈ 7, 2014ರಂದು ಮಂಡ್ಯ ತಾಲ್ಲೂಕಿನ ದೊಡ್ಡ ಗ್ರಾಮಗಳಲ್ಲಿ ಒಂದಾದ 'ಕೀಲಾರ' ಗ್ರಾಮದಲ್ಲಿ **'ಸ್ವಾಭಿಮಾನಕ್ಕಾಗಿ ಸ್ವಚ್ಛತೆ'** ಎಂಬ ಘೋಷ ವಾಕ್ಯದೊಂದಿಗೆ ಜಿಲ್ಲೆಯ ಪ್ರತೀ ಗ್ರಾಮದಲ್ಲಿ ಎರಡು ಶೌಚಾಲಯ ನಿರ್ಮಿಸಿ, ಉದ್ಘಾಟಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮವನ್ನು ಸಾಂಕೇತಿಕವಾಗಿ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಮಾನ್ಯ ಸಚಿವರಾದ ಎಚ್.ಕೆ.ಪಾಟೀಲರವರು ಉದ್ಘಾಟಿಸಿದರು. ನಂತರ ಅವರು ಮಾತನಾಡಿ ರಾಜ್ಯವನ್ನು 'ಬಯಲು ಬಹಿರ್ದೆಸೆ ಮುಕ್ತಗೊಳಿಸಲು ಕಡ್ಡಾಯವಾಗಿ ಪ್ರತೀ ಮನೆಗೊಂದು ಶೌಚಾಲಯ ನಿರ್ಮಾಣ ಮಾಡಬೇಕು. ಗೌರವದಿಂದ ಬದುಕಲು ವಿಶೇಷವಾಗಿ ಮಹಿಳೆಯರು ಸ್ವಾಭಿಮಾನ, ಮರ್ಯಾದೆಯಿಂದ ಬದುಕಲು ಪ್ರತಿ ಮನೆಯಲ್ಲಿಯೂ ಶೌಚಾಲಯ ಇರುವುದು ಅನಿವಾರ್ಯವಾಗಿದೆ. ಇದು ಕಷ್ಟದ ಕೆಲಸವಲ್ಲ. ಶ್ರದ್ಧೆ ಹಾಗೂ ಬದ್ಧತೆ ಇರಬೇಕು. ನೈರ್ಮಲ್ಯ ರಕ್ಷಿಸಿ ಆರೋಗ್ಯವಂತೆ ಸ್ವಚ್ಛ ಪರಿಸರ ನಿರ್ಮಿಸಿ' ಎಂದು ಕರೆ ನೀಡಿದರು.




ಮಂಡ್ಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಮತಿ ರೋಹಿಣಿ ಸಿಂಧೂರಿ ಅವರು ಪ್ರಾಸ್ತಾವಿಕ ಮಾತುಗಳನ್ನಾಡಿ ಮಂಡ್ಯ ಜಿಲ್ಲೆಯಲ್ಲಿ ನಿರ್ಮಲ ಭಾರತ ಅಭಿಯಾನದ ಬಗ್ಗೆ ಕೈಗೊಂಡಿರುವ ಕಾರ್ಯಕ್ರಮಗಳ ವಿವರಣೆಯನ್ನು ನೀಡುತ್ತಾ ಪ್ರಸಕ್ತ ಸಾಲಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ 1 ಲಕ್ಷ ಶೌಚಾಲಯ ನಿರ್ಮಿಸುವ ಗುರಿ ಇಟ್ಟುಕೊಳ್ಳಲಾಗಿದ್ದು, ಪೂರಕವಾಗಿ ಜುಲೈ ಮೊದಲ ವಾರದಲ್ಲಿ ಜಿಲ್ಲೆಯ ಎಲ್ಲಾ ಗ್ರಾಮಗಳಲ್ಲಿ ತಲಾ 2 ಶೌಚಾಲಯಗಳನ್ನು ನಿರ್ಮಿಸಿ ಮೊದಲ ವಾರದ ಕೊನೆಯ ದಿನವಾದ ಜುಲೈ 7 ರಂದು ಈ ಶೌಚಾಲಯಗಳನ್ನು ಸಾಂಕೇತಿಕವಾಗಿ ಉದ್ಘಾಟಿಸುವ ಕಾರ್ಯಕ್ರಮದ ಬಗ್ಗೆ ತಿಳಿಸಿದರು. ಈ ಕೆಲಸಕ್ಕೆ ಎಲ್ಲರ ಸಹಕಾರ ಅಗತ್ಯವಾಗಿದೆ ಎಂದು ತಿಳಿಸಿದರು.

ಮಂಡ್ಯ ಸಂಸದ ಸಿ.ಎನ್.ಪುಟ್ಟರಾಜು, ಜಿಲ್ಲಾಧಿಕಾರಿ ಡಾ||ಎಂ.ಎನ್.ಅಜಯ್ ನಾಗಭೂಷಣ್, ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಮಂಜುಳ ಪರಮೇಶ್, ಹಲವು ಜನಪ್ರತಿನಿಧಿಗಳು, ಅಧಿಕಾರಿಗಳು, ಸಂಘ ಸಂಸ್ಥೆಗಳ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು. ಜಾನಪದ ಕಲಾವಿದ ಹುರುಗಲವಾಡಿ ರಾಮಯ್ಯ ಮತ್ತು ತಂಡದವರು ಶುಚಿತ್ವ ಮತ್ತು ನೈರ್ಮಲ್ಯ ಕುರಿತ ಗೀತೆಗಳನ್ನು ಕಾರ್ಯಕ್ರಮದಲ್ಲಿ ಪ್ರಸ್ತುತಪಡಿಸಿ ನಿರ್ಮಲ ಭಾರತದತ್ತ ಜನತೆಗೆ ಅರಿವು ಮೂಡಿಸಲಾಯಿತು.





ಶ್ರೀ/ಶ್ರೀಮತಿ ----------------

ಮಾನ್ಯರೇ,

**ನಿರ್ಮಲ ಭಾರತ್ ಅಭಿಯಾನವು** ಕೇಂದ್ರ ಸರ್ಕಾರದ ಯೋಜನೆಯಾಗಿದ್ದು ರಾಜ್ಯ ಸರ್ಕಾರದ ಸಹಯೋಗದೊಂದಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಇದು ರಾಜ್ಯದಲ್ಲಿ ಅನುಷ್ಠಾನಗೊಳ್ಳುತ್ತಿದೆ.

ಈ ಯೋಜನೆಯ ಮುಖ್ಯ ಉದ್ದೇಶ ನಾಡನ್ನು **"ಬಯಲು ಬಹಿರ್ದೆಸೆ ಮುಕ್ತ"** ಗೊಳಿಸುವುದು. ಅದಕ್ಕಾಗಿ **"ಪ್ರತಿ ಮನೆಗೊಂದು ಶೌಚಾಲಯ"** ನಿರ್ಮಾಣ ಮಾಡುವುದಾಗಿದೆ. ಒಂದು ಸಮಾಜ ಅತ್ಯಂತ ಕಡ್ಡಾಯವಾಗಿ ಗೌರವದಿಂದ ಬದುಕಲು, ಅದರಲ್ಲಿಯೂ ವಿಶೇಷವಾಗಿ ಮಹಿಳೆಯರು ಸ್ವಾಭಿಮಾನ, ಮರ್ಯಾದೆಯಿಂದ ಬದುಕಲು ಪ್ರತಿ ಮನೆಗೊಂದು ಶೌಚಾಲಯ ನಿರ್ಮಾಣ ಮಾಡುವುದು ಅತ್ಯಂತ ಅವಶ್ಯ ಹಾಗೂ ಅನಿವಾರ್ಯವಾಗಿದೆಯೆಂದು ನಿವೇದಿಸುತ್ತೇವೆ.

ನಮ್ಮ ಮಹಿಳೆಯರು ಕತ್ತಲಿಗಾಗಿ ಕಾಯುತ್ತ, ಬಹಿರ್ದೆಸೆಗೆ ಹೋಗದೆ ಬಳಲುತ್ತ, ಅಸಹನೀಯ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಅವರ ಬದುಕಿನಲ್ಲಿ ನೆಮ್ಮದಿಯ ಗಾಳಿ ಬೀಸುವಂತೆ ಮಾಡುವುದಕ್ಕೆ ಏಕೈಕ ಪರಿಹಾರವೆಂದರೆ **"ಮನೆಗೊಂದು ಶೌಚಾಲಯ"**ದ ವ್ಯವಸ್ಥೆ ಕಲ್ಪಿಸುವುದು. ಇದು ಕಷ್ಟದ ಕೆಲಸವಲ್ಲ, ಇದು **"ಶ್ರದ್ಧೆ ಹಾಗೂ ಬದ್ಧತೆ"**ಯನ್ನು ಅಪೇಕ್ಷಿಸುತ್ತದೆ. ನಮ್ಮ ರಾಜ್ಯದಲ್ಲಿ ಐವತ್ತು ಲಕ್ಷ ಕುಟುಂಬಗಳು ಶೌಚಾಲಯ ಹೊಂದಿರುವುದಿಲ್ಲ. ಈ ಕುಟುಂಬದ ಸದಸ್ಯರೆಲ್ಲ ಬೀದಿ ಬೀದಿಯಲ್ಲಿ ಬಾಧೆ ತೀರಿಸಿಕೊಳ್ಳುತ್ತಾರೆ. ಇದರಿಂದಾಗಿ ಪರಿಸರ ನೈರ್ಮಲ್ಯ ಹಾಳಾಗಿ ರೋಗಗಳು ಹಬ್ಬುತ್ತವೆ. **"ನೈರ್ಮಲ್ಯ ಎಲ್ಲಿಲ್ಲವೋ ಅಲ್ಲಿ ಆರೋಗ್ಯವೂ ಇರುವುದಿಲ್ಲ"**. ಜೊತೆಗೆ ನಮ್ಮ ತಾಯಂದಿರ ಗೌರವ, ಘನತೆ ಇಲ್ಲದಂತಾಗಿ, ನಾವು ಸುಧಾರಿತ ಆಧುನಿಕ ಸಮಾಜವೆನ್ನಿಸಿಕೊಳ್ಳಲು ಸಾಧ್ಯವಿಲ್ಲ.

ರಾಜ್ಯದಲ್ಲಿ ಪಂಚಾಯತ್ **ರಾಜ್ ವ್ಯವಸ್ಥೆಯಲ್ಲಿ 95 ಸಾವಿರ ಚುನಾಯಿತ ಪ್ರತಿನಿಧಿಗಳಿದ್ದು**, ತಾವೆಲ್ಲಾ ಜನರಿಂದ ಆಯ್ಕೆಯಾದ ಜನನಾಯಕರು. ತಾವು ಪ್ರಭಾವಶಾಲಿಗಳು. ತಮ್ಮ ಮಾತು, ಸಲಹೆ, ಸೂಚನೆಗಳಿಗೆ ಜನ ಮನ್ನಣೆ ನೀಡುತ್ತಾರೆ. ಆದ್ದರಿಂದ ಪ್ರತಿ ಗ್ರಾಮ ಪಂಚಾಯತಿ, ತಾಲೂಕ ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಯ ಚುನಾಯಿತ ಪ್ರತಿನಿಧಿಗಳು ತಮ್ಮ ಪ್ರಭಾವ ವಲಯದಲ್ಲಿ ಕೇವಲ 60 ಕುಟುಂಬಗಳ ಮನವೊಲಿಸಿದರೆ **"ನಿರ್ಮಲ ಭಾರತ್ ಅಭಿಯಾನ"** ಪೂರ್ಣ ಯಶಸ್ವಿಯಾಗುತ್ತದೆ. ಸಾರ್ವಜನಿಕ ನೈರ್ಮಲ್ಯ ಉತ್ತಮಗೊಂಡು, ಆರೋಗ್ಯ ಪರಿಸರ ನಿರ್ಮಾಣವಾಗುವುದರಲ್ಲಿ ಯಾವ ಸಂದೇಹವಿಲ್ಲ ಎಂದು ಬಲವಾಗಿ ನಂಬಿರುತ್ತೇವೆ.

ಈ ಕೆಲಸ ಒಂದೇ ವರ್ಷ, ಒಂದೇ ಪ್ರಯತ್ನದಲ್ಲಿ ಆಗಲಾರದು. ಮುಂದಿನ ನಾಲ್ಕು ವರ್ಷಗಳಲ್ಲಿ, ಪ್ರತಿ ವರ್ಷಕ್ಕೆ ಕನಿಷ್ಠ 10-15 ಕುಟುಂಬಗಳನ್ನು ಮನವೊಲಿಸಿ, ಸರ್ಕಾರ ನೀಡುವ ಎಲ್ಲಾ ಸೌಲಭ್ಯಗಳನ್ನು ಬಳಸಿಕೊಂಡು, ಪ್ರತಿ ಮನೆಗೊಂದು ಶೌಚಾಲಯ ನಿರ್ಮಾಣಮಾಡಬೇಕೆನ್ನುವ ಮಹಾನ್ ಗುರಿ ಸಾಧನೆಗೆ ತಾವು ಸರ್ಕಾರದೊಂದಿಗೆ ಕೈಜೋಡಿಸುವುದರ ಮೂಲಕ, ನಮ್ಮ ತಾಯಂದಿರ ಗೌರವ ಕಾಪಾಡಿ, ಸಾರ್ವಜನಿಕ ನೈರ್ಮಲ್ಯ ರಕ್ಷಿಸಿ, ಆರೋಗ್ಯವಂತ ಸ್ವಚ್ಛ ಪರಿಸರ ನಿರ್ಮಿಸಿ, ಬಲಿಷ್ಠ ನಾಡನ್ನು ಕಟ್ಟಲು, ತಾವು ಸಂಕಲ್ಪ ಮಾಡುವಂತೆ ಅತ್ಯಂತ ಕಳಕಳಿಯಿಂದ ಕೋರುತ್ತೇವೆ.

(ಸಿದ್ದರಾಮಯ್ಯ)
ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳು

(ಎಚ್.ಕೆ. ಪಾಟೀಲ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಮಾನ್ಯ ಸಚಿವರು
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಗೆ ಮತ್ತು ಪಂಚಾಯತ್ ರಾಜ್ ಚುನಾಯಿತ ಪ್ರತಿನಿಧಿಗಳಿಗೆ
ನಿರ್ಮಲ ಭಾರತ ಅಭಿಯಾನವನ್ನು ಸಾಕಾರಗೊಳಿಸುವ ಬಗ್ಗೆ ಈಗಾಗಲೆ ಬರೆದ ಪತ್ರ.



## ಮಂಡ್ಯ ಜಿಲ್ಲೆಯಲ್ಲಿ ನಿರ್ಮಲ ಭಾರತ ಅಭಿಯಾನ; ಯೋಜನೆಯ ಪ್ರಗತಿ.

ಜಿಲ್ಲೆಯಲ್ಲಿ ಈಗಾಗಲೇ ನಿರ್ಮಲ ಭಾರತ ಅಭಿಯಾನ ಯೋಜನೆಯಡಿ ಶೌಚಾಲಯ ಹೊಂದಿರುವ ಹಾಗೂ ಶೌಚಾಲಯ ಹೊಂದಿರದ ಕುಟುಂಬಗಳನ್ನು ಗುರುತಿಸಲು ಬೇಸ್‌ಲೈನ್ ಸರ್ವೆ ನಡೆಸಲಾಗಿದೆ. ಈ ಪ್ರಕಾರ ಜಿಲ್ಲೆಯಲ್ಲಿ ಒಟ್ಟು 374445 ಕುಟುಂಬಗಳಿವೆ. ಇವುಗಳ ಪೈಕಿ 123156 ಕುಟುಂಬಗಳು ಮಾತ್ರ ಶೌಚಾಲಯ ಹೊಂದಿದೆ. ಇನ್ನುಳಿದ 251029 ಕುಟುಂಬಗಳಲ್ಲಿ ಶೌಚಾಲಯವಿಲ್ಲ. ಕಳೆದ ಆರ್ಥಿಕ ವರ್ಷದಲ್ಲಿ 17033 ಕುಟುಂಬಗಳು ಮಾತ್ರ ಶೌಚಾಲಯ ನಿರ್ಮಿಸಿಕೊಂಡಿದೆ. ಇನ್ನೂ 233966 ಕುಟುಂಬಗಳಲ್ಲಿ ಶೌಚಾಲಯ ಇರುವುದಿಲ್ಲ. ಪ್ರಾಥಮಿಕವಾಗಿ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳ ಸಭೆ ಕರೆದು ಎಲ್ಲಾ ತಾಲ್ಲೂಕುಗಳಿಗೂ ನಿರ್ಮಲ ಭಾರತ ಅಭಿಯಾನದ ಗುರಿಯನ್ನು ನಿಗದಿಪಡಿಸಲಾಗಿದೆ.

| ಕ್ರ.ಸಂ. | ತಾಲ್ಲೂಕಿನ ಹೆಸರು | 2014–15ನೇ ಸಾಲಿಗೆ ನಿಗಧಿಪಡಿಸಲಾದ ಗುರಿ |
|---|---|---|
| 1 | ಕೆ.ಆರ್.ಪೇಟೆ | 15000 |
| 2 | ಮದ್ದೂರು | 20000 |
| 3 | ಮಳವಳ್ಳಿ | 15000 |
| 4 | ಮಂಡ್ಯ | 15000 |
| 5 | ನಾಗಮಂಗಲ | 12000 |
| 6 | ಪಾಂಡವಪುರ | 10000 |
| 7 | ಶ್ರೀರಂಗಪಟ್ಟಣ | 15000 |
| | ಒಟ್ಟು | 102000 |

ಈ ಹಿನ್ನೆಲೆಯಲ್ಲಿ ಈ ವರ್ಷ 1 ಲಕ್ಷ ಶೌಚಾಲಯ ನಿರ್ಮಿಸುವ ಗುರಿ ಇಟ್ಟುಕೊಳ್ಳಲಾಗಿದೆ. ಅದಕ್ಕಾಗಿ ನಿರ್ಮಲ ಭಾರತ ಅಭಿಯಾನ ಯೋಜನೆಯಡಿ ಗ್ರಾಮೀಣ ಶೌಚಾಲಯಗಳ ನಿರ್ಮಾಣದ ವಿಶೇಷ ಆಂದೋಲನ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಬರುವ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಪ್ರತೀ ತಾಲ್ಲೂಕಿಗೆ ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಪ್ರತೀ ವಾರಕ್ಕೊಮ್ಮೆ ವೀಡಿಯೋ ಕಾನ್ಫಿರೆನ್ಸ್ ಮೂಲಕ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಪ್ರಗತಿ ಪರಿಶೀಲನೆ ನಡೆಸಲಾಗುತ್ತಿದೆ. ಜಿಲ್ಲೆಯ ಏಳೂ ತಾಲ್ಲೂಕುಗಳಿಗೂ 2014–15ನೇ ಸಾಲಿಗೆ ಶೌಚಾಲಯ ನಿರ್ಮಿಸಲು ಗುರಿ ನಿಗಧಿಪಡಿಸಲಾಗಿದೆ.

ಇದರ ಯಶಸ್ಸಿಗೆ ಕಳೆದ ಜೂನ್ ತಿಂಗಳ 18 ರಿಂದ 21ರ ವರೆಗೆ ವಿವಿಧ ತಾಲ್ಲೂಕುಗಳಲ್ಲಿ ಚುನಾಯಿತ ಪ್ರತಿನಿಧಿಗಳು ಸಂಘ/ಸಂಸ್ಥೆಗಳು, ಪ್ರತಿನಿಧಿಗಳು ಅಂಗನವಾಡಿ ಕಾರ್ಯಕರ್ತೆಯರು, ಪಿಡಿಒ ಹಾಗೂ ವಿವಿಧ ಅಧಿಕಾರಿಗಳ ಕಾರ್ಯಗಾರಗಳನ್ನು ನಡೆಸಿ ಸಜ್ಜುಗೊಳಿಸಲಾಗಿದೆ.



ಶೌಚಾಲಯ ನಿರ್ಮಿಸಿಕೊಂಡ ನಂತರ ಸಕಾಲದಲ್ಲಿ ಅನುದಾನವು ಫಲಾನುಭವಿಗೆ ದೊರೆಯಲು ಅವರ ಬ್ಯಾಂಕ್ ಖಾತೆಗೆ ಜಮಾವಣೆ

ಮಾಡಲಾಗುತ್ತಿದೆ. ಈ ನಿಟ್ಟಿನಲ್ಲಿ ಕಳೆದ ಜುಲೈ 16ರಂದು 'ಅನುದಾನ ಪಾವತಿ ಅಭಿಯಾನ'ಎಂಬ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಜಿಲ್ಲಾಮಟ್ಟದ ಅಧಿಕಾರಿಗಳು ಹಾಗೂ ತಾಲ್ಲೂಕು ನೋಡಲ್ ಅಧಿಕಾರಿಗಳು ಇದ್ದು ಶೌಚಾಲಯ ನಿರ್ಮಾಣದ ಪ್ರಗತಿಗಳನ್ನು ವೀಕ್ಷಿಸಿ, ಪಿಡಿಓಗಳಿಗೆ ಸಲಹೆ ಸೂಚನೆ ನೀಡಿದ್ದಾರೆ.

ಸೂಕ್ತ ಸ್ಥಳಾವಕಾಶ ಇರುವ ಹಾಗೂ ಜಾಗ ಸ್ವಂತದ್ದಾಗಿರುವ ಶಾಲಾ, ಕಾಲೇಜು ಹಾಗೂ ಅಂಗನವಾಡಿ ಕೇಂದ್ರಗಳಿಗೆ ಶೌಚಾಲಯ ನಿರ್ಮಿಸಿಕೊಳ್ಳಲು ಆಧ್ಯತೆ ನೀಡಲಾಗುತ್ತಿದೆ. ಗ್ರಾಮಗಳಲ್ಲಿ ವೈಯುಕ್ತಿಕ ಶೌಚಾಲಯ ನಿರ್ಮಿಸಿಕೊಳ್ಳಲು ಜಾಗ ಇಕ್ಕಟ್ಟಾಗಿದ್ದರೆ 'ಸಮುದಾಯ ಶೌಚಾಲಯ' ನಿರ್ಮಾಣಕ್ಕೆ ಸಲಹೆ ಮಾಡಲಾಗುತ್ತಿದೆ.

## ನೈರ್ಮಲ್ಯ ಕುರಿತು ಮಾನ್ಯ ವಸತಿ ಸಚಿವರಾದ ಡಾ|| ಅಂಬರೀಷ್ ಅವರ ಸಂದೇಶ



ಮಂಡ್ಯ ಜಿಲ್ಲೆಯ ನನ್ನ ಪ್ರೀತಿಯ ಬಂಧುಗಳೇ.... ನಿಮಗೆ ನನ್ನ ನಮಸ್ಕಾರ, ನಾನೂ ನಿಮ್ಮ ಅಭಿಮಾನದ ಅಂಬರೀಷ್ ಮಾತಾಡ್ತಾ ಇದ್ದೀನಿ. ನಿಮಗೆಲ್ಲ ಶುಭ ಹಾರೈಸುವ ಜೊತೆಗೆ ಮಂಡ್ಯ ಜಿಲ್ಲೆಯ ಗೌರವ ಮತ್ತು ಸ್ವಾಭಿಮಾನದ ರಕ್ಷಣೆಗೆ ನಿಮ್ಮ ಸಹಕಾರ ಕೋರುತ್ತಾ ಇದ್ದೀನಿ.

ಬಂಧುಗಳೇ, ನಮ್ಮ ಜಿಲ್ಲೆ ಸಕ್ಕರೆಯ ನಾಡು, ಭತ್ತ ಮತ್ತು ರಾಗಿಯ ಕಣಜ. ಇಡೀ ರಾಜ್ಯಕ್ಕೆ ಅನ್ನ ಮತ್ತು ಸಕ್ಕರೆ ನೀಡುವ ನಾವು ಸ್ವಚ್ಚತೆಯ ವಿಷಯದಲ್ಲಿ ಮಾತ್ರ ಹಿಂದುಳಿದಿದ್ದೇವೆ. ಸರ್ಕಾರದವರು ಹತ್ತು ಸಾವಿರದ ನೂರು ರೂಪಾಯಿ ಅನುದಾನ ಕೊಡುತ್ತಾ ಇದ್ರು ಶೌಚಾಲಯ ಕಟ್ಟಿಸಿಕೊಳ್ತಾ ಇಲ್ಲ. ನಮ್ಮ ಮನೆ ಹೆಣ್ಣು ಮಕ್ಕಳು ರಸ್ತೆ ಬದಿಯಲ್ಲಿ ಕುಳಿತು ಭಾದೆ ತೀರಿಸಿಕೊಳ್ಳುವ ದುಸ್ಥಿತಿ ಇದೆ. ನಮ್ಮ ಹೆಣ್ಣು ಮಕ್ಕಳು ಈ ಅವಮಾನವನ್ನು ಎಷ್ಟು ದಿನ ಅಂತ ಸಹಿಸಿಕೊಳ್ಳಬೇಕು. ಇದು ನಮ್ಮ ಜಿಲ್ಲೆಗೆ ನಾಚಿಕೆ ಮತ್ತು ಅಪಮಾನದ ಸಂಗತಿ.

ಇದು ನಮ್ಮ ಮನೆಯ ಹೆಣ್ಣು ಮಕ್ಕಳ ಗೌರವದ ಪ್ರಶ್ನೆ ಮಾತ್ರವಲ್ಲ, ನಮ್ಮ ಜನರ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತದೆ. ಸ್ವಚ್ಚತೆಗೂ ಆರೋಗ್ಯಕ್ಕೂ ಸಂಬಂಧವಿದೆ ಅನ್ನೋ ವಿಷಯ ನಿಮಗೆ ತಿಳಿದಿದೆ. ಮಂಡ್ಯ ಜಿಲ್ಲೆಯ ಜನ ಸ್ವಾಭಿಮಾನಿಗಳು, ಸ್ವಾಭಿಮಾನ ಉಳಿಸಿಕೊಳ್ಳುವುದಕ್ಕಾದರೂ ಶೌಚಾಲಯ ನಿರ್ಮಿಸಿಕೊಳ್ಳೋಣ. ಜಿಲ್ಲೆಯ ಪ್ರತೀ ಮನೆಯಲ್ಲಿಯೂ ಶೌಚಾಲಯ ನಿರ್ಮಿಸಿಕೊಳ್ಳಲು ಜನರನ್ನು ಹುರಿದುಂಬಿಸಬೇಕಾಗಿದೆ. ಮಕ್ಕಳು ಶಾಲೆ – ಅಂಗನವಾಡಿಗಳಲ್ಲಿ ಶೌಚಾಲಯ ಬಳಸುವಂತೆ ರೂಢಿಸಬೇಕಾಗಿದೆ. ಜಿಲ್ಲೆಯ ಪ್ರತೀ ಹಳ್ಳಿಯ ಸ್ವಚ್ಚತೆಯ ವ್ಯವಸ್ಥೆಯನ್ನು ಸುಧಾರಿಸಬೇಕಿದೆ.

ಬನ್ನಿ ಬಾಂಧವರೇ... ಮಂಡ್ಯ ಜಿಲ್ಲೆಯನ್ನು ನಿರ್ಮಲ ಜಿಲ್ಲೆಯನ್ನಾಗಿ ಮಾಡುವ ಕಾಯಕದಲ್ಲಿ ಕೈಜೋಡಿಸಿ.

## ಸಕ್ಕರೆಯ ನಾಡಲ್ಲಿ ನೈರ್ಮಲ್ಯದ ನಗೆ ಹರಿಸೋಣ

ನಮಸ್ಕಾರ ನಾನು ನಿಮ್ಮ ಅಂಬರೀಷ್ ಮಾತಾಡ್ತಾ ಇದ್ದೀನಿ, ನೋಡಿ ನಮ್ಮ ಆರೋಗ್ಯ ನಮ್ಮ ಕೈಯಲ್ಲಿ, ಸರ್ಕಾರ ಕೊಡೋ 10100 ರೂಪಾಯಿ ಬಳಸಿಕೊಂಡು ಶೌಚಾಲಯ ಕಟ್ಟಿಸಿಕೊಂಡು ಉಪಯೋಗಿಸಿ, ನಮ್ಮನೆ ಹೆಣ್ಣು ಮಕ್ಕಳ ಗೌರವ ಕಾಪಾಡಿ, ನೀವೆಲ್ಲರೂ ಈ ನಿಮ್ಮ ಅಂಬರೀಷ್‌ನ ಮಾತನ್ನು ನಡೆಸಿಕೊಡುತ್ತೀರಿ ಅಂತ ಭಾವಿಸುತ್ತೇನೆ.

ಇದು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಚಿತ್ರ ನಟ ಅಂಬರೀಶ್ ಅವರ ಮಾತುಗಳು. ನಿರ್ಮಲ ಭಾರತ ಅಭಿಯಾನದ ಅಂಗವಾಗಿ ಜಿಲ್ಲೆಯಲ್ಲಿ ಶೌಚಾಲಯ ನಿರ್ಮಾಣದ ವಿಶೇಷ ಆಂದೋಲಯ ನಡೆಯುತ್ತಿರುವ ಹಿನ್ನೆಲೆಯಲ್ಲಿ ಮಾನ್ಯ ಅಂಬರೀಶ್ ಅವರ ಧ್ವನಿಯನ್ನು ರೆಕಾರ್ಡ್ ಮಾಡಿಕೊಂಡು ಆಟೋಗಳ ಮೂಲಕ ಹಳ್ಳಿ ಹಳ್ಳಿಗಳಲ್ಲಿ ಪ್ರಚಾರ ಮಾಡಲಾಗುತ್ತಿದೆ.

ಸಾಗರೋಪಾದಿಯಲ್ಲಿ ನಿರ್ಮಲ ಭಾರತ ಅಭಿಯಾನ ಯೋಜನೆಯ ಯಶಸ್ಸಿಗೆ ಸ್ವಯಂ ಸೇವಕರ ದಂಡೇ ಸಹಕರಿಸುತ್ತಿದೆ. ಇಲಾಖೆಗಳ ಬೇಧ ಭಾವ ಇಲ್ಲದೇ ಸರ್ವ ಅಧಿಕಾರಿಗಳು ಶೌಚಾಲಯಯುಕ್ತ ಜಿಲ್ಲೆಯ ನಿರ್ಮಾಣದ ಪಣತೊಟ್ಟಿದ್ದಾರೆ.

## ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳೆ, ಗಮನಿಸಿ . . . .

**"ಅಭಿವೃದ್ಧಿ ಅಧಿಕಾರಿಗಳ ಅಂಗಳದಿಂದ"** . . . . .

ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳೆ, ಸ್ಥಳೀಯ ವಿಧಾನಸಭೆಗಳೆಂದೇ ಕರೆಯಲ್ಪಡುವ ಗ್ರಾಮ ಪಂಚಾಯತ್‌ಗಳಲ್ಲಿ ತಾವುಗಳು ನಿರ್ವಹಿಸುವ ಅಭಿವೃದ್ಧಿಪರ ಕಾರ್ಯಚಟುವಟಿಕೆಗಳು ಮತ್ತು ಒದಗಿಸುವ ಕಾಮಗಾರಿಗಳ ಮಾಹಿತಿ, ಸ್ಥಳೀಯ ಮಟ್ಟದಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಂಡ ಅಭಿವೃದ್ಧಿ ಯೋಜನೆಗಳು, ಮುಂತಾದವುಗಳ ಫಲಶೃತಿಯಿಂದುಂಟಾದ ಯಶೋಗಾಥೆಗಳು ಹಾಗೂ ಸ್ಥಳೀಯ ಸಾಧಕರ ಬಗ್ಗೆ ಅಗತ್ಯ ಮಾಹಿತಿಯನ್ನು ವರ್ಣ ಛಾಯಾಚಿತ್ರಗಳೊಂದಿಗೆ **"ಕರ್ನಾಟಕ ವಿಕಾಸ"** ಪತ್ರಿಕೆಗೆ ಪ್ರಕಟಣೆಗಾಗಿ ಕಳುಹಿಸ ಬಹುದಾಗಿದೆ.

**'ಅಭಿವೃದ್ಧಿ ಅಧಿಕಾರಿಗಳ ಅಂಗಳದಿಂದ'** ಎಂಬ ಶೀರ್ಷಿಕೆಯಡಿ ನೀವುಗಳು ನೀಡುವ ಅಭಿವೃದ್ಧಿಪರ ಮಾಹಿತಿಯನ್ನು **"ಕರ್ನಾಟಕ ವಿಕಾಸ"** ಪತ್ರಿಕೆಯಲ್ಲಿ ಪ್ರಕಟಗೊಳಿಸಲು ತೀರ್ಮಾನಿಸಲಾಗಿದೆ. ಆದ್ದರಿಂದ ತಾವುಗಳು ನಿಡುವ ಮಾಹಿತಿಯನ್ನು ತಮ್ಮ ಸಂಪೂರ್ಣ ಅಂಚೆ ವಿಳಾಸದೊಂದಿಗೆ ಹಾರ್ಡ್ ಕಾಪಿಯೊಂದನ್ನು ರವಾನಿಸಿ ಸಾಫ್ಟ್ ಕಾಪಿಯನ್ನು ಕನ್ನಡ ನುಡಿ ತಂತ್ರಾಂಶ ಬಳಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಲು ಕೋರಿದೆ.

ಸಂಪಾದಕರು, ಕರ್ನಾಟಕ ವಿಕಾಸ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1, ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವೀಧಿ ಬೆಂಗಳೂರು – 560 001.
ದೂರವಾಣಿ : 080–22353857 email : kvrdpr@gmail.com

– ಸಂಪಾದಕರು

ಯಶೋಗಾಥೆ

# ಗ್ರಾಮ ಸಭೆಗೆ ಹೊಸ ಭಾಷ್ಯ ಬರೆದ ಕಾವಳಮೂಡೂರು ಗ್ರಾಮ ಪಂಚಾಯತ್

* ಎನ್. ಶೀನಶೆಟ್ಟಿ

"ಕೇಂದ್ರದಲ್ಲಿ ಕುಳಿತು 20 ಜನರಿಂದ ನಿಜವಾದ ಪ್ರಜಾಪ್ರಭುತ್ವದ ಸಾಕ್ಷಾತ್‌ಕಾರ ಸಾಧ್ಯವಿಲ್ಲ. ಇದು ಕೆಳ ಹಂತದಿಂದ ಪ್ರತೀ ಗ್ರಾಮದ ಜನರ ಪ್ರಯತ್ನದಿಂದ ಸಾಧ್ಯವಾಗಬೇಕಾಗಿದೆ". (ಯಂಗ್ ಇಂಡಿಯಾ ಪತ್ರಿಕೆ, 18.01.1948)

– ಮಹಾತ್ಮ ಗಾಂಧೀಜಿ

ಯಶಸ್ವೀ ಗ್ರಾಮ ಸಭೆ ನಡೆಸಿ ಮಾದರಿಯೆನಿಸಿರುವ ದಕ್ಷಿಣ ಕನ್ನಡ ಜಿಲ್ಲೆಯ ಕಾವಳಮೂಡೂರು ಗ್ರಾಮ ಪಂಚಾಯತಿ.....

ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯಲ್ಲಿ ಪ್ರಜೆಗಳೇ ಪ್ರಭುಗಳು. ಗ್ರಾಮ ಪಂಚಾಯತ್ ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯ ಅಡಿಗಲ್ಲು. ಗ್ರಾಮ ಸಭೆ ಗ್ರಾಮ ಪಂಚಾಯತ್‌ನ ತಾಯಿ ಬೇರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ಅಧಿಕಾರವೇ ಅಂತಿಮ ಅಧಿಕಾರ. ಈ ದೃಷ್ಟಿಯಲ್ಲಿ ಗ್ರಾಮ ಸಭೆಗೆ ಸಾಂವಿಧಾನಿಕ, ಕಾನೂನು ಬದ್ಧ ಅಧಿಕಾರ ನೀಡಲಾಗಿದೆ. ಗ್ರಾಮ ಸಭೆಗಳೆಂದರೆ ಹಳ್ಳಿಯ ಜನರಿಗೆ ಬೇಕಾದ ವ್ಯವಸ್ಥೆಗಳ ಕುರಿತು ಜನರೇ ತೀರ್ಮಾನ ಮಾಡುವ ಸಭೆ. ಇದಕ್ಕಾಗಿಯೇ ಗ್ರಾಮ ಸಭೆಯನ್ನು ಹಳ್ಳಿಯ ವಿಧಾನ ಸಭೆಯೆಂದು ಕರೆಯಲಾಗುತ್ತದೆ. ಮತದಾರರ ಪಟ್ಟಿಯಲ್ಲಿರುವ ಗ್ರಾಮಸ್ಥರೆಲ್ಲರೂ ಗ್ರಾಮ ಸಭೆಯ ಸದಸ್ಯರಾಗಿರುತ್ತಾರೆ. ಗ್ರಾಮ ಸಭೆಯಲ್ಲಿ ಬಡತನ ನಿರ್ಮೂಲನೆ ಮತ್ತು ಸಾಮಾಜಿಕ ನ್ಯಾಯದೊಂದಿಗೆ ಉತ್ತಮ ಆಡಳಿತ ಮತ್ತು ಅಭಿವೃದ್ಧಿ ಸಾಧಿಸಲು ಬೇಕಾದ ತೀರ್ಮಾನಗಳನ್ನು ಕೈಗೊಳ್ಳಬಹುದು. ಸರಕಾರದ ಯೋಜನೆಗಳು ಮತ್ತು



* ಒಂಬುಡ್ಸ್‌ಮನ್, ಜಿಲ್ಲಾ ಪಂಚಾಯತ್ ದಕ್ಷಿಣ ಕನ್ನಡ ಜಿಲ್ಲೆ (ಮಂಗಳೂರು)

ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ, ಕಾರ್ಯ ಸಾಧನೆ, ಸವಾಲು, ಸಮಸ್ಯೆ, ಕುಂದು ಕೊರತೆಗಳು ಹಾಗೂ ಪರಿಹಾರೋಪಾಯಗಳ ಬಗ್ಗೆ ಜನರು, ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳೊಂದಿಗೆ ಪರಸ್ಪರ ಗೌರವ, ನಂಬಿಕೆ ಮತ್ತು ವಿಶ್ವಾಸದಿಂದ ಚರ್ಚಿಸುವ, ಸಮಾಲೋಚಿಸುವ ನಿರ್ಣಯಗಳನ್ನು ಅಂಗೀಕರಿಸುವ ಅಧಿಕಾರ ಗ್ರಾಮ ಸಭೆಗೆ ಇದೆ. ಹಿಂದಿನ ವರ್ಷದ ಕಾರ್ಯಸಾಧನೆ, ಮುಂದಿನ ವರ್ಷದ ಯೋಜನೆ, ಆದಾಯ, ಅನುದಾನಗಳ, ಖರ್ಚುವೆಚ್ಚಗಳ ಬಗ್ಗೆ ತಿಳಿಯುವ, ತಿಳಿಸುವ, ಸಲಹೆ ಸೂಚನೆಗಳನ್ನು ನೀಡುವ ಶಿಫಾರಸ್ಸುಗಳನ್ನು ಮಾಡುವ ಸರಕಾರದ ಸೌಲಭ್ಯಗಳಿಗೆ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವ ಅಧಿಕಾರ ಗ್ರಾಮ ಸಭೆಗೆ ಇದೆ.

ಭಾರತ ಸಂವಿಧಾನದ 73ನೇ ತಿದ್ದುಪಡಿಯಿಂದ ಗ್ರಾಮ ಸಭೆಗೆ ಸಂವಿಧಾನಾತ್ಮಕ ಮಹತ್ವ ದೊರತಿದೆ. ಅದರಂತೆ 6 ತಿಂಗಳಿಗೊಮ್ಮೆ ಕಾನೂನು ಬದ್ಧವಾಗಿ ನಡೆಯುವ ಗ್ರಾಮ ಸಭೆಯಲ್ಲಿ ಮತದಾರರು ತಪ್ಪದೇ ಭಾಗವಹಿಸಲೇಬೇಕು. ಗ್ರಾಮದ ಮತದಾರರು ಗ್ರಾಮ ಸಭೆಯಲ್ಲಿ ಸಮ ಭಾಗಿಗಳಾಗಿ ಗ್ರಾಮದ ಅಭಿವೃದ್ಧಿ ಆಗಿ ಸ್ವಯಂ ಪ್ರೇರಣೆಯಿಂದ ಪಾಲ್ಗೊಳ್ಳಬೇಕು. ಗ್ರಾಮ ಸಭೆ ಹಾಗೂ ಗ್ರಾಮ ಪಂಚಾಯತ್ ನಡುವಿನ ಸಂಬಂಧ ವಿಧಾನಸಭೆ ಹಾಗೂ ಸರಕಾರದ ಸಂಬಂಧ ದಂತಿರಬೇಕು.

ಆದರೆ ಈಗ ಕೆಲವು ಕಡೆಗಳಲ್ಲಿ ಗ್ರಾಮ ಸಭೆಗಳೆಂದರೆ ಗಲಾಟೆ ಸಭೆಗಳಂತಾಗಿರುವುದು ಕಂಡು ಬರುತ್ತದೆ. ಗ್ರಾಮ ಪಂಚಾಯತ್ ಸದಸ್ಯರು, ಅಧಿಕಾರಿಗಳು ಮತ್ತು ಕೆಲವೇ ವ್ಯಕ್ತಿಗಳ ನಡುವೆ ವಾಗ್ವಾದ, ತರಾಟೆ, ಆರೋಪ, ಪ್ರತ್ಯಾರೋಪಗಳ ಸುರಿಮಳೆಗೆ ಗ್ರಾಮ ಸಭೆಗಳು ವೇದಿಕೆಯಾಗುತ್ತಿರುವುದು ದುರದೃಷ್ಟಕರ ಸಂಗತಿಯಾಗಿದೆ.

ಆದರೆ ಇದಕ್ಕೆ ಅಪವಾದ ಎಂಬಂತೆ ಬಂಟ್ವಾಳ ತಾಲೂಕು ಕಾವಳಮೂಡೂರು ಗ್ರಾಮ ಪಂಚಾಯತ್‌ನ ಗ್ರಾಮ ಸಭೆಯು ಮಾದರಿ ಗ್ರಾಮ ನಿರ್ಮಾಣದ ಕಲ್ಪನೆಯೊಂದಿಗೆ ಉತ್ತಮ ಆಡಳಿತ, ಅಭಿವೃದ್ಧಿ ಕುರಿತು ಚರ್ಚೆ, ಸಂವಾದ, ಸಂಕಲ್ಪ ಮತ್ತು ಸಾಂಸ್ಕೃತಿ ಕಾರ್ಯಕ್ರಮಗಳ ಜೋಡಣೆಯೊಂದಿಗೆ ಹಳ್ಳಿಯ ವಿಧಾನ ಸಭೆಯಾಗಿ ಮತದಾರರ ಮಹಾ ಸಭೆಯಾಗಿ ನಡೆದು ಜಿಲ್ಲೆಯ ಗಮನ ಸೆಳೆದಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಪ್ರಥಮ ಎಂಬಂತೆ ಕಾವಳಮೂಡೂರು ಹಿರಿಯ ಪ್ರಾಥಮಿಕ ಶಾಲಾ ವಠಾರದಲ್ಲಿ ದಿನಾಂಕ 19.06.2014ರಂದು ನಡೆದ 2014–15ನೇ ಸಾಲಿನ ಪ್ರಥಮ ಹಂತದ ಮಾದರಿ ಗ್ರಾಮ ಸಭೆಯು ಹಲವಾರು ವಿಶಿಷ್ಟ, ವಿನೂತನ ಪ್ರಯೋಗ, ಪರಿವರ್ತನೆ, ಪ್ರದರ್ಶನ, ಸಂವಾದ, ಸಂಕಲ್ಪದೊಂದಿಗೆ ಗ್ರಾಮ ಸಭೆಯ ನೈಜ ರೂಪದ ದರ್ಶನವಾಗಿದೆ. ಮಾದರಿ ಗ್ರಾಮ ಸಭೆಯ ವೀಕ್ಷಣೆಗೆ ಜಿಲ್ಲೆಯ ಬೇರೆ ಬೇರೆ ಗ್ರಾಮ ಪಂಚಾಯತ್‌ಗಳ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು, ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ಕೂಡಾ ಆಗಮಿಸಿದ್ದರಿಂದ ಗ್ರಾಮ ಸಭೆ ಸಭಾಂಗಣವು ಜನರಿಂದ ತುಂಬಿ ತುಳುಕುವಂತಾಗಿತ್ತು.

**ಅಧಿಕಾರಿಗಳ ಗ್ರಾಮ ದರ್ಶನ :** ಗ್ರಾಮ ಸಭೆ ದಿನ ಬೆಳಿಗ್ಗೆ 9 ಗಂಟೆಗೆ ಗ್ರಾಮಕ್ಕೆ ಆಗಮಿಸಿದ್ದ ನರೇಗಾ ಒಂಬುಡ್ಸ್‌ಮನ್, ತಾಲೂಕು, ಗ್ರಾಮ ಮಟ್ಟದ ಅಧಿಕಾರಿಗಳು, ಮಾಧ್ಯಮದ ಪ್ರತಿನಿಧಿಗಳು, ಸಮಾಜ



ಕಾರ್ಯ ಸಂಸ್ಥೆ ಜನ ಶಿಕ್ಷಣ ಟ್ರಸ್ಟ್ ನಿರ್ದೇಶಕರು ಜಿಲ್ಲೆಯ ಮಾದರಿ ಶಾಲೆಯೆಂದೇ ಗುರುತಿಸಲ್ಪಟ್ಟ ಕೆದ್ದಳಿಕೆ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿದರು. ಈ ಶಾಲಾ ಜಮೀನಿನಲ್ಲಿ ನರೇಗಾ ಯೋಜನೆಯಡಿ ನಿರ್ವಹಿಸಿದ ಮಾದರಿ ಹಣ್ಣಿನ ತೋಟ ಹಾಗೂ ಶಾಲಾ ಸಸ್ಯ ಸಂಪತ್ತನ್ನು ವೀಕ್ಷಿಸಿದರು. ನಂತರ ನರೇಗಾದಡಿ ಕೈಗೆತ್ತಿಕೊಂಡ ರಸ್ತೆ ಬದಿಗಳಲ್ಲಿ ಸಾಲು ಮರ ಬೆಳೆಸುವ ಕಾಮಗಾರಿಯನ್ನು ಗಿಡ ನೆಡುವ ಮೂಲಕ ಆರಂಭಿಸಲಾಯಿತು. ಗ್ರಾಮ ಸಭೆಗೆ ಆಗಮಿಸಿದ ಪ್ರತಿಯೊಬ್ಬರೂ ಸಿಹಿ ತಿಂಡಿಯೊಂದಿಗಿನ ಉಪಾಹಾರ ಸ್ವೀಕರಿಸಿ ಗ್ರಾಮ ಸಭೆಯ ಸಭಾಂಗಣಕ್ಕೆ ಬಂದು ಆಸೀನರಾದರು.

**ಗ್ರಾಮ ಸಭಾ ಕಲಾಪ :** ಕಿಕ್ಕಿರಿದು ತುಂಬಿದ್ದ ಶಾಲಾ ಸಭಾಂಗಣದ ಗ್ರಾಮ ಸಭಾ ವೇದಿಕೆ ಏರಿದ ಕೆದ್ದಳಿಕೆ ಶಾಲಾ ಮಕ್ಕಳು ನೃತ್ಯದೊಂದಿಗೆ ಗ್ರಾಮ ಸಭೆಗೆ ಆಗಮಿಸಿದ ಸದಸ್ಯರು ಹಾಗೂ ಆಹ್ವಾನಿತರನ್ನು ಆತ್ಮೀಯವಾಗಿ ಸ್ವಾಗತಿಸಿದರು.



ಗ್ರಾಮ ಪಂಚಾಯತ್ ಅಧ್ಯಕ್ಷ ಶ್ರೀ ಯಾಕೂಬು ಸಾಹೇಬರ ಅಧ್ಯಕ್ಷತೆಯಲ್ಲಿ ಗ್ರಾಮ ಸಭೆ ಕಲಾಪವು ದೀಪ ಬೆಳಗಿಸಿ ಆರಂಭವಾಯಿತು. ವಾರ್ಷಿಕ ಪ್ರಗತಿ ವರದಿ ಹಾಗೂ ಲೆಕ್ಕ ಪತ್ರದ ಮಂಡನೆ ಬಳಿಕ ಇಲಾಖಾಧಿಕಾರಿಗಳು ಇಲಾಖಾವಾರು ಯೋಜನೆ, ಕಾರ್ಯಕ್ರಮ ಹಾಗೂ ಸವಲತ್ತುಗಳ ಬಗ್ಗೆ ಮಾಹಿತಿ ನೀಡಿದರು. ಗ್ರಾಮಸ್ಥರೊಂದಿಗೆ ಸಂವಾದ ನಡೆಸಿ ಪ್ರಶ್ನೆಗಳಿಗೆ ಉತ್ತರಿಸಿದರು. ಕುಂದು ಕೊರತೆಗಳನ್ನು ಆಲಿಸಿ ಪರಿಹಾರ ಕ್ರಮಗಳನ್ನು ಸೂಚಿಸಿದರು. ಮಹಾತ್ಮ ಗಾಂಧಿ ನರೇಗಾ ಮತ್ತು ಸರಕಾರದ ಇತರ ಯೋಜನೆಗಳ ಫಲಾನುಭವಿಗಳಾಗಿ ಬಾವಿಗಳನ್ನು ನಿರ್ಮಿಸಿ ಕೊಂಡಿರುವ, ತೋಟಗಾರಿಕೆ ಮತ್ತು ಜಮೀನು ಅಭಿವೃದ್ಧಿ ಪಡಿಸಿಕೊಂಡು ಪ್ರಗತಿ ಪಥದಲ್ಲಿರುವ ಫಲಾನುಭವಿಗಳ ಕುಟುಂಬಗಳ ಪರವಾಗಿ ಮಾತನಾಡಿದ ಕೆದ್ದಳಿಕೆಯ ಪರಿಶಿಷ್ಟ ಜಾತಿಯ ಶ್ರೀ ಉಮೇಶ್ ಮತ್ತು ಶ್ರೀಮತಿ ಉಮ್ಮ ನಲಿಕೆ ಅವರು ಸ್ವ ಅನುಭವಗಳನ್ನು ಹಂಚಿಕೊಂಡರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬಗಳ ಶ್ರೇಯೋಭಿವೃದ್ಧಿಗೆ ಗ್ರಾಮ ಪಂಚಾಯತ್ ಮಾಡಿದ ಕೆಲಸ, ನೀಡಿದ ಕೊಡುಗೆಗಳನ್ನು ಸ್ಮರಿಸಿಕೊಂಡರು. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನರೇಗಾ ಯೋಜನೆಯಡಿ ಈಗಾಗಲೇ 110 ಮನೆಗಳಿಗೆ ಬಾವಿಗಳನ್ನು ನಿರ್ಮಿಸಿರುವುದು, ಕಟ್ಟಡ ತೆರಿಗೆ, ನೀರಿನ ಕರ ವಸೂಲಿಯಲ್ಲಿ ಶೇಕಡಾ ನೂರರಷ್ಟು ಸಾಧನೆ ಮಾಡಿರುವುದು, ಸರಕಾರಕ್ಕೆ ಪಾವತಿಸಬೇಕಾದ ಲೈಬ್ರರಿ, ಶಿಕ್ಷಣ, ಆರೋಗ್ಯ, ಕಾರ್ಮಿಕ ಕಲ್ಯಾಣ ಸೆಸ್ ಕರಗಳನ್ನು ಪಾವತಿಸಿರುವುದು ಗ್ರಾಮ ಸಭೆಯ ಗಮನ ಸೆಳೆಯಿತು.

**ಅಧಿಕಾರಿಗಳ ಸಂಕಲ್ಪ – ಪ್ರಮಾಣ :** ಕಾವಳ ಮೂಡೂರನ್ನು ಭ್ರಷ್ಟಾಚಾರ ಮುಕ್ತ ಮಾದರಿ ಗ್ರಾಮ ಪಂಚಾಯತ್‌ನ್ನಾಗಿ ರೂಪಿಸುವ ಸಂಕಲ್ಪ ಹಾಗೂ ಭ್ರಷ್ಟಾಚಾರ ಅಳಿಸೋಣ, ಪ್ರಜಾಪ್ರಭುತ್ವ ಉಳಿಸೋಣ ಎಂಬ ಘೋಷಣೆಯೊಂದಿಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀ ಗಣಪತಿ ಮುಚ್ಚಿನ್ನಾಯ, ಕಾರ್ಯದರ್ಶಿ ಶ್ರೀಮತಿ ಪ್ರಭಾವತಿಯವರು ಮಾಡಿದ ಪ್ರಮಾಣ ವಚನದಲ್ಲಿ ಅಂತರಂಗ ಮತ್ತು ಬಹಿರಂಗ ಶುದ್ಧತೆಯನ್ನು ಕಾಪಾಡಿಕೊಂಡು ಲಂಚ ಕೊಡುವುದು ಅಪರಾಧ, ಸ್ವೀಕರಿಸುವುದು ಮಹಾ ಅಪರಾಧ ಎಂಬುದನ್ನು ಅರ್ಥೈಯಿಸಿಕೊಂಡು ಗ್ರಾಮ ಪಂಚಾಯತ್‌ನ ಮೂಲಕ ಮಾಡುವ ಜನರ ಸೇವೆಯನ್ನು ದೇವರ ಸೇವೆ ಎಂದು

ನಂಬಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವದೊಂದಿಗೆ ದಕ್ಷತೆಯಿಂದ ಕರ್ತವ್ಯ ನಿರ್ವಹಿಸಿ ಭ್ರಷ್ಟಾಚಾರ ಮುಕ್ತ ವ್ಯಕ್ತಿಗಳಾಗಿ ಮಾದರಿ ಗ್ರಾಮ ನಿರ್ಮಾಣಕ್ಕೆ ನಿರಂತರವಾಗಿ ಶ್ರಮಿಸುವುದಾಗಿ ಆತ್ಮಸಾಕ್ಷಿಯಾಗಿ ಪ್ರಮಾಣ ಮಾಡಿದ ಪ್ರಮಾಣ ಪತ್ರವನ್ನು ಒಂಬುಡ್ಸ್‌ಮನ್‌ಗೆ ಸಲ್ಲಿಸಿದರು. ಇದಕ್ಕೆ ಪ್ರತಿಯಾಗಿ ಅವರಿಬ್ಬರಿಗೂ ಮಹಾತ್ಮ ಗಾಂಧೀಜಿಯವರ ಆತ್ಮಕತೆ ನನ್ನ ಸತ್ಯಾನ್ವೇಷಣೆ ಪುಸ್ತಕವನ್ನು ನೀಡಿ ಅಭಿನಂದನೆ ಸಲ್ಲಿಸಲಾಯಿತು.

**ಗ್ರಾಮಸ್ಥರ ಸಂಕಲ್ಪ :** ಕಾವಳಮೂಡೂರನ್ನು ಸಂಪೂರ್ಣ ಸಾಕ್ಷರ, ಸ್ವಚ್ಛ, ಸಮೃದ್ಧ, ತ್ಯಾಜ್ಯ ಮುಕ್ತ, ವ್ಯಾಜ್ಯ ಮುಕ್ತ, ಭ್ರಷ್ಟಾಚಾರ ರಹಿತ ಮಾದರಿ ಗ್ರಾಮವನ್ನಾಗಿ ರೂಪಿಸಲು ಗ್ರಾಮಸ್ಥರು ಸಂಕಲ್ಪ ಮಾಡಿದರು. ಮುಂದಿನ ಗ್ರಾಮ ಸಭೆಗೆ ಮೊದಲು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿನ ಎಲ್ಲಾ ಶಾಲೆ, ಅಂಗನವಾಡಿ, ಮದರಸಗಳ ಜಮೀನುಗಳಲ್ಲಿ ಕೆದ್ದಳಿಕೆ ಶಾಲಾ ತೋಟದ ಮಾದರಿಯಲ್ಲಿ ಹಣ್ಣಿನ ತೋಟಗಳನ್ನು ನಿರ್ಮಿಸುವುದು, ಪಂಚಾಯತ್ ವ್ಯಾಪ್ತಿಯಲ್ಲಿರುವ 1110 ಮನೆಗಳ ಆವರಣಗಳಲ್ಲಿಯೂ ಕನಿಷ್ಟ ಒಂದೆರಡು ಹಣ್ಣಿನ ಗಿಡಗಳನ್ನು ನೆಡುವ ಮೂಲಕ ಹಸಿರು ಗ್ರಾಮ ನಿರ್ಮಾಣದ ಬಗ್ಗೆ ಗ್ರಾಮ ಸಭೆಯಲ್ಲಿ ದಿಟ್ಟ ತೀರ್ಮಾನವನ್ನು ಮಾಡಲಾಯಿತು.



ಗ್ರಾಮ ಸಭೆ ಅಧಿಕಾರಿಗಳ, ಜನಪ್ರತಿನಿಧಿಗಳ ಭಾಷಣದ ಸಭೆಯಾಗದೆ ಗ್ರಾಮದ ಜನರು ಮಾತನಾಡುವ ಸಭೆಯಾಗಿ ಸಂಪೂರ್ಣ ಸಾಕ್ಷರ, ಸಂಪೂರ್ಣ ಸ್ವಚ್ಛ, ಸಮೃದ್ಧ, ಸ್ವಾವಲಂಬೀ, ಭ್ರಷ್ಟಾಚಾರ ಮುಕ್ತ ಮಾದರಿ ಗ್ರಾಮದ ನಿರ್ಮಾಣಕ್ಕೆ ಸಂಕಲ್ಪ ತೊಡುವ ಮೂಲಕ ಕಾವಳಮೂಡೂರು ಗ್ರಾಮ ಸಭೆಯು ನಿಜ ಅರ್ಥದಲ್ಲಿ ಹಳ್ಳಿಯ ವಿಧಾನಸಭೆಯಾಗಿ ಮತದಾರರ ಮಹಾಸಭೆಯಾಗಿ ನಡೆದಿರುವುದು ಪ್ರಗತಿ ಮತ್ತು ಪರಿವರ್ತನೆಯ ಸಂಕೇತವಾಗಿದೆ. ಗ್ರಾಮ ಪಂಚಾಯತ್‌ನ ತಾಯಿ ಬೇರಿನಂತಿರುವ ಗ್ರಾಮ ಸಭೆಗೆ ಧಕ್ಕೆಯಾದರೆ ಇಡೀ ಗ್ರಾಮಕ್ಕೆ ತೊಂದರೆ ಎಂಬುದನ್ನು ಕಾವಳಮೂಡೂರು ಗ್ರಾಮಸ್ಥರು ಅರ್ಥೈಸಿಕೊಂಡಿದ್ದಾರೆ. ಕಾವಳಮೂಡೂರು ಗ್ರಾಮ ಸಭೆ ನಿಜರೂಪ ಪಡೆದಿದೆ. ಮುಂದಿನ ದಿನಗಳಲ್ಲಿ ಗ್ರಾಮ ಸಭೆಯ ಪೂರ್ಣ ರೂಪ ಗೋಚರಿಸಲಿದೆ.

**ಸಾಂಸ್ಕೃತಿಕ ದರ್ಶನ :** ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮ ಸಭೆಗಳ ಇತಿಹಾಸದಲ್ಲಿ ಪ್ರಪ್ರಥಮ ಬಾರಿಗೆ ಗ್ರಾಮ ಸಭೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಜೋಡಣೆ ಮಾಡಲಾಗಿತ್ತು. ರಾಜ್ಯ ಪ್ರಶಸ್ತಿ ಪುರಸ್ಕೃತ ಕೆದ್ದಳಿಕೆ ದ.ಕ.ಜಿ.ಪಂ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಶ್ರೀ ರಮೇಶ್ ನಾಯರ್ ಇವರ ಮಾರ್ಗದರ್ಶನದಲ್ಲಿ ಗ್ರಾಮ ಸಭೆ, ಉದ್ಯೋಗ ಖಾತರಿ ಯೋಜನೆ, ಸಕಾಲ, ಸರಕಾರದ ಯೋಜನೆಗಳು, ಸರ್ವ ಶಿಕ್ಷಣ ಅಭಿಯಾನದ ಮಹತ್ವವನ್ನು ಸಾರುವ ನಾಟಕವನ್ನು ಮಕ್ಕಳು ಮನೋಜ್ಞವಾಗಿ ಪ್ರದರ್ಶಿಸಿ ಗ್ರಾಮಸ್ಥರಲ್ಲಿ ಜಾಗೃತಿ ಮೂಡಿಸಿದರು.

**ಮೂಡೂರು ಖಾತರಿ ಪವಾಡ – ಯಕ್ಷಗಾನ ಪ್ರದರ್ಶನ :** ಕಾವಳಕಟ್ಟೆಯ ಶೃತಿ ಆರ್ಟ್ಸ್‌ನ ಸಂಚಾಲಕ ಹಾಗೂ ಯಕ್ಷಗಾನ ಕಲಾವಿದ ಶ್ರೀ ದಿವಾಕರ ದಾಸ್‌ರವರ ನೇತೃತ್ವದಲ್ಲಿ "ಮೂಡೂರು ಖಾತರಿ ಪವಾಡ" ಎಂಬ ಉದ್ಯೋಗ ಖಾತರಿ ಯೋಜನೆ ಮತ್ತು ಕಾರ್ಯ ಸಾಧನೆಯ ಬಗ್ಗೆ ಮಾಹಿತಿ, ಜಾಗೃತಿ ಪ್ರೇರಣೆ ನೀಡುವ ಯಕ್ಷಗಾನ ಪ್ರದರ್ಶನ ಗ್ರಾಮಸ್ಥರಲ್ಲಿ ಹೊಸ ಸಂಚಲನ ಮೂಡಿಸಿದೆ. ಕರಾವಳಿಯ ಗಂಡು ಕಲೆ ಯಕ್ಷಗಾನದ ಶಕ್ತಿಯನ್ನು ಅರಿತಿರುವ ಗ್ರಾಮೀಣ ಜನತೆ

ಯಕ್ಷಗಾನಕ್ಕೆ ಬಹು ಬೇಗ ಆಕರ್ಷಿತರಾಗುತ್ತಾರೆ. ಈ ನಿಟ್ಟಿನಲ್ಲಿ ಗ್ರಾಮ ಸಭೆಯಲ್ಲಿ ನಡೆದ ಯಕ್ಷಗಾನ ಪ್ರದರ್ಶನದ ಪ್ರಥಮ ಪ್ರಯೋಗ ಜಿಲ್ಲೆಯ ಗಮನ ಸೆಳೆದಿದೆ. ಯಕ್ಷಗಾನದ ಪ್ರದರ್ಶನದ ಮೂಲಕ ಗ್ರಾಮ ಸಭೆ ಮತ್ತು ಉದ್ಯೋಗ ಖಾತರಿ ಯೋಜನೆಯ ಮಹತ್ವದ ಅರಿವನ್ನು ಪ್ರತಿ ಮನೆ ಮಂದಿಯಲ್ಲಿ ಮೂಡಿಸುವಲ್ಲಿ ಶೃತಿ ಆರ್ಟ್ಸ್ ಕಾಲ ಸಂಸ್ಥೆ ಹಾಗೂ ಕಾವಳಮೂಡೂರು ಗ್ರಾಮ ಪಂಚಾಯತ್ ಸಫಲವಾಗಿದೆ.

ಗ್ರಾಮ ಪಂಚಾಯತ್ ಅಧ್ಯಕ್ಷ ಶ್ರೀ ಯಾಕುಬು



ಸಾಹೇಬರ ಅಧ್ಯಕ್ಷತೆಯಲ್ಲಿ ಅತ್ಯಂತ ಯಶಸ್ವಿಯಾಗಿ ನಡೆದ ಗ್ರಾಮ ಸಭೆಯಲ್ಲಿ ಮಹಾತ್ಮ ಗಾಂಧಿ ನರೇಗಾದ ಒಂಬುಡ್ಸ್‌ಮನ್ ಇವರೊಂದಿಗೆ ಇಲಾಖೆಯ ಅಧಿಕಾರಿ ಸಿಬ್ಬಂದಿಗಳು, ಚಿನಾಯಿತ ಪ್ರತಿನಿಧಿಗಳು ಮತ್ತು ಇತರೆ ಇಲಾಖೆಯ ಅಧಿಕಾರಿಗಲೊಂದಿಗೆ ತಜ್ಞರು ಹಾಗೂ ಇತರರು ಮಾಹಿತಿ ವಿನಿಮಯ, ಸಂವಾದ, ಚರ್ಚೆಯಲ್ಲಿ ಭಾಗವಹಿಸಿದ್ದರು.

ಮಾದರಿ ಗ್ರಾಮ ಸಭೆ ವೀಕ್ಷಣೆಗೆ ಪುತ್ತೂರು, ಮಂಗಳೂರು, ಬಂಟ್ವಾಳ ತಾಲೂಕಿನ ಸುಗ್ರಾಮ ಸಂಘದ ಗ್ರಾಮ ಪಂಚಾಯತ್ ಸದಸ್ಯೆಯರು, ಗ್ರಾಮ ವಿಕಾಸ ಕೇಂದ್ರಗಳ ಪ್ರೇರಕರು, ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ಆಗಮಿಸಿದ್ದರು. ಪಂಚಾಯತ್ ಅಭಿವೃದ್ಧಿ ಅಧಿಕಾರಿ ಸ್ವಾಗತಿಸಿದರು. ಕಾರ್ಯದರ್ಶಿ ವಾರ್ಷಿಕ ವರದಿ, ಲೆಕ್ಕ ಪತ್ರ ಮಂಡಿಸಿದರು. ಶಿಕ್ಷಕ ಕಾರ್ಯಕ್ರಮ ನಿರೂಪಿಸಿದರು. ಗ್ರಾಮ ಪಂಚಾಯತ್ ಸದಸ್ಯರುಗಳು ಕಾರ್ಯಕ್ರಮದ ಯಶಸ್ವಿಗೆ ಸಹಕರಿಸಿರುತ್ತಾರೆ.

**ಸಹ ಭೋಜನ :** ಗ್ರಾಮ ಸಭೆಯಲ್ಲಿ ಭಾಗವಹಿಸಿದವರಿಗೆ ಸಿಹಿ ತಿಂಡಿಯೊಂದಿಗಿನ ಉಪಹಾರ ಹಾಗೂ ಸಹ ಭೋಜನ ವ್ಯವಸ್ಥೆ ಮಾಡಿ ಗ್ರಾಮಸ್ಥರಲ್ಲಿ ಐಕ್ಯತೆ ಮತ್ತು ಸೌಹಾರ್ದತೆ ಬೆಳೆಸಲು ಮಾಡಿದ ಶ್ರಮವೂ ಸಾರ್ಥಕವಾಗಿದೆ.

ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯಲ್ಲಿ ಸ್ವಯಂ ಅಭಿವೃದ್ಧಿಯೊಂದಿಗೆ ಸಮಾಜದ ಅಭಿವೃದ್ಧಿ ಸಾಧಿಸಲು ವ್ಯಕ್ತಿ ಪರಿವರ್ತನೆಯಿಂದ ವ್ಯವಸ್ಥೆಯ ಪರಿವರ್ತಿಸಲು ಪ್ರತಿಯೊಬ್ಬ ಮತದಾರರು ಕಡ್ಡಾಯವಾಗಿ ಗ್ರಾಮ ಸಭೆಯಲ್ಲಿ ಭಾಗವಹಿಸಲೇ ಬೇಕು. ಏಕೆಂದರೆ ಗ್ರಾಮ ಸಭೆ ಹಳ್ಳಿಯ ವಿಧಾನ ಸಭೆ, ಮತದಾರರ ಮಹಾ ಸಭೆ.

"ಬಡವರು ತಮಗೆ ತಾವೇ ಸಹಾಯ ಮಾಡಿಕೊಳ್ಳುವಂತಾಗದಿದ್ದರೆ ಪ್ರಪಂಚದ ಸರ್ವ ಸಂಪತ್ತನ್ನೂ ತಂದು ಭಾರತದ ಒಂದು ಹಳ್ಳಿಗೆ ಸುರಿದರೂ ಆ ಹಳ್ಳಿ ಉದ್ಧಾರವಾಗಲಾರದು" ಎಂದು ಹೇಳಿದ ಸ್ವಾಮಿ ವಿವೇಕಾನಂದರ ಮಾತು ಎಂದೆದಿಗೂ ಆದರ್ಶಪ್ರಾಯವಾಗಿರುತ್ತದೆ.

## ಅನಿಸಿಕೆ, ಅಭಿಪ್ರಾಯ :

ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯಲ್ಲಿ ಜನರು ನೇರವಾಗಿ ಭಾಗವಹಿಸಿ ಆಡಳಿತ ಹಾಗೂ ಅಭಿವೃದ್ಧಿ ಕಾರ್ಯಗಳಲ್ಲಿ ಪಾಲುದಾರರಾಗುವಂತೆ ಮಾಡುವುದೇ ಗ್ರಾಮ ಸಭೆಯ ಮೂಲ ಆಶಯವಾಗಿದೆ. ಈ ದಿಸೆಯಲ್ಲಿ ಕಾವಳ ಮೂಡೂರು ಗ್ರಾಮ ಸಭೆಯು ಯಶಸ್ಸು ಕಂಡಿದೆ. ಗ್ರಾಮ ಸಭೆಯಗಳ ಬಲವರ್ಧನೆಗಳಿಂದ ಮಾತ್ರ ಉತ್ತಮ ಆಡಳಿತ, ಅಭಿವೃದ್ಧಿ ಸಾಧ್ಯ. ಗ್ರಾಮ ಸಭೆಗಳ ಬಲವರ್ಧನೆಗೆ ನಮ್ಮ ಸಂಸ್ಥೆ ವತಿಯಿಂದ ಜನರಿಗೆ ಹಾಗೂ ಜನಪ್ರತಿನಿಧಿಗಳಿಗೆ ಜಾಗೃತಿ, ಪ್ರೇರಣೆ ನೀಡಲಾಗುತ್ತದೆ.

**– ಶ್ರೀ ಕೃಷ್ಣ ಮೂಲ್ಯ**
ನಿರ್ದೇಶಕರು, ಜನ ಶಿಕ್ಷಣ ಟ್ರಸ್ಟ್

ಗ್ರಾಮ ಸಭೆ ಜನರ ಸಹಭಾಗಿತ್ವದಲ್ಲಿ ಅತ್ಯಂತ ಯಶಸ್ವಿಯಾಗಿ ನಡೆದಿದೆ. ಗ್ರಾಮ ಸಭೆ ಸರ್ವ ಶ್ರೇಷ್ಠ ಎಂದು ಅರ್ಥವಾಗಿದೆ. ಖಾತರಿ ಪವಾಡ ಯಕ್ಷಗಾನ ಪ್ರದರ್ಶನ ಮತ್ತು ಮಕ್ಕಳ ನಾಟಕದಿಂದ ಗ್ರಾಮ ಸಭೆಗೆ ಹೊಸ ಮೆರುಗು, ಆಕರ್ಷಣೆ ಸಿಕ್ಕಿದೆ. ಈ ಮಾದರಿಯ ಗ್ರಾಮ ಸಭೆಯನ್ನು ಪ್ರತಿ ವರ್ಷ ನಡೆಸುತ್ತೇವೆ.

**– ಶ್ರೀ ಯಾಕುಬ್ ಸಾಹೇಬ್**
ಗ್ರಾಮ ಪಂಚಾಯತ್ ಅಧ್ಯಕ್ಷರು

ಕಾವಳಮೂಡೂರು ಗ್ರಾಮ ಸಭೆಯನ್ನು ಸಾಂಸ್ಕೃತಿಕ ಕಾರ್ಯಕ್ರಮಗಳ ಜೋಡಣೆ ಯೊಂದಿಗೆ ಯಶಸ್ವಿಯಾಗಿ ನಡೆಸಿದ್ದೇವೆ. ಈ ಮಾದರಿಯ ಗ್ರಾಮ ಸಭೆಯ ಯಶಸ್ವಿಗೆ ಶ್ರಮಿಸಿದ ನನಗೆ ತೃಪ್ತಿ ನೀಡಿದೆ. ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ವಿ. ರಮಾನಾಥ ರೈಯವರ ಪ್ರೋತ್ಸಾಹವೂ ಸಿಕ್ಕಿದೆ. ಇನ್ನು ಮುಂದೆಯೂ ಇಂತಹ ಗ್ರಾಮ ಸಭೆಗಳ ಸಂಘಟನೆ ಕಾರ್ಯದಲ್ಲಿ ಪಾಲುದಾರನಾಗಿ ಸಹಕರಿಸುತ್ತೇನೆ.

**– ಶ್ರೀ ಪದ್ಮಶೇಖರ್ ಜೈನ್**
ತಾಲೂಕು ಪಂಚಾಯತ್ ಸದಸ್ಯ, ಬಂಟ್ವಾಳ

ಮಾದರಿ ಗ್ರಾಮ ಸಭೆಯ ಯಶಸ್ಸಿನಿಂದ ಗ್ರಾಮಸ್ಥರಿಗೆ ವಿಶೇಷ ಪ್ರೇರಣೆ ಆಗಿದೆ. ಖಾತರಿ ಪವಾಡ ಯಕ್ಷಗಾನ ಪ್ರದರ್ಶನ ಗ್ರಾಮದ ಜನರನ್ನು ಬಡಿದೆಬ್ಬಿಸಿದೆ. ಪ್ರತಿ ವರ್ಷ ಇದೇ ಮಾದರಿಯಲ್ಲಿ ಇನ್ನು ಉತ್ತಮ ರೀತಿಯಲ್ಲಿ ಗ್ರಾಮ ಸಭೆಯನ್ನು ಸಂಘಟಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ.

**– ಶ್ರೀ ಗಣಪತಿ ಮುಚ್ಚಿನ್ನಾಯ**
ಪಂಚಾಯತ್ ಅಭಿವೃದ್ಧಿ ಅಧಿಕಾರಿ

ಕಾವಳಮೂಡೂರು ಮಾದರಿ ಗ್ರಾಮ ಸಭೆ ಎಲ್ಲಾ ವರ್ಗದ ಜನರನ್ನೂ ಒಗ್ಗೂಡಿಸಿದೆ. ಈ ಸಭೆಯಲ್ಲಿ ನಮ್ಮ ಶಾಲಾ ಮಕ್ಕಳ ನಾಟಕ ಪ್ರದರ್ಶನಕ್ಕೆ ಅವಕಾಶ ಒದಗಿಸಿರುವುದಕ್ಕೆ ಸಂತೋಷ ಪಡುತ್ತೇನೆ. ಇನ್ನು ಮುಂದಿನ ದಿನಗಳಲ್ಲಿಯೂ ಮಾದರಿ ಗ್ರಾಮ ಸಭೆಗಳ ಯಶಸ್ವಿ ಸಂಯೋಜನೆಗೆ ನಮ್ಮ ಶಾಲಾ ವತಿಯಿಂದ ಎಲ್ಲಾ ರೀತಿಯಲ್ಲಿ ಸಹಕರಿಸಲಾ ಗುವುದು.

**– ಶ್ರೀ ರಮೇಶ್ ನಾಯ್ಕ**
ಮುಖ್ಯೋಪಾಧ್ಯಾಯರು, ಕೆದ್ದಳಿಕೆ ಶಾಲೆ.

ಒಂಬುಡ್ಸ್‌ಮನ್‌ರವರ ಪ್ರೇರಣೆ ಮತ್ತು ಸಹಕಾರ ದೊಂದಿಗೆ ಗ್ರಾಮ ಸಭೆಯಲ್ಲಿ ನೀಡಿದ ಖಾತರಿ ಪವಾಡ ಯಕ್ಷಗಾನ ಪ್ರದರ್ಶನದಿಂದ ಉದ್ಯೋಗ ಖಾತರಿ ಯೋಜನೆಯ ಮಹತ್ವದ ಬಗ್ಗೆ ಜನರಿಗೆ ಸಂಪೂರ್ಣ ಅರಿವು ಆಗಿದೆ. ನಮ್ಮ ಕಲಾ ತಂಡಕ್ಕೆ ರಾಜ್ಯ ವ್ಯಾಪ್ತಿ ಪ್ರಚಾರ, ಪ್ರಶಂಸೆ ಸಿಕ್ಕಿದೆ. ಈಗಾಗಲೇ ವಾರ್ತಾ ಇಲಾಖೆ ನಮ್ಮ ತಂಡವನ್ನು ರಾಜ್ಯ ವ್ಯಾಪ್ತಿ ಕಾರ್ಯಕ್ರಮ ನೀಡಲು ಆಯ್ಕೆ ಮಾಡಿದೆ.

**– ಶ್ರೀ ದಿವಾಕರ್ ದಾಸ್**
ಯಕ್ಷಗಾನ ಕಲಾವಿದರು, ಸಂಚಾಲಕರು, ಶೃತಿ ಆರ್ಟ್ಸ್

ಮಾದರಿ ಗ್ರಾಮ ಸಭೆ ಜನರಿಗೆ, ಜನಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ ಪ್ರೇರಣೆ ನೀಡಿದೆ. ಈ ಮಾದರಿಯ ಗ್ರಾಮ ಸಭೆಗಳನ್ನು ಬೇರೆ ಗ್ರಾಮ ಪಂಚಾಯತ್ ಗಳಲ್ಲಿ ನಡೆಸುವುದಕ್ಕೆ ಪ್ರಯತ್ನಿಸುತ್ತೇನೆ

**– ಶ್ರೀ ಕೃಷ್ಣ**
ಜೂನಿಯರ್ ಇಂಜಿನಿಯರ್, ಪಂ.ರಾ.ಇಂ.ಇಲಾಖೆ

ಯಶೋಗಾಥೆ

# ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಆರ್ಥಿಕ ಸೌಲಭ್ಯ ಪಡೆದ ಹತ್ತಿ ಸಂಸ್ಕರಣಾ ಘಟಕ

* ಎಂ.ಎ. ಮೂರ್ತಿ

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಆರ್ಥಿಕ ಸೌಲಭ್ಯ ಪಡೆದು ಸ್ವಯಂ ಉದ್ಯೋಗದಲ್ಲಿ ತೊಡಗಿದ ಒಂದು ಯಶೋಗಾಥೆ

ಗದಗ ಜಿಲ್ಲೆಯು ಹತ್ತಿ, ಕಡಲೆಕಾಯಿ, ಸೂರ್ಯಕಾಂತಿ ಮತ್ತು ಮೆಣಸಿನಕಾಯಿಯಂತಹ ವಾಣಿಜ್ಯ ಬೆಳೆಗಳಿಗೆ ಪ್ರಸಿದ್ಧಿಯಾಗಿದೆ. ಈ ಜಿಲ್ಲೆಯ ಪ್ರಮುಖ ಪಟ್ಟಣವಾದ ಲಕ್ಷ್ಮೇಶ್ವರ ಪಟ್ಟಣವು ಹತ್ತಿ ಸಂಸ್ಕರಣಾ ಘಟಕಗಳಿಗೆ ಮತ್ತು ಕಡಲೆಬೀಜ ಸಂಸ್ಕರಣ ಘಟಕಗಳಿಗೆ ಅತ್ಯಂತ ಪ್ರಸಿದ್ದಿಯಾಗಿದೆ. ಇಲ್ಲಿಯ ಎ.ಪಿ.ಎಮ್.ಸಿ. ಮಾರುಕಟ್ಟೆಗೆ ಈ ಎರಡು ಉತ್ಪನ್ನಗಳು ಬಹಳ ಪ್ರಮಾಣದಲ್ಲಿ ಸುತ್ತಮುತ್ತಲಿನ ತಾಲ್ಲೂಕುಗಳಿಂದ ಬರುತ್ತವೆ. ಹೀಗಾಗಿ ಪ್ರತಿ ವರ್ಷ ಇಲ್ಲಿ ಈ ರೀತಿಯ ಹೊಸ ಘಟಕಗಳು ಪ್ರಾರಂಭವಾಗುತ್ತಲೇ ಇರುತ್ತವೆ. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಹಣಕಾಸಿನ ನೆರವು ಪಡೆದು ಈ ರೀತಿಯ ಅನೇಕ ಘಟಕಗಳು ಇಲ್ಲಿ ಕಾರ್ಯವನ್ನು ನಿರ್ವಹಿಸುತ್ತಿದ್ದು ಈ ಭಾಗದಲ್ಲಿ ಹೆಚ್ಚಿನ ಉದ್ಯೋಗ ಅವಕಾಶಗಳನ್ನು ದೊರಕಿಸಿದ್ದಷ್ಟೇ ಅಲ್ಲದೆ, ಈ ಭಾಗದ ಆರ್ಥಿಕ ಅಭಿವೃದ್ಧಿಗೆ ಕಾರಣವಾಗಿವೆ.

ಮೆ: ವಿಜಯಲಕ್ಷ್ಮೀ ಇಂಡಸ್ಟ್ರೀಸ್ ಲಕ್ಷ್ಮೇಶ್ವರ ಇಂತಹ ಯಶಸ್ವಿ ಘಟಕಗಳೊಲ್ಲೊಂದು. ಶ್ರೀ ಪೂರ್ಣಾಜಪ್ಪ ಭರಮರಾಜಪ್ಪ ಖರಾಟೆ ಇವರು ಶಿಕ್ಷಕರಾಗಿ ಮತ್ತು ಶಿಕ್ಷಣಾಧಿಕಾರಿಯಾಗಿ 34 ವರ್ಷ ಶಿಕ್ಷಣ ಕ್ಷೇತ್ರದಲ್ಲಿ ಸೇವೆಯನ್ನು ಸಲ್ಲಿಸಿ ತಮ್ಮದೇ ಆದ ಒಂದು ಘಟಕವನ್ನು ಪ್ರಾರಂಭಿಸಬೇಕೆಂಬ ಇಚ್ಛೆಯಿಂದ



*ಸಹಾಯಕ ಪ್ರಧಾನ ವ್ಯವಸ್ಥಾಪಕರು, ಬಿಡಿ & ಸಿಆರ್ ವಿಭಾಗ, ಪ್ರಧಾನ ಕಛೇರಿ, ಕೆ.ಎಸ್.ಎಫ್.ಸಿ. ಬೆಂಗಳೂರು – 560 052

ಸರ್ಕಾರಿ ಸೇವೆಯಿಂದ ಸ್ವಯಂ ನಿವೃತ್ತಿಯನ್ನು ಪಡೆದರು. ಐಟಿಐ ಪಾಸು ಮಾಡಿದ ತಮ್ಮ ಮಗ ಕಿರಣಕುಮಾರ ಜೊತೆ ಒಂದು ಪಾಲುದಾರಿಕೆ ಘಟಕವನ್ನು ಸ್ಥಾಪಿಸಿ ಹತ್ತಿ ಜಿನ್ನಿಂಗ್ ಮತ್ತು ಪ್ರೆಸಿಂಗ್ ಘಟಕವನ್ನು ಸ್ಥಾಪಿಸುವ ಯೋಜನೆಯ ಉದ್ದೇಶವನ್ನಿಟ್ಟುಕೊಂಡು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯನ್ನು ಸಂಪರ್ಕಿಸಿದರು. ಇವರ ಹಿನ್ನೆಲೆ, ಸ್ಥಳೀಯ ಸಂಪರ್ಕ, ಕಚ್ಚಾ ವಸ್ತುಗಳ ಲಭ್ಯತೆ ಮತ್ತು ಪ್ರಾಮಾಣಿಕ ಉದ್ದೇಶವನ್ನು ಗಮನಿಸಿದ ಶಾಖಾ ಕಛೇರಿ, ಸದರಿಯವರಿಗೆ ಕರ್ನಾಟಕ ರಾಜ್ಯ ಹಣಕಾಸು ಪ್ರೆಸ್ಸಿಂಗ್ ಮಶೀನ್ ಇಲ್ಲದಿರುವುದು ಕೊರತೆಯಾಗಿ ಕಂಡು ಬಂದಿತು. ಸಂಸ್ಥೆಯು ಸದರಿಯವರಿಗೆ 2012ರಲ್ಲಿ ರೂ. 20.00 ಲಕ್ಷಗಳ ಸಾಲವನ್ನು ಪ್ರೆಸ್ಸಿಂಗ್ ಯಂತ್ರೋಪಕರಣಗಳಿಗಾಗಿ ಸಾಲ ಮಂಜೂರು ಮಾಡಿತು. ಹೀಗೆ ಒಟ್ಟು ರೂ. 50.00 ಲಕ್ಷಗಳ ಸಾಲ ಮಂಜೂರಾತಿ ಪಡೆದ ಈ ಘಟಕವು ಕಳೆದ 2 ವರ್ಷಗಳಿಂದ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ.

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಜೊತೆ ಒಳ್ಳೆಯ ವ್ಯವಹಾರವನ್ನು ಇಟ್ಟುಕೊಂಡಿರುವ ಈ




ಸಂಸ್ಥೆಯಿಂದ ಶೇ. 4ರ ಬಡ್ಡಿ ದರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಉದ್ಯಮವನ್ನು ಸ್ಥಾಪಿಸಲು ಹೊಸದಾಗಿ ಪ್ರಾರಂಭವಾದ ಯೋಜನೆಯ ಅಡಿಯಲ್ಲಿ ರೂ. 30.00 ಲಕ್ಷಗಳ ಸಾಲವನ್ನು 2011ರಲ್ಲಿ ಮಂಜೂರು ಮಾಡಲಾಯಿತು.

ಮುಂದೆ ಕೆಲವೇ ದಿನಗಳಲ್ಲಿ ಘಟಕವು ಸ್ಥಾಪನೆಯಾಗಿ ಕಾರ್ಯನಿರ್ವಹಿಸಲಾರಂಭಿಸಿತು. ಬಾಡಿಗೆ ಆಧಾರದ ಮೇಲೆ ನಿರ್ವಹಿಸುತ್ತಿದ್ದ ಘಟಕಕ್ಕೆ ಘಟಕದ ಪಾಲುದಾರರು ಈ ಭಾಗದಲ್ಲಿ ಉದ್ಯೋಗ ಅವಕಾಶಗಳನ್ನು ಸೃಷ್ಟಿಸಿದ್ದಾರೆ ಮತ್ತು ಈ ಭಾಗದಲ್ಲಿ ಒಂದು ಮಾದರಿ ಘಟಕವನ್ನು ಮಾಡಬೇಕೆಂಬ ಇಚ್ಛೆಯನ್ನು ಹೊಂದಿ ಯಶಸ್ವಿಯಾಗಿದ್ದಾರೆ.

ಈ ಯೋಜನೆ ಕುರಿತು ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಹತ್ತಿರದ ಶಾಖಾ ಕಛೇರಿಯನ್ನು ಅಥವಾ website : www.ksfc.in. ಸಂಪರ್ಕಿಸಬಹುದು.

## ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಉದ್ಯಮಿಗಳಿಗೆ ಕರ್ನಾಟಕ ಸರ್ಕಾರದ ಬಡ್ಡಿ ಸಹಾಯ ಧನ ಯೋಜನೆ :

**ಉದ್ದೇಶ :** ಅತಿಸಣ್ಣ (ಸೂಕ್ಷ್ಮ), ಸಣ್ಣ ಪ್ರಮಾಣದ /ಸೇವಾ ಕ್ಷೇತ್ರದ ವ್ಯಾಪಾರ ಘಟಕಗಳನ್ನು ಸ್ಥಾಪಿಸುವ ಸಲುವಾಗಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಉದ್ದಿಮೆದಾರರನ್ನು ಪ್ರೋತ್ಸಾಹಿಸುವುದು.

**ಅರ್ಹ ಸಾಲಗಾರರು :**

* ಈ ಯೋಜನೆಯಡಿಯಲ್ಲಿ ಸಾಲ ಪಡೆಯಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರು ಮಾತ್ರ ಅರ್ಹರಾಗಿರುತ್ತಾರೆ.

* ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಉದ್ದಿಮೆದಾರರೇ ಶೇ.100 ರಷ್ಟು ಸ್ವಾಮ್ಯತೆ ಹೊಂದಿರಬೇಕು.

* ಈ ಯೋಜನೆಯಡಿಯಲ್ಲಿ ಎಲ್ಲಾ ಪಾಲುದಾರರು / ಉದ್ದಿಮೆದಾರರು ಪರಿಶಿಷ್ಟ ಜಾತಿಯವರಾಗಿರಬಹುದು ಅಥವಾ ಪರಿಶಿಷ್ಟ ಪಂಗಡದವರಾಗಿರಬಹುದು, ಇಲ್ಲವೇ ಇಬ್ಬರೂ ಒಟ್ಟಾರೆ ಸೇರಿರುವವರಾಗಿರಬಹುದು.

* ಸದರಿ ಯೋಜನೆಯ ಬಡ್ಡಿ ಸಹಾಯಧನ ಸೌಲಭ್ಯವನ್ನು ಪಡೆಯುವ ಉದ್ದಿಮೆದಾರರು ರಾಜ್ಯ ಸರ್ಕಾರ / ಕೇಂದ್ರ ಸರ್ಕಾರದಿಂದ ಲಭ್ಯವಿರುವ ಇತರೇ ಯಾವುದೇ ಬಡ್ಡಿ ಸಹಾಯಧನದ ಸೌಲಭ್ಯ ಪಡೆಯುವಂತಿಲ್ಲ.

* ಈ ಯೋಜನೆಯಡಿಯಲ್ಲಿ ಉದ್ದಿಮೆದಾರರು ಬಡ್ಡಿ ಪ್ರೋತ್ಸಾಹದಾನ ಪಡೆಯಬೇಕಾದರೆ ಯಾವುದೇ ಬ್ಯಾಂಕು/ಹಣಕಾಸು ಸಂಸ್ಥೆಗಳಿಗೆ ಸುಸ್ತಿದಾರರಾಗಿರಬಾರದು.

* ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಸಾಲ ಪಡೆದ ದಿನಾಂಕದಿಂದ 5 ವರ್ಷಗಳ ಅವಧಿಯವರೆಗೆ ಮಾತ್ರ ಈ ಯೋಜನೆಯಡಿಯಲ್ಲಿ ಬಡ್ಡಿ ಸಹಾಯಧನ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.

* ರಾಜ್ಯ ಹಣಕಾಸು ಸಂಸ್ಥೆಗಳ ಕಾಯ್ದೆಯಡಿಯಲ್ಲಿ ಪಟ್ಟಿ ಮಾಡಲಾದ ಎಲ್ಲಾ ಯೋಜನಾ ಚಟುವಟಿಕೆಗಳು ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹತೆ ಹೊಂದಿರುತ್ತವೆ. ಆದಾಗ್ಯೂ, ಖಾಸಗೀ ವಾಹನಗಳಿಗೆ ಹಣಕಾಸಿನ ನೆರವನ್ನು ಈ ಯೋಜನೆಯಡಿಯಲ್ಲಿ ನೀಡಲಾಗುವುದಿಲ್ಲ.

**ಅರ್ಹತೆ :** ಉದ್ದಿಮೆದಾರರು ಈ ಯೋಜನೆಯಡಿಯಲ್ಲಿ ಹೊಸ ಘಟಕಗಳ ಸ್ಥಾಪನೆ ಅಥವಾ ಅಸ್ತಿತ್ವದಲ್ಲಿರುವ ಘಟಕಗಳ ವಿಸ್ತರಣೆ/ವೈವಿಧ್ಯೀಕರಣ ಮತ್ತು ಆಧುನೀಕರಣ ಉದ್ದೇಶಗಳಿಗಾಗಿ 2 ಕೋಟಿ ರೂಪಾಯಿಗಳವರೆಗೆ ಅವಧಿ ಸಾಲದ ಸೌಲಭ್ಯವನ್ನು ಒಂದಕ್ಕಿಂತ ಹೆಚ್ಚು ಬಾರಿ ಪಡೆಯಲು ಅರ್ಹರಾಗಿರುತ್ತಾರೆ.

ಅಸ್ತಿತ್ವದಲ್ಲಿರುವ ಘಟಕಗಳ ವಿಸ್ತರಣೆ / ವೈವಿಧ್ಯೀಕರಣ ಮತ್ತು ಆಧುನೀಕರಣದ ಘಟಕಗಳನ್ನು ಹೊರತುಪಡಿಸಿ ಉಳಿದೆಲ್ಲಾ ಚಟುವಟಿಕೆಗಳ ಸಾಲದ ಕನಿಷ್ಟ ಮಿತಿ 5 ಲಕ್ಷ ರೂ.ಗಳಾಗಿದೆ. ವೈದ್ಯರು ಹಾಗೂ ಪಶು ವೈದ್ಯರು ಈ ಯೋಜನೆಯಡಿಯಲ್ಲಿ ಕನಿಷ್ಟ 2.00 ಲಕ್ಷ ರೂ.ಗಳ ಸಾಲವನ್ನು ಪಡೆಯಬಹುದು.

### ಬಡ್ಡಿ ದರ : ನಿವ್ವಳ ಬಡ್ಡಿ ದರ ವಾರ್ಷಿಕ ಶೇ.4

ಸಂಸ್ಥೆಯು ಈ ಯೋಜನೆಯಡಿ ಸಾಮಾನ್ಯ ಬಡ್ಡಿ ದರದಲ್ಲೂ ಸಾಲವನ್ನು ಮಂಜೂರು ಮಾಡಬಹುದು. ಸಾಲಗಾರರಿಗೆ ನೀಡಲಾದ ವಾರ್ಷಿಕ ಶೇ.4 ರ ಬಡ್ಡಿ ದರ ಹಾಗೂ ಸಂಸ್ಥೆಯು ಪಡೆಯಲಾದ ಬಡ್ಡಿ ದರ (effective rate) ಇವುಗಳ ನಡುವಿನ ವ್ಯತ್ಯಾಸದ ಮೊತ್ತವನ್ನು ಕರ್ನಾಟಕ ಸರ್ಕಾರದಿಂದ ಬಿಡುಗಡೆ ಮಾಡಲಾದ ಬಡ್ಡಿ ಸಹಾಯಧನದಿಂದ ತುಂಬಿ ಕೊಡಲಾಗುವುದು.

ಕಾವ್ಯ ವಿಕಾಸ

# "ನಿರ್ಮಲ ಭಾರತ ಅಭಿಯಾನ"

ನಿರ್ಮಲ ಭಾರತ ಅಭಿಯಾನ
ಸರಕಾರ ತಂದೈತಿ ಒಂದು ಯೋಜನ !!

ಗ್ರಾಮೀಣ ಪ್ರದೇಶಗಳಲ್ಲಿನ !
ಬಯಲಲ್ಲಿ ಮಲ ವಿಸರ್ಜನ!
ತೊಡೆದು ಹಾಕೂನು ಅನಿಷ್ಟವನ್ನ!
ಬಿಟ್ಟ ಬಿಡೂನು ಹಿಂದಿನ ಪದ್ದತೀನ!
ಸ್ವಚ್ಚ ಸುಂದರ ಪರಿಸರವನ್ನ!
ರೂಪಿಸಿ ಮಾಡೋಣ ಅನುಷ್ಠಾನ!
ಅದೇ ನಿರ್ಮಲ ಭಾರತ ಅಭಿಯಾನ !!




ಶೌಚಾಲಯ ಕಟ್ಟುದರಿಂದ!
ಗೌರವವನ್ನ ಕಾಪಾಡುತದ!
ಅಸಹ್ಯ ವಾಸನೆ ಇಲ್ಲದ!
ನಾಯಿ ಹಂದಿ ಕಾಟ ತಪ್ಪುತ್ತದ!
ಗರ್ಭಿಣಿ ವೃದ್ಧರು ಬಾಣಂತಿಯರ!
ಚಿಕ್ಕಮಕ್ಕಳಗಿ ಅನುಕೂಲ ಆಗ್ತದ!
ಇದುವೇ ನಿರ್ಮಲ ಭಾರತ ಅಭಿಯಾನ !!

ಸರ್ಕಾರ ಕೊಡತೈತಿ ಸಹಾಯ ಧನ!
ಹತ್ತು ಸಾವಿರದಾ ಒಂದು ನೂರು ಹಣ!
ಗ್ರಾಮ ಪಂಚಾಯಿತಿಗೆ ಅರ್ಜಿಯ ಕೊಟ್ಟು!
ಪಡೆದುಕೊಳ್ಳಿರಿ ಸವಲತ್ತನ್ನ!
ಬೆಟ್ಟಿ ಆಗಿರಿ ಅಧಿಕಾರಿಗಳನ್ನ!
ತಿಳಿದುಕೊಳ್ಳಿರಿ ಸೌಲಭ್ಯಗಳನ್ನ!
ಕಟ್ಟಿಸಿಕೊಳ್ಳಿರಿ ಶೌಚಾಲಯವನ್ನ !!

– ಶ್ರೀ ಬೀರಪ್ಪ ಲ. ಹಳಮನಿ
ಕ್ಲರ್ಕ್, ಗ್ರಾಮ ಪಂಚಾಯತಿ
ಯಡಹಳ್ಳಿ, ತಾ.ಜಿ. ಬಾಗಲಕೋಟೆ
ಮೊ. 90085 98659

# ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಗಳು




*ಶ್ರೀ ವಿನಾಯಕ ಎನ್. ಭಟ್ಟ

ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿ ಚಟುವಟಿಕೆಗಳ ಬಗ್ಗೆ ಒಂದು ಕಿರು ಚಿತ್ರಣ

ಭಾರತದ ಸಂವಿಧಾನದಡಿಯಲ್ಲಿ ಭಾರತ ದೇಶದ ಸಮಗ್ರ ಅಭಿವೃದ್ಧಿಗೆ ವಿಕೇಂದ್ರೀಕರಣ ವ್ಯವಸ್ಥೆಯೇ ಸೂಕ್ತ ಎಂದು ತಿಳಿದ ಭಾರತದ ಆಡಳಿತ ತಜ್ಞರು ಆ ದಿಸೆಯಲ್ಲಿ ಆಡಳಿತ ವ್ಯವಸ್ಥೆಗೆ ಪಂಚಾಯತ್ ರಾಜ್ ಪರಿಕಲ್ಪನೆಯನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ಭಾರತದ ಸಂಸತ್ತನ್ನು ಸನ್ನದ್ಧಗೊಳಿಸಿದರು. ಅದರಂತೆ ಭಾರತದ ಸಂಸತ್ತು ಸನ್ನದ್ಧಗೊಂಡು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೊಳಿಸುವ 73 ನೇ ಸಂವಿಧಾನ ತಿದ್ದುಪಡಿಯನ್ನು ಅಂಗೀಕರಿಸಿತು. ಕಾನೂನು ರಚಿಸುವ ಮೂಲ ಕೇಂದ್ರ ಸಂಸತ್ತು ದೇಶದ ಈ ವ್ಯವಸ್ಥೆಯನ್ನು ಜಾರಿಗೊಳಿಸಲು ಆಯಾ ರಾಜ್ಯ ಸರ್ಕಾರಗಳಿಗೆ ಅಧಿಕಾರವನ್ನು ನೀಡಿತು.ಪಂಚಾಯತ್ ರಾಜ್ ವ್ಯವಸ್ಥೆಯನ್ನು ಕರ್ನಾಟಕ ರಾಜ್ಯವು ಅಭಿವೃದ್ಧಿ ದೃಷ್ಟಿಯಿಂದ ಜಾರಿಗೊಳಿಸಿಕೊಂಡಿತು.

ಕರ್ನಾಟಕ ಪಂಚಾಯತ್ ರಾಜ್ ಕಾನೂನು 1993 ನ್ನು ಜಾರಿಗೊಳಿಸಿ ಅದರಂತೆ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್, ಗ್ರಾಮ ಪಂಚಾಯತ್ ವ್ಯವಸ್ಥೆಯನ್ನು ಜಾರಿಗೊಳಿಸಿ, ಪಂಚಾಯತ್ ರಾಜ್ ವ್ಯವಸ್ಥೆಯ ಮೂಲಕ ಆಡಳಿತ ವ್ಯವಸ್ಥೆಯನ್ನು ವಿಕೇಂದ್ರೀಕರಣಗೊಳಿಸಿ, ಸ್ಥಳೀಯ ಸರ್ಕಾರ ವ್ಯವಸ್ಥೆಯನ್ನು ಜಾರಿಗೊಳಿಸಲಾಯಿತು.

ಮೂರು ಪದ್ಧತಿಯ ವ್ಯವಸ್ಥೆಯಡಿಯಲ್ಲಿ ಆಡಳಿತ ವ್ಯವಸ್ಥೆಯ ಮೇಲೆ ನಿಯಂತ್ರಣ ಸಾಧಿಸಿದ ಕರ್ನಾಟಕ ರಾಜ್ಯ ಸರ್ಕಾರ 61 ಎ ಅಡಿಯಲ್ಲಿ ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಯ ರಚನೆಗೆ ಅವಕಾಶ ನೀಡಿ ಆ ಮೂಲಕ ಗ್ರಾಮದ ಜನರಿಗೆ ಅಧಿಕಾರ ನೀಡುವಂತೆ ಮಾಡಿದ್ದು ಪಂಚಾಯತ್ ರಾಜ್ ವ್ಯವಸ್ಥೆಯ ಶ್ಲಾಘನೀಯ ಸಾಧನೆಯಾಗಿದೆ.


ದಬ್ಬೆಸಾಲ ಗ್ರಾ.ನೀ.ಸ ಮತ್ತು ನೈ. ಸಮಿತಿಯ ರಚನೆಯಲ್ಲಿ ಪಾಲ್ಗೊಂಡು ಮಾತನಾಡುತ್ತಿರುವ ವಲಯ ಸಂಯೋಜಕರು.

*ವಲಯ ಸಂಯೋಜಕರು ಜಿಲ್ಲಾ ಪಂಚಾಯತ ಜಿಲ್ಲಾ ನೆರವು ಘಟಕ ಕಾರವಾರ (ಉ.ಕ.)

ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಯ ಒಳನೋಟವನ್ನು ಈ ಕೆಳಗಿನ ರೀತಿಯಲ್ಲಿ ವಿಶ್ಲೇಷಣೆ ಮಾಡಬಹುದಾಗಿದೆ

## ಸಂಕ್ಷಿಪ್ತ ಮಾಹಿತಿ

## ಗ್ರಾಮ ನೀರು ಸರಬರಾಜು ಮತ್ತು ನೈಮರ್ಮಲ್ಯ ಸಮಿತಿ

(ಕರ್ನಾಟಕ ಪಂಚಾಯತ್ ರಾಜ್ 1993 61ಎ ಅಡಿಯಲ್ಲಿ ಉಪ ಸಮಿತಿ)

| ಅ.ನಂ | ವಿಷಯ | ವಿವರ |
|---|---|---|
| 1 | ಸಮಿತಿಯ ರಚನೆ ವಿವರ | ಒಟ್ಟೂ ಸದಸ್ಯರ ಸಂಖ್ಯೆ 9 ಪದನಿಮಿತ್ತ ಸದಸ್ಯರು 3 1 /3 ಮಹಿಳೆಯರು, ಶೇ.18 ಎಸ್.ಸಿ/ಎಸ್.ಟಿ ಯವರಿಗೆ ಆದ್ಯತೆ ನೀಡತಕ್ಕದ್ದು, ಗ್ರಾಮ ಪಂಚಾಯತ ಸದ್ಯರನ್ನು ಹೊರತುಪಡಿಸಿ ಉಳಿದವರ ಸಂಖ್ಯೆ 8ಕ್ಕೆ ಮೀರಬಾರದು. ಸಮಿತಿಯಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ(ಗ್ರಾ.ಪಂ ನ ಪಿಡಿಓ/ಕಾಯ ್ದರ್ಶಿಯವರೇ ಸಮಿತಿಯ ಕಾರ್ಯದರ್ಶಿಯಾಗಿರುತ್ತಾರೆ) ಖಜಾಂಚಿ ಪದಾಧಿಕಾರಿಗಳನ್ನು ಹೊಂದಿರತಕ್ಕದ್ದು. ಈ ಪದಾಧಿಕಾರಿಗಳಲ್ಲಿ ಒಬ್ಬ ಮಹಿಳೆ ಇರತಕ್ಕದ್ದು. |
| 2 | ಧ್ಯೆಯೋದ್ದೇಶಗಳು | ❖ ನೀರು ಸರಬರಾಜು ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳ ಜವಾಬ್ದಾರಿಯನ್ನು ನಿರ್ವಹಿಸಲು ಒಂದು ಉದ್ಧರಿಸಿದ ಅಂಗದಂತೆ ಕಾರ್ಯ ನಿರ್ವಹಿಸುವುದು.<br>❖ ನೀರು ಸರಬರಾಜು ಮತ್ತು ನೈರ್ಮಲ್ಯ ಸೌಕರ್ಯಗಳ ಯೋಜನೆ ನಿರ್ಮಾಣ, ನಿರ್ವಹಣೆ ಮತ್ತು ಕಾರ್ಯಾಚರಣೆಯಲ್ಲಿ ಭಾಗವಹಿಸುವುದು.<br>❖ ಕುಟುಂಬಗಳಿಗೆ /ಕೊಪ್ಪಲುಗಳಿಗೆ ಸಮಾನವಾದ ಹಂಚಿಕೆಯನ್ನು ಖಾತ್ರಿಪಡಿಸಿಕೊಳ್ಳುವುದು ಇತ್ಯಾದಿ |
| 3 | ಅಧ್ಯಕ್ಷರ/ ಉಪಾಧ್ಯಕ್ಷರ/ ಸಮಿತಿಯ ಅಧಿಕಾರಗಳು | ಅಧ್ಯಕ್ಷರು, ಉಪಾಧ್ಯಕ್ಷರು ಅಥವಾ ಸದಸ್ಯರುಗಳು ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ನೀರು ಸರಬರಾಜು ಮತ್ತು ನೈರ್ಮಲ್ಯ ವ್ಯವಸ್ಥೆಯ ಯಾವದೇ ಕಾಮಗಾರಿಗಳನ್ನು ಕಾಮಗಾರಿಯಲ್ಲಿ ನಿರತರಾದ ನೌಕರರನ್ನು ಪರಿಶೀಲನೆ ಹಾಗೂ ಮೇಲ್ವಿಚಾರಣೆ ಮಾಡಬಹುದು, ಇತ್ಯಾದಿ. |
| 4 | ಸಮಿತಿಯ ಪ್ರಕಾರ್ಯಗಳ ವಿವರ | ಗ್ರಾಮಗಳಲ್ಲಿ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆಗಳ ಬೇಡಿಕೆ ಪಟ್ಟಿ ತಯಾರಿಸುವುದು, ಹೊಸ ಸೌಕರ್ಯಗಳ ಪುನರ್ ನಿರ್ಮಾಣ, ಸಾಂಸ್ಥಿಕ, ಹಣಕಾಸು ಹಾಗೂ ತಾಂತ್ರಿಕತೆಯನ್ನು ಒಳಗೊಂಡ ಸಮುದಾಯದ ಕ್ರಿಯಾ ಯೋಜನೆ ತಯಾರಿ. ಯೋಜನೆಯ ಬಗ್ಗೆ ಸಭೆ ಕರೆದು ಪ್ರಚಾರ ಮತ್ತು ವಿಚಾರಗಳನ್ನು ಹಾಗೂ ಅಭಿಪ್ರಾಯವನ್ನು ಪಡೆಯುವುದು, ಲೆಕ್ಕ ಪತ್ರಗಳನ್ನು ಇಡುವುದು, ನೀರು ಮತ್ತು ನೈರ್ಮಲ್ಯದ ಬಗ್ಗೆ ಗ್ರಾಮದ ನಾಗರಿಕರನ್ನು ಪ್ರೋತ್ಸಾಹಿಸುವುದು ಇತ್ಯಾದಿ |
| 5 | ಸಮಿತಿಯ ಕಾರ್ಯಾವಧಿ | ಸಮಿತಿಯ ಕಾರ್ಯಾವಧಿ ಸಂಬಂಧಿಸಿದ ಗ್ರಾಮ ಪಂಚಾಯತದ ಕಾರ್ಯಾವಧಿಗೆ ಸಮವಾಗಿರುತ್ತದೆ. |
| 6 | ನಿರ್ವಹಿಸಬೇಕಾದ ದಾಖಲಾತಿ ಪುಸ್ತಕಗಳ ವಿವರ | ರಶೀದಿ ಪುಸ್ತಕ, ಕ್ಯಾಶ್ ಪುಸ್ತಕ ದಾಸ್ತಾನು ಪುಸ್ತಕ ವೋಚರ್ ಪುಸ್ತಕ ಬ್ಯಾಂಕ ಪಾಸ್ ಪುಸ್ತಕ ವಿದ್ಯುತ್ ಬಿಲ್ಲುಗಳು ನಡಾವಳಿ ಪುಸ್ತಕ, ನೀರಿನ ಶುಲ್ಕ ನೀಡುವ ಕುಟುಂಬಗಳ ಪಟ್ಟಿ, ಪಂಪ್ ಲಾಗ್ ಪುಸ್ತಕ, ಸಿಬ್ಬಂದಿಗಳ ಹಾಜರಾತಿ ಪುಸ್ತಕ, ನೀರಿನ ಶುಲ್ಕ ಬಾಕಿ ಇರುವ ಪಟ್ಟಿ, ಖರ್ಚು ಮತ್ತು ಜಮಾ ವಿವರದ ಪುಸ್ತಕ, ವಾರ್ಷಿಕ ಮುಂಗಡ ಪತ್ರದ ವಿವರದ ಮಾಹಿತಿ ಪತ್ರ. |
| 7 | ಸಭಾ ನಡಾವಳಿ | ತಿಂಗಳಿಗೆ ಕನಿಷ್ಠ ಒಂದು ಭಾರಿ ಸಭೆ ಸೇರುವುದು, ಸಮಿತಿಯ ಸಭೆಗಳನ್ನು ಸಮಿತಿ ಅಧ್ಯಕ್ಷರು, ತಪ್ಪಿದ್ದಲ್ಲಿ ಸಮಿತಿಯ ಕಾರ್ಯದರ್ಶಿ ಅಥವಾ ಸಮಿತಿಯ 1/3 ಭಾಗದ ಸದಸ್ಯರು 3 ಮೂರು ದಿನಗಳ ನೋಟಿಸ ನೀಡಿ ಸಭೆ ಕರೆಯಬಹುದು. |

ಸ್ವತಂತ್ರ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರಕಾರದ ಆಡಳಿತದ ಅಧಿಕಾರವನ್ನು ಗ್ರಾಮದ ಜನರಿಗೆ ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಗಳ ಮೂಲಕ ನೀಡಿ, ಆ ಮೂಲಕ ಗ್ರಾಮದ ಸಮುದಾಯದವರು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯ ಫಲ ನೇರವಾಗಿ ನಾಗರಿಕರಿಗೆ ದೊರಕುವಂತೆ ಕ್ರಮ ಕೈಗೊಂಡಿರುವ ಪಂಚಾಯತ್ ರಾಜ್ ಇಲಾಖೆಯ ಕ್ರಮ ಅಭಿನಂದನಾರ್ಹ.



ಗ್ರಾ.ನೀ.ಸ ಮತ್ತು ನೈ. ಸಮಿತಿಯ ಮಾಸಿಕ ಸಭೆಯಲ್ಲಿ
ಪಾಲ್ಗೊಂಡ ತಾವರಕಟ್ಟಾ ಮಹಿಳಾ ಸದಸ್ಯರ ಒಂದು ನೋಟ

ವಿಕೇಂದ್ರಿಕರಣ ವ್ಯವಸ್ಥೆಯ ಭದ್ರ ಬುನಾದಿಗಳಾಗಿ ಕಾರ್ಯ ನಿರ್ವಹಿಸಲು ಗ್ರಾಮೀಣ ಭಾಗದ ಮಹಿಳೆಯರು/ ನಾಗರಿಕರು ದೃಢ ಸಂಕಲ್ಪ ಮಾಡಬೇಕಾಗಿದೆ. ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಗಳು ಸರಕಾರದ ಅನುದಾನವನ್ನು ಪಡೆದು ಕೊಳ್ಳುವಂತಾಗಬೇಕು ಹಾಗೂ ಸಂಬಂಧಿಸಿದ ಕಛೇರಿಯನ್ನು ಹೊಂದುವಂತಾಗಿ ಗ್ರಾ.ನೀ.ಸ ಮತ್ತು ನೈರ್ಮಲ್ಯ ಸಮಿತಿಯು ಕ್ರಿಯಾಶೀಲವಾಗಿ ತನ್ನ ಕಾರ್ಯಚಟುವಟಿಕೆಗಳನ್ನು ನಡೆಸುವಂತಾಗಬೇಕು. ಆಗ ಗ್ರಾಮೀಣ ಜನರ ಅಭಿವೃದ್ಧಿ ಪ್ರಕ್ರಿಯೆಯ ಬದುಕು ಹಸನಾದಿತು

## ‘youtube’ ಜಾಲತಾಣದಲ್ಲಿ ಮರವಂತೆ ಗ್ರಾಮ ಪಂಚಾಯಿತಿ

ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಮರವಂತೆ ಗ್ರಾಮ ಪಂಚಾಯಿತಿಯು ಅಭಿವೃದ್ಧಿ, ಆಡಳಿತ ಮತ್ತು ಸಾಮಾಜಿಕ ನ್ಯಾಯ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದೆ. ಅವುಗಳನ್ನು ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ವಿಷಯದ ಆಸಕ್ತರ ನಡುವೆ ಪ್ರಚುರಪಡಿಸುವ ಮತ್ತು ಹಿನ್ನುಡಿ ಪಡೆಯುವ ಉದ್ದೇಶದಿಂದ 58 ನಿಮಿಷಗಳ ಅವಧಿಯ ಸಾಕ್ಷ್ಯಚಿತ್ರ ಸಿದ್ಧಪಡಿಸಿ ಯುಟ್ಯೂಬ್ ಜಾಲತಾಣಕ್ಕೆ ಜೋಡಿಸಿದೆ. ಆಸಕ್ತರು ಅದನ್ನು 'youtube.com' ಜಾಲತಾಣ ತೆರೆದು 'maravanthe documentary' ಹುಡುಕುವ ಮೂಲಕ ನೋಡಬಹುದಾಗಿದೆ. ಏಂದು ಮರವಂತೆ ಗ್ರಾಮ ಪಂಚಾಯತಿಯ ಅಧ್ಯಕ್ಷರು ಮಾಹಿತಿ ನಿಡಿರುತ್ತಾರೆ.

ಹಚ್ಚಿನ ವಿವರಗಳಿಗೆ ಅಧ್ಯಕ್ಷರು, ಮರವಂತೆ ಗ್ರಾಮ ಪಂಚಾಯತಿ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ, ದೂರವಾಣಿ – 08254–255632 ಇವರನ್ನು ಸಂಪರ್ಕಿಸಬಹುದಾಗಿದೆ.

**–ಸಂಪಾದಕ**

ಲೇಖನ

# ಗ್ರಾಮ ನೈರ್ಮಲ್ಯ

*ಡಾ. ಟಿ.ರಮೇಶ್

ವೈಯಕ್ತಿಕ ಶುಚಿತ್ವ ಮತ್ತು ಗ್ರಾಮ ನೈರ್ಮಲ್ಯದ ಬಗ್ಗೆ ಲೇಖಕರ ವಿಶ್ಲೇಷಣೆ

ಉನ್ನತ ಶಿಕ್ಷಣ ಸಂಸ್ಥೆಗಳು, ಬೃಹತ್ ರಸ್ತೆಗಳು, ಒಳಚರಂಡಿ ವ್ಯವಸ್ಥೆ, ಶುದ್ಧ ಕುಡಿಯುವ ನೀರು. ದೊಡ್ಡ ದೊಡ್ಡ ಆರೋಗ್ಯ ಕೇಂದ್ರಗಳು, ಉತ್ತಮ ವೈದ್ಯಾಧಿಕಾರಿಗಳು ಹೀಗೆ... ಉತ್ತಮ ಎಂಬುದೆಲ್ಲಾ ನಗರ ಪ್ರದೇಶಗಳಿಗೆ ಸೀಮಿತವಾಗಿರುವುದರಿಂದ ಸಹಜವಾಗಿ ಗ್ರಾಮೀಣ ಪ್ರದೇಶಗಳು ಉತ್ತಮ-ಉನ್ನತ ಶಿಕ್ಷಣದಿಂದ, ಸ್ವಚ್ಛತೆಯಿಂದ, ವಂಚಿತವಾಗಿ ಅನಾರೋಗ್ಯದ ಗೂಡಾಗಿ ಉಳಿಯಬೇಕಾದ ಪರಿಸ್ಥಿತಿ ಭಾರತೀಯ ಸಮಾಜದಲ್ಲಿ ಬಹು ಹಿಂದಿನ ಕಾಲದಿಂದಲೂ ಒದಗಿಬಂದಿದೆ. ಪರಣಾಮವಾಗಿ, ಅನೇಕ ಕಾಯಿಲೆಗಳು, ಅಪೌಷ್ಠಿಕತೆ ಗ್ರಾಮೀಣ ಜನರನ್ನು ನಿರಂತರವಾಗಿ ಬಾಧಿಸುತ್ತಾ ಅವರಿಗಾಗಿ ಸ್ವಚ್ಛ ಬದುಕನ್ನು ಕಟ್ಟಿಕೊಳ್ಳದಂತೆ ಮಾಡಿದೆ. ಇನ್ನ ಮುಂದಾದರೂ ಗ್ರಾಮೀಣ ಆರೋಗ್ಯ ಮತ್ತು ನೈರ್ಮಲ್ಯ ಕಾಪಾಡುವಲ್ಲಿ ಸರ್ಕಾರದೊಂದಿಗೆ ಪ್ರತಿಯೊಬ್ಬ ಭಾರತೀಯ ನಾಗರೀಕನೂ ಭಾಗಿಯಾಗಬೇಕಾಗಿದೆ. ಹಾಗೆ ಬಾಗಿಯಾದರೆ ಆರೋಗ್ಯವೇ ಭಾಗ್ಯ. ಶುಚಿತ್ವವೇ ದೈವತ್ವ.

ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಈ ಮೂರು ಕಾರಣಗಳು ಗ್ರಾಮೀಣ ಪ್ರದೇಶಗಳನ್ನು ಅನಾದಿ ಕಾಲದಿಂದಲೂ ನೈರ್ಮಲ್ಯ ಮುಕ್ತವಾಗಿರಲು ಬಿಡದೆ ಅನಾರೋಗ್ಯದಿಂದ ಬದುಕುವಂತೆ ಮಾಡಿದೆ.




2005ರಲ್ಲಿ ಗಾಂಧೀಜಿ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲೆಂದು, ಗ್ರಾಮೀಣ ಸಮುದಾಯದಲ್ಲಿ ಸ್ವಚ್ಛತೆ ಹಾಗೂ ನೈರ್ಮಲ್ಯೀಕರಣದ ಜಾಗೃತಿ ಮೂಡಿಸಿ, ಜನರೇ ಸ್ವಇಚ್ಛೆಯಿಂದ ಶೌಚಾಲಯ ನಿರ್ಮಾಣ ಮಾಡಿಕೊಳ್ಳುವ ಉದ್ದೇಶದಿಂದ,

* ಅರ್ಥಶಾಸ್ತ್ರ ಉಪನ್ಯಾಸಕರು, ಬಾಸುದೇವ ಸೋಮಾನಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು

ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆಯು "ಸಂಪೂರ್ಣ ಸ್ವಚ್ಛತಾ ಆಂದೋಲನ" ಕಾರ್ಯಕ್ರಮವನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸ ತೊಡಗಿರುವುದು ಸ್ತುತ್ಯಾರ್ಹ ವಾದುದಾಗಿದೆ. ಪ್ರಸಕ್ತ 'ನಿರ್ಮಲ ಭಾರತ್ ಆಭಿಯಾನ' ಹೆಸರಿನಲ್ಲಿ ಯೋಜನೆ ಜಾರಿಯಲ್ಲಿದೆ.

ಹಿಂದಿನ ರಾಮನಗರ, ನೂತನ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕನಕಪುರ ತಾಲ್ಲೂಕಿನ ಹಾರೋಹಳ್ಳಿ ಗ್ರಾಮದಲ್ಲಿ ವಿದ್ಯುಕ್ತವಾಗಿ ಚಾಲನೆ ಪಡೆದಿರುವ ಈ ವಿಶಿಷ್ಟ ಕಾರ್ಯಕ್ರಮವನ್ನು ರಾಜ್ಯದ ಅಂದಿನ ಎಲ್ಲಾ 29 ಜಿಲ್ಲೆಗಳ 1500 ಗ್ರಾಮ ಪಂಚಾಯಿತಿಗಳಲ್ಲಿ ಏಕ ಕಾಲಕ್ಕೆ ಆರಂಭಿಸಲಾಗಿದೆ. ತನ್ಮೂಲಕ ಜನರಲ್ಲಿ ಸ್ವಚ್ಛತೆ, ಪರಿಸರ ಶುಚಿತ್ವ ಹಾಗೂ ಶೌಚಾಲಯಗಳ ಅಗತ್ಯತೆಯ ಬಗ್ಗೆ ಅರಿವು ಮೂಡಿಸಲು ಶ್ರಮಿಸಲಾಗುತ್ತಿದೆ. ಕೇಂದ್ರ ಸರ್ಕಾರದ ಧನ ಸಹಾಯವೂ ಸೇರಿಕೊಂಡಿರುವ ಈ ಕಾರ್ಯಕ್ರಮವನ್ನು ಜನರು ಕೇವ ಸರ್ಕಾರಿ ಕಾರ್ಯಕ್ರಮವೆಂಬುದಾಗಿ ಭಾವಿಸದೆ, ಜನತೆಯ ಕಾರ್ಯಕ್ರಮ ಎಂಬುದಾಗಿ ಪರಿಗಣಿಸಿ, ಅನುಷ್ಠಾನಗೊಳಿಸಬೇಕಾಗಿದೆ. ಇದಕ್ಕೆ ಪಂಚಾಯಿತಿ ಹಾಗೂ ಸಂಘ ಸಂಸ್ಥೆಗಳ ಸಹಕಾರವು ಅಗತ್ಯ.

ಗ್ರಾಮೀಣ ಪ್ರದೇಶದ ಜನರು ಕೃಷಿಯನ್ನು ಮುಖ್ಯ ಕಸುಬಾಗಿ ಅವಲಂಬಿಸುವುದರ ಜೊತೆಗೆ ದನಕರುಗಳನ್ನು ಸಾಕುವುದು ಕಸುಬಾಗಿ ಬೆಳೆಯತೊಡಗಿತು. ಸಾಮಾನ್ಯವಾಗಿ ದನದ ಕೊಟ್ಟಿಗೆಯ ನೆಲದ ಬಹುಭಾಗ ಮಣ್ಣಿನದು. ಇಲ್ಲಿ ಬೀಳುವ ಕಸ, ಕಡ್ಡಿ, ಸಗಣಿ, ಗಂಜಲಗಳನ್ನು ಹೊರಕ್ಕೆ ಸಾಗಿಸಲು ಯೋಗ್ಯವಾದ ಯೋಜನೆಗಳಿರುವುದಿಲ್ಲ. ಗಂಜಲ, ಸಗಣಿ ಅಲ್ಲಲ್ಲಿ ಹಳ್ಳ ಕೊಳ್ಳಗಳಲ್ಲಿ ನಿಂತು ಕೊಳೆತು ನಾರುತ್ತಿರುತ್ತವೆ. ಕಸ ಕಡ್ಡಿ, ಸಗಣಿಗಳನ್ನು ಮನೆಯ ಅಂಗಳದಲ್ಲಿಯೋ, ಹಿತ್ತಲಿನಲ್ಲಿಯೋ ಅಥವಾ ಸುತ್ತಮುತ್ತಲಿನ ಪ್ರದೇಶಗಳಲ್ಲಿಯೋ ಶೇಖರಿಸಿಡುತ್ತಾರೆ. ಇದರಿಂದ ಗ್ರಾಮೀಣ ಪ್ರದೇಶದ ಜನರು ತಮ್ಮ ಮನೆಗಳ ವಾತಾವರಣವನ್ನು ಕೆಡಿಸಿಕೊಂಡು ತಮ್ಮ ಸುತ್ತಮುತ್ತಲಿನ ಪ್ರದೇಶದವರ ಆರೋಗ್ಯಕ್ಕೆ ಕುಂದನ್ನುಂಟು ಮಾಡುತ್ತಾರೆ.

ಪ್ರತಿಯೊಂದು ಹಳ್ಳಿಯ ಮನೆಗಳಲ್ಲಿಯೇ ಕ್ರಿಮಿಕೀಟಗಳು ಮನುಷ್ಯನ ಜೊತೆಯಲ್ಲಿ ಸಹಜೀವನ ನಡೆಸುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಸೊಳ್ಳೆ, ಚಿಗಟೆ, ತಿಗಣೆ, ನೊಣ, ಹೇನು, ಜಿರಳೆ ಇವುಗಳಿಂದ ಮನುಷ್ಯನ ಆರೋಗ್ಯದ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತದೆ. ಆದ್ದರಿಂದ ಕೀಟನಾಶಕಗಳನ್ನು ಉಪಯೋಗಿಸುವುದರಿಂದ ಅವುಗಳನ್ನು ನಿಯಂತ್ರಿಸಲು ಜನರು ಗ್ರಾಮೀಣ ಜನರು ಮುಂದಾಗಬೇಕು.

ಅನೇಕ ಗಾಮೀಣ ಪ್ರದೇಶಗಳಲ್ಲಿ ಚರಂಡಿಗಳ ವ್ಯವಸ್ಥೆಯಿರುವುದಿಲ್ಲ ಮತ್ತು ಮನೆಗಳನ್ನು ಸಿಕ್ಕಿದ ಹಾಗೆಲ್ಲಾ ಕಟ್ಟಿರುವುದರಿಂದ ಚರಂಡಿಗಳನ್ನು ನಿರ್ಮಿಸುವುದಕ್ಕೆ ಸಾಧ್ಯವಿರುವುದಿಲ್ಲ. ಸ್ವಲ್ಪ ಹೆಚ್ಚು ಕಡಿಮೆ ಮನೆಗಳು ಸಾಲುಸಾಲಾಗಿತ್ತೆಂದರೆ ಬೀದಿಯ ಎರಡು ಕಡೆಯಲ್ಲಿ ಚರಂಡಿಗಳನ್ನು ನಿರ್ಮಿಸಬಹುದು ಅಂತಹ ವ್ಯವಸ್ಥೆ ಹಳ್ಳಿಗಳಲ್ಲಿ ಇಲ್ಲದೆ ಇರುವುದರಿಂದ ಚರಂಡಿಗಳಲ್ಲಿ ನೀರು ನಿಂತು ಸೊಳ್ಳೆಗಳು ತುಂಬಿಕೊಂಡು ಮನುಷ್ಯನಿಗೆ ಸಾಂಕ್ರಾಮಿಕ, ಡೆಂಗ್ಯೂ ಜ್ವರ ಇತ್ಯಾದಿ ಕಾಯಿಲೆಗಳಿಗೆ ತುತ್ತಾಗುವುದು ಇಂದು ಸಹಜವಾಗಿದೆ. ಗ್ರಾಮಗಳು ಹಾಗೂ ನಗರ ಪ್ರದೇಶಗಳಲ್ಲಿ ಜನರು ಕಸಗಳನ್ನು ಒಂದು ಕಡೆ ರಾಶಿ ರಾಶಿ ಹಾಕುವುದರಿಂದ ಅದು ಕೊಳೆತು ಅಲ್ಲಿ ಕ್ರಿಮಿಕೀಟಗಳು ಉತ್ಪತ್ತಿಯಾಗಿ ಅವುಗಳಿಂದ ಮನುಷ್ಯ ಬೇರೆ ಬೇರೆ ರೀತಿಯಾದಂತಹ ರೋಗಗಳಿಗೆ ತುತ್ತಾಗುತ್ತಿದ್ದಾನೆ.

ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಊರ ಹೆಬ್ಬಾಗಿಲಿನ ಅಕ್ಕ ಪಕ್ಕಗಳಲ್ಲಿಯೇ ವಾಸಿಸುವ ಮನೆಗಳ ಹತ್ತಿರದಲ್ಲಿಯೋ ತಿಪ್ಪೆ ಗುಂಡಿಗಳಿರುತ್ತವೆ. ಊರಿನ ಒಳಗೆ ಮತ್ತು ಸುತ್ತಲು ನೀರು ನಿಂತಿರುವ ಅಥವಾ ನೀರು ನಿಲ್ಲಲು ಅನುಕೂಲವಾದ ಅನೇಕ ಹಳ್ಳ ಕೊಳ್ಳಗಳಿರುತ್ತವೆ. ಅನೇಕ ರೀತಿಯ ಗಿಡಗಳು ಮತ್ತು ಬಳ್ಳಿಗಳು ಬೆಳೆದಿರುತ್ತದೆ. ಇದರ ಮಧ್ಯ ಪಾಳು ನಿವೇಶನಗಳು

ಇರುತ್ತದೆ. ಇವುಗಳು ಊರಿನ ಯಾರೊಬ್ಬರಿಗೂ ಸಂಬಂಧ ಪಡದಿದ್ದರೂ ಅವುಗಳ ದುಷ್ಪರಿಣಾಮಗಳು ಮಾತ್ರ ಊರಿನವರೆಲ್ಲರಿಗೂ ತಟ್ಟುತ್ತವೆ. ಆದ್ದರಿಂದ ಎಲ್ಲರೂ ಒಟ್ಟಿಗೆ ಸೇರಿ ಈ ಸ್ಥಳಗಳ ಶುಚಿತ್ವಕ್ಕೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಪ್ರತಿಯೊಂದು ಗ್ರಾಮಗಳ ಜನರ ಜವಾಬ್ದಾರಿಯಾಗಿರುತ್ತದೆ.

ಪ್ರತಿಯೊಂದು ಗ್ರಾಮದಲ್ಲಿಯೂ ಗ್ರಾಮ ಪಂಚಾಯಿತಿಯ ಆರೋಗ್ಯ ರಕ್ಷಣಾ ಸಮಿತಿಯೊಂದನ್ನು ರಚಿಸಿಕೊಂಡು ಊರಿನ ಜನರೆಲ್ಲಾ ಒಟ್ಟಿಗೆ ಸೇರಿ ವಾರಕ್ಕೊಮ್ಮೆ ಅಥವಾ ಹದಿನೈದು ದಿನಗಳಿಗೊಮ್ಮೆ ಊರಿನ ರಸ್ತೆಗಳನ್ನು, ಚರಂಡಿಗಳನ್ನು, ಗೊಬ್ಬರದ ಗುಂಡಿಗಳನ್ನು ಸ್ವಚ್ಛಗೊಳಿಸುವುದರ ಮೂಲಕ ಉತ್ತಮ ನೈರ್ಮಲ್ಯವನ್ನು ಉಂಟುಮಾಡಬಹುದು.

## ಗ್ರಾಮ ನೈರ್ಮಲ್ಯ ಆಂದೋಲನದ ಮುಖ್ಯ ಉದ್ದೇಶಗಳು :

- ಗ್ರಾಮೀಣ ಜನರ ಜೀವನ ಮಟ್ಟ ಮತ್ತು ಆರೋಗ್ಯದಲ್ಲಿ ಸುಧಾರಣೆ ತರುವುದು.
- ಜನರಿಗೆ ಶುಚಿತ್ವದ ಬಗ್ಗೆ ಮಾಹಿತಿ-ಅರಿವು ಆರೋಗ್ಯ ಶಿಕ್ಷಣ ನೀಡುವುದು.
- ಗ್ರಾಮೀಣ ಪ್ರದೇಶದ ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಿಗೆ ನೈರ್ಮಲ್ಯ ಸೌಲಭ್ಯ ಒದಗಿಸುವುದರ ಜೊತೆಗೆ ಗ್ರಾಮೀಣ ವಿದ್ಯಾರ್ಥಿಗಳಲ್ಲಿ ಶುಚಿತ್ವ ಮತ್ತು ನೈರ್ಮಲ್ಯದ ಅಭ್ಯಾಸಗಳನ್ನು ಬಳಸುವುದು.
- ನೀರಿನ ಮೂಲಗಳು ಮತ್ತು ಆಹಾರ ಕಲುಷಿತವಾಗುವುದನ್ನು ತಡೆಯಲು ಬಯಲಿನಲ್ಲಿ ಮಲ ವಿಸರ್ಜನೆಯನ್ನು ಹೋಗಲಾಡಿಸುವುದು.
- ಮಲ ಹೊರುವ ಕೆಟ್ಟ ಪದ್ಧತಿಯನ್ನು ನಿರ್ಮೂಲನೆ ಮಾಡುವುದು.
- ಗ್ರಾಮೀಣ ಬಡಜನರಿಗೆ ಶೌಚಾಲಯ ನಿರ್ಮಾಣಕ್ಕಾಗಿ ಧನ ಸಹಾಯ ನೀಡುವುದು.
- ಜನರ ನೈರ್ಮಲ್ಯ ಮತ್ತು ಶುಚಿತ್ವ ಅಭ್ಯಾಸಗಳಲ್ಲಿ ಸುಧಾರಣೆ ತರಲು ಪಂಚಾಯತ್ ರಾಜ್ ಸಂಸ್ಥೆ, ಸ್ವಸಹಾಯ ಗುಂಪುಗಳು ಹಾಗೂ ಸರ್ಕಾರೇತರ ಸಂಘ ಸಂಸ್ಥೆಗಳ ಜೊತೆಯಲ್ಲಿ ಗ್ರಾಮ ಪಂಚಾಯತ್ ಮೂಲಕ ನೈರ್ಮಲ್ಯ ಸೌಲಭ್ಯಗಳನ್ನು ಒದಗಿಸಿವುದು.
- ಮಳೆ ನೀರು ಸರಾಗವಾಗಿ ಹರಿದು ಹೋಗಲು ಸದೃಢವಾದ ಚರಂಡಿಗಳನ್ನು ನಿರ್ಮಿಸಬೇಕು. ಅವುಗಳ ಕೊಳೆ ಮತ್ತು ಕಸರಹಿತವಾಗಿ ಕಾಪಾಡುವುದು ಅಗತ್ಯವಿದೆ ಎಂಬ ಅಂಶವನ್ನು ಮನಗಾಣುವಂತೆ ಮಾಡಬೇಕು.

ಗ್ರಾಮೀಣ ಪ್ರದೇಶದಲ್ಲಿ ಜನರು ಉತ್ತಮವಾದ ಆರೋಗ್ಯವನ್ನು ಕಾಪಾಡಬೇಕಾದರೆ ಮೊದಲು ಉತ್ತಮವಾದ ನೈರ್ಮಲ್ಯವನ್ನು ಸೃಷ್ಟಿಸಬೇಕು ಏಕೆಂದರೆ ಇಂತಹ ಜಾಗತೀಕ ಮಟ್ಟದಲ್ಲಿ ಮನುಷ್ಯನು ಸಾಕಷ್ಟು ರೋಗ ರುಜಿನಗಳಿಗೆ ತುತ್ತಾಗುತ್ತಿದ್ದಾನೆ. ಅವನಿಗೆ ಪರಿಸರ ಮತ್ತು ನೈರ್ಮಲ್ಯದ ಬಗ್ಗೆ ಅರಿವು ಮೂಡಿಸುವುದು ಇಂದು ಅತ್ಯಂತ ಮಹತ್ವದ ಕಾರ್ಯವಾಗಿದೆ. ಜೊತೆಗೆ ಆರೋಗ್ಯದ ಕೇಂದ್ರಗಳು ತಾಲ್ಲೂಕ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಗ್ರಾಮದ ಜನರಿಗೆ ಒಂದು ಶಿಬಿರವನ್ನು ಹಮ್ಮಿಕೊಂಡು ಅವರ ಮುಖಾಂತರ ಗ್ರಾಮದ ಸ್ವಚ್ಛತೆಯನ್ನು ಮೂಡಿಸುವಂತಹ ಕಾರ್ಯ ಆಗಬೇಕಾಗಿದೆ. ಜೊತೆಗೆ ಗ್ರಾಮಗಳಲ್ಲಿರುವ ಯುವಕ ಸಂಘಗಳು, ಸ್ತ್ರೀ ಶಕ್ತಿ ಸಂಘಗಳು, ವಿದ್ಯಾರ್ಥಿಗಳು ಗ್ರಾಮ ಪಂಚಾಯಿತಿ ಸದಸ್ಯರುಗಳು, ಅಧ್ಯಕ್ಷರುಗಳು ಮುಂದೆ ಬಂದು ತಮ್ಮ ತಮ್ಮ ಗ್ರಾಮಗಳ ಸ್ವಚ್ಛತೆ ಕಾಪಾಡಿಕೊಳ್ಳುವುದರಿಂದ ಒಂದು ಒಳ್ಳೆಯ ಆದರ್ಶ ಗ್ರಾಮ ಎಂದೆನಿಸಿಕೊಳ್ಳಲು ಸಾಧ್ಯವಾಗುತ್ತದೆ. ಜೊತೆಗೆ ಗ್ರಾಮದ ಜನರು ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಹಕಾರಿಯಾಗುತ್ತದೆ.


# ಗ್ರಾಮೀಣಾಭಿವೃದ್ಧಿ ಮತ್ತು ಪ್ರಜಾಸತ್ತಾತ್ಮಕ ವ್ಯವಸ್ಥೆ

* ಪ್ರೊ ಎ.ಎಚ್. ಮಾಸಾಪತಿ

**ಅಭಿವೃದ್ಧಿ ಪರಿಕಲ್ಪನೆಯು ಎಲ್ಲಾ ಪ್ರದೇಶ, ವರ್ಗ, ವೃತ್ತಿ, ಉದ್ಯೋಗ, ಲಿಂಗ ಇತ್ಯಾದಿಗಳನ್ನು ಸಮಾನವಾಗಿ ಬಳಸಿಕೊಳ್ಳಬೇಕು**

'ಹಿಂದ್ ಸ್ವರಾಜ್' (1909) ಎಂಬ ಖ್ಯಾತ ಕೃತಿಯ–4ನೇ ಅಧ್ಯಾಯದಲ್ಲಿ, ಗಾಂಧೀಜಿಯವರು "ಸ್ವರಾಜ್ಯ'ದ ಪರಿಕಲ್ಪನೆಯನ್ನು ನಿರೂಪಿಸಿದ್ದಾರೆ. ಪಾಶ್ಚಿಮಾತ್ಯರ ಅಂಧಾನುಕರಣೆಯು, ಭಾರತೀಯರಿಗೆ ಸೂಕ್ತವಲ್ಲವೆಂಬ ಎಚ್ಚರಿಕೆಯನ್ನು ನೀಡಲಾಗಿದೆ. ಸಮಕಾಲೀನ ಸಮಸ್ಯೆಗಳ ಬೇರು ಶೋಧಿಸುವ ಕಾರ್ಯ ಮುಂದುವರಿಯುತ್ತದೆ. ವಿಜ್ಞಾನ/ತಂತ್ರಜ್ಞಾನದ ಅನಿಯಂತ್ರಿತ ಬಳಕೆಯಿಂದ ಉದ್ಭವಿಸುವಂತಹ ಆರ್ಥಿಕ ಶಕ್ತಿಯಲ್ಲಿ, ಪಾಶ್ಚಿಮಾತ್ಯರಿಗೆ ಅಪಾರ ನಂಬಿಕೆ ಇರುವಂತೆ ಕಾಣುತ್ತದೆ. ಆದರೆ, ಇಂತಹ ನಂಬಿಕೆಯಿಂದ ವೈಯಕ್ತಿಕ/ಸಮುದಾಯಿಕ ಪ್ರಗತಿ ಹಾಗೂ ಸ್ವಾಯತ್ತತೆಯ ಸಾಧನೆಗೆ ಅಪಾಯವಿದೆ.

ಮಹಾತ್ಮಗಾಂಧಿ ಮತ್ತು ಜೆ.ಎಮ್. ನೆಹರೂ ನಡುವೆ ಗ್ರಾಮೀಣ ಹಾಗೂ ನಗರ ಪ್ರದೇಶಗಳ ಜೀವನ ಶೈಲಿ/ಸಮಸ್ಯೆಗಳನ್ನು ಕುರಿತು; ಸೂಕ್ಷ್ಮ ಮತ್ತು ತೀಕ್ಷ್ಣವಾದ ಭಿನ್ನಾಭಿಪ್ರಾಯಗಳು ವ್ಯಕ್ತವಾಗಿವೆ. ಇಂತಹ ವಿವಾದಾಂಶಗಳನ್ನು ಕುರಿತು ವಿಚಾರ ವಿನಿಮಯ ಮಾಡಲು ನವೆಂಬರ್ 1945 ರಿಂದ ಆಗಸ್ಟ್ 1947ರ ನಡುವೆ, ಅವರಿಬ್ಬರಿಗೆ ಕಾಲಾವಕಾಶ ಲಭ್ಯವಾಗಿಲ್ಲವೆಂಬಂತೆ ಕಾಣುತ್ತದೆ. ಗುಜರಾತ್ ವಿದ್ಯಾಪೀಠದ ಕುಲಪತಿ ಸುದರ್ಶನ ಅಯ್ಯಂಗಾರ ವಾಸ್ತವಿಕ ಅಂಶದ ಮೇಲೆ ಬೆಳಕು ಚಲ್ಲಿದ್ದಾರೆ. 1945ರ ನವೆಂಬರ್ 13ರಂದು, ನೆಹರೂ ಅವರಿಗೆ ಬರೆದ ಪತ್ರದಲ್ಲಿ, ಗಾಂಧೀಜಿಯವರು ನಾಲ್ಕು (ಪ್ರಧಾನ ಅಂಶಗಳನ್ನು ಪ್ರಸ್ತಾಪಿಸಿದ್ದಾರೆ. ಈ ಅಂಶಗಳು ಒಳಗೊಳ್ಳುವಿಕೆಯ ಪ್ರಜಾಪ್ರಭುತ್ವದ (Inclusive-Democracy) ಆಂತರಿಕ ಸತ್ಯವನ್ನು ಪ್ರತಿಬಿಂಬಿಸುತ್ತದೆ. ಗ್ರಾಮ ಪಂಚಾಯತಿಯಿಂದ ಆರಂಭವಾಗಿ, ಸಂಸತ್ತಿನವರೆಗೆ ಸ್ವಯಂ ಆಡಳಿತದ ಪೂರ್ವಾಗತ್ಯಗಳನ್ನು ಚೆನ್ನಾಗಿ ತಿಳಿಯುವ ಅಗತ್ಯವಿದೆ.



* ನಿರ್ದೇಶಕರು, 'ವಿಕಾಸ ಪ್ರಕಾಶನ', ನಂ. 1/4, 1ನೇ ಅಡ್ಡರಸ್ತೆ, ಕೆ.ಎಚ್.ಬಿ.ರೋಡ್, ಸುಲ್ತಾನ್‌ಪಾಳ್ಯ, ಬೆಂಗಳೂರು – 560 032

ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ, ಒಂದು ಸಮರ್ಥವಾದ ಸಾಮಾಜಿಕ/ಆರ್ಥಿಕ ಪರಿಸರದಲ್ಲಿ ಸ್ವತಂತ್ರವಾಗಿ ವಿಕಾಸ ಹೊಂದುವ ಆಧುನಿಕ ಮಾನವನನ್ನು ಕಲ್ಪಿಸಿಕೊಳ್ಳುವಂತಹ ಪ್ರಕ್ರಿಯೆಯಲ್ಲಿ; ಗಾಂಧಿ ಮತ್ತು ನೆಹರೂ ನಡುವೆ ಭಿನ್ನಾಭಿಪ್ರಾಯಗಳಿರುವಂತೆ ಕಾಣುತ್ತದೆ. ಒಬ್ಬ ವ್ಯಕ್ತಿ ಹಾಗೂ ಇತರರೊಂದಿಗೆ ಜರುಗುವ ವ್ಯವಹಾರಗಳ ಮೇಲೆ ಲಕ್ಷ್ಯವನ್ನು ಕೇಂದ್ರೀಕರಿಸಬೇಕು. ಮಾನವನ ಆರ್ಥಿಕ ವರ್ತನೆಯು ಚರ್ಚೆಯ ಕೇಂದ್ರ ಬಿಂದುವಾಗಿದೆ. ಆಧುನಿಕ ವಿಜ್ಞಾನ/ತಂತ್ರಜ್ಞಾನದ ಮೂಲಕ ನಿಸರ್ಗದ ನಿಯಂತ್ರಣಕ್ಕಾಗಿ ನಿರಂತರವಾದ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಆದರೆ ವಿಜ್ಞಾನ/ತಂತ್ರಜ್ಞಾನದ ಅನಿಯಂತ್ರಿತ ಅಸಮರ್ಪಕವಾದ ಬಳಕೆಯಿಂದ, ಭವಿಷತ್ತಿನಲ್ಲಿ ಮಾನವ ಜನಾಂಗ ಎದುರಿಸಬೇಕಾದಂತಹ ಗಂಡಾಂತರಗಳನ್ನು, ಗಾಂಧೀಜಿಯವರು ಸ್ಪಷ್ಟವಾಗಿ ವಿವರಿಸಿದ್ದಾರೆ.

## ಪುನರುತ್ಥಾನದ ಕನಸು

ವಿನಾಶದ ಗರ್ಭದಲ್ಲಿಯೇ ಪುನರುತ್ಥಾನದ ಬೆಳಕು ಉದ್ಭವಿಸಬೇಕು. ನಾವು ಎಲ್ಲಿ ವಿಫಲರಾಗಿದ್ದೇವೆಯೋ, ಅಲ್ಲಿಯೇ ಸಫಲತೆ/ಸಾರ್ಥಕವನ್ನು ಶೋಧಿಸಬೇಕು, ಒಂದು ಗ್ರಾಮವು ಮಾನವರುವಾಸಿಸುವ ಪ್ರದೇಶವಷ್ಟೇ ಅಲ್ಲ. ಅದು ಉತ್ಪಾದನೆಯ ವಿಧಾನ, ವ್ಯಾಪ್ತಿ ಮತ್ತು ಗ್ರಾಮವು ಒಂದು ಗಣರಾಜ್ಯವಾಗಿದ್ದು, ಅದು ಸ್ವಯಂಪೂರ್ಣ ಹಾಗೂ ಸ್ವಯಂ ನಿರ್ವಹಣಾ ಸಾಮರ್ಥ್ಯವನ್ನು ಹೊಂದಿರುತ್ತದೆ. ಇಂತಹ ಸಾಮಾಜಿಕ ವ್ಯವಸ್ಥೆಯಲ್ಲಿ, ವ್ಯಕ್ತಿಯ ಸ್ವತಂತ್ರನಾಗಿರಲು ಸಾಧ್ಯವಿದೆ. ಓರ್ವ ವ್ಯಕ್ತಿಯ ಸದವಕಾಶ ಹಾಗೂ ಹಕ್ಕು ಹೊಂದಿರುತ್ತಾನೆ.

ವ್ಯಕ್ತಿ, ರಾಜ್ಯ ಹಾಗೂ ಸಮುದಾಯಗಳನ್ನು ಕುರಿತು ಗಾಂಧೀಜಿಯವರು ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಹಿಂದ್ ಸ್ವರಾಜ್ಯದ ಮೂಲಕ ರೂಪಿಸಿದ ವ್ಯವಸ್ಥೆಯಲ್ಲಿ, ಒಳಗೊಳ್ಳುವಿಕೆಯ/ಅಂತರ್ವಿಷ್ಠ ಪ್ರಜಾತಂತ್ರದ ಎಲ್ಲ ಅಂಶಗಳು ಸೇರಿಕೊಂಡಿವೆ. ನಾಲ್ಕು ಪ್ರಧಾನ ಅಂಶಗಳನ್ನು ಉಲ್ಲೇಖಿಸಲಾಗಿದೆ.

(1) ಮಾನವನ ಅತ್ಯುನ್ನತವಾದ ಭೌದ್ಧಿಕ, ರಾಜಕೀಯ ಮತ್ತು ನೈತಿಕ ಪ್ರಗತಿಯ ಸಾಧನೆ

(2) ಎಲ್ಲ ಕ್ಷೇತ್ರಗಳಲ್ಲಿ, ಸರ್ವರಿಗೂ ಸಮಾನ ಅವಕಾಶ/ಹಕ್ಕು

(3) ಆಹಾರ, ನೀರು, ವಸತಿ, ಉಡುಪು, ಬೆಳಕು, ಜೀವನಾತ್ಮಕ ವಸ್ತುಗಳನ್ನು ಕುರಿತು ಗ್ರಾಮ ಮತ್ತು ನಗರ ನಿವಾಸಿಗಳ ನಡುವೆ ಸಕ್ಷಪಾತವಿರಬಾರದು.

(4) ಮಾನವನು ಸ್ವಾತಂತ್ರ್ಯ ಪ್ರಿಯನಾಗಿದ್ದರೂ ಸಹ ಪರಸ್ಪರಾವಲಂಭಿ ಆಗಿದ್ದಾನೆ. ಗ್ರಾಮಗಳಲ್ಲಿ ಮಾತ್ರ, ಇಂತಹ ಜೀವನ ಸಾಧ್ಯವಾಗುತ್ತದೆ.

ಆತ್ಮವಿಶ್ವಾಸ/ಆತ್ಮ ಗೌರವದ ಜಾಗೃತಿಯು, ಗ್ರಾಮೀಣ ಪುನರುತ್ಥಾನದ ಆಧಾರ ಶಿಲೆಯಾಗಿದೆ. ಪ್ರಜಾಸತ್ತಾತ್ಮಕ ಮೌಲ್ಯಗಳಿಂದ ಪ್ರೇರಿತರಾಗಿ ಗ್ರಾಮೀಣ ಜನರು ವಿಕೇಂದ್ರೀಕೃತ ಆಡಳಿತದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ರವಿಂದ್ರನಾಥ ಟ್ಯಾಗೋರ್ ಕೃತಿ 'ಗ್ರಾಮೀಣ ನಿರ್ಮಾಣ'ವನ್ನು 1962ರಲ್ಲಿ, ಭಾರತ ಸರ್ಕಾರ ಪ್ರಕಟ ಮಾಡಿದೆ. ಬರೋಡ ರಾಜ್ಯದ ಮಾಜಿ ದೀವಾನರಾಗಿದ್ದ ಶ್ರೀ ವ್ಹಿ.ಟಿ. ಕೃಷ್ಣಮಾಚಾರ್ ಅವರು ಗ್ರಾಮೀಣ ಪುನರ್ ನಿರ್ಮಾಣಕ್ಕಾಗಿ ಒಂದು ವಿಶಿಷ್ಟವಾದ ಕಾರ್ಯಕ್ರಮವನ್ನು ಆರಂಭಿಸಿದ್ದರು. ಗ್ರಾಮೀಣ ಪುನರ್ ನಿರ್ಮಾಣದ ಉತ್ತೇಜನಾತ್ಮಕ ಶಕ್ತಿಯನ್ನು ಕುರಿತು, ಅವರು ದೂರದೃಷ್ಟಿಯನ್ನು ಹೊಂದಿದ್ದರು.

## ನಾಗರಿಕ ಸಮಾಜದ ಪಾತ್ರ

ಕಳೆದ ಎಡು ದಶಕಗಳಲ್ಲಿ, ನಾಗರಿಕ ಸಮಾಜದ ದೃಷ್ಟಿ ಕೋನ ಮತ್ತು ಪಾತ್ರವನ್ನು ಗುರುತಿಸಲಾಗಿದೆ. ಗ್ರಾಮೀಣಾಭಿವೃದ್ಧಿಯಲ್ಲಿ, ನಾಗರಿಕ ಸಮಾಜದ ಕಾರ್ಯಗಳ ಬಗೆಗೆ ಸಲಹೆ/ಸೂಚನೆ ನೀಡಲಾಗುತ್ತದೆ.

ಸರ್ಕಾರೇತರ ಸಂಘಟನೆಗಳನ್ನು (NGO'S), ನಾಗರಿಕ 'ಸಮಾಜ' ವೆಂದು, ಪರಿಗಣಿಸಲಾಗಿದೆ. ಸಾಮಾನ್ಯವಾಗಿ, 'ನಾಗರಿಕ ಸಮಾಜವೆಂದರೆ' ನಗರವಾಸಿಗಳ ಸಮಾಜ ಅಥವಾ ಸಂಘಟನೆ ಎಂದು ಭಾವಿಸಲಾಗುತ್ತದೆ. ದೂರದೃಷ್ಟಿ ಹೊಂದಿದ ಪ್ರಜ್ಞಾವಂತರು ನಗರ ಮತ್ತು ಗ್ರಾಮೀಣ ಪ್ರದೇಶಗಳ ವಿಭಿನ್ನ ಸಮಸ್ಯೆಗಳನ್ನು ಸೂಕ್ತವಾಗಿ ಪರಿಶೀಲಿಸುವ ಸಾಮರ್ಥ್ಯ ಹೊಂದಿದ್ದಾರೆ.

ಇ.ಎಫ್. ಶುಮಾಚರ್ ರಚಿಸಿದ 'ಸಣ್ಣದು/ಕಿರಿದು ಸುಂದರವಾಗಿದೆ' ಎಂಬ ಖ್ಯಾತ ಕೃತಿಯಲ್ಲಿ, ಅಭಿವೃದ್ಧಿಯ ಬಗೆಗಿನ ಸಮಸ್ಯೆಗಳನ್ನು ಸರಳೀಕೃತ ಗೊಳಿಸಲಾಗಿದೆ. ಅಭಿವೃದ್ಧಿ ಸಂಬಂದಿತ ದ ಸಂದರ್ಭಾನು ಸಾರವಾಗಿ ತಿದ್ದುಪಡಿ ಮಾಡಿ ಪುನರ್ ನಿರ್ವಹಣೆ ಮಾಡುವ ಕಾರ್ಯದಲ್ಲಿ ನಾಗರಿಕ ಸಮಾಜ ನಿರತವಾಗಬೇಕು ಹಾಗೂ ರಚನಾತ್ಮಕ ವಿಚಾರಗಳು ಕೆಲವು ವ್ಯಕ್ತಿಗಳಲ್ಲಿ ಮಾತ್ರ ಕೇಂದ್ರೀಕೃತವಾಗಬಾರದು. ಸೈದ್ಧಾಂತಿಕವಾಗಿ, ನಾಗರಿಕ ಸಮಾಜವು ಸಮಾಚಾರ ಸಂಪನ್ನ ಮತ್ತು ಜ್ಞಾನಾಧಾರಿತ ಸಮಾಜವೆನಿಸಿದ್ದರೂ ಸಹ; ವಾಸ್ತವಿಕವಾಗಿ, ಶಿಸ್ತು ಸಂಯಮ, ಸಾಮಾಜಿಕ ಹೊಣೆಗಾರಿಕೆ ಹಾಗೂ ಮಾನವೀಯ ಮೌಲ್ಯಗಳ ಪ್ರೇರಣೆಯಿಂದ ವಿಮುಖವಾಗಿರುವಂತೆ ಕಾಣುತ್ತದೆ. ಗ್ರಾಮೀಣ ಪ್ರದೇಶಗಳಿಗೆ ನಗರದ ಸೌಲಭ್ಯಗಳನ್ನು ಪೂರೈಸಬೇಕೆಂದು ನಿರ್ದೇಶಿಸಲಾಗಿದ್ದರೂ ಸಹ ಒಡೆದು ಆಳುವ ಧೋರಣೆಯನ್ನು (Divide and Rule Policy) ಅನುಸರಿಸಲಾಗುತ್ತದೆ.

ನಾಗರಿಕ ಸಮಾಜದ ಅರ್ಥ, ಸ್ವರೂಪ, ಗುಣ-ಲಕ್ಷಣ, ವ್ಯಾಪ್ತಿ ಮತ್ತು ಧ್ಯೇಯಗಳನ್ನು ಕುರಿತು, ಚೆನ್ನಾಗಿ ತಿಳಿದುಕೊಳ್ಳಬೇಕು. ಅಭಿವೃದ್ಧಿ ಕ್ಷೇತ್ರದಲ್ಲಿ ಕಾರ್ಯ ಮಾಡುವಂತಹ ಸರ್ಕಾರೇತರ ಸಂಘಟನೆಗಳ ವರ್ಗೀಕರಣವು ಸುಲಭವಲ್ಲ. ಇಂತಹ ಸಂಸ್ಥೆಗಳು ಆಕ್ರಮಿಸಿಕೊಂಡಿರುವ ಸ್ಥಳ, ಪ್ರತಿನಿಧಿಸುವಂತಹ ಸದಸ್ಯರ ಬಗೆಗೆ, ಸ್ಪಷ್ಟವಾದ ಮಾಹಿತಿಯು ಲಭ್ಯವಾಗಿಲ್ಲ. ಇತ್ತೀಚೆಗಿನ ವರ್ಷಗಳಲ್ಲಿ, ಸರ್ಕಾರೇತರ ಸಂಘಟನೆಗಳು ನಾಯಿಕೊಡೆಗಳಂತೆ ಬೆಳೆದಿವೆ. ಅನೇಕ ಸಂಸ್ಥೆಗಳು ನಿರೀಕ್ಷಿತ ಮಟ್ಟದಲ್ಲಿ ಕಾರ್ಯನಿರ್ವಹಿಸುವಂತೆ ಮಾರ್ಗದರ್ಶನ ನೀಡಬೇಕು. ಜನತೆಗೆ ಅಧಿಕಾರ ನೀಡಿ, ಅವರನ್ನು ಶಕ್ತಿ ಸಂಪನ್ನರನ್ನಾಗಿ ಮಾಡಿ, ಎಲ್ಲ ಕಾರ್ಯಗಳಲ್ಲಿ ಭಾಗವಹಿಸಲು ಸಜ್ಜುಗೊಳಿಸಿ, ಹೊಣೆಗಾರರಾಗುವಂತೆ ಉತ್ತೇಜನ ನೀಡಬೇಕು. ರಾಜ್ಯ ಮತ್ತು ಮಾರುಕಟ್ಟೆಯನ್ನು ನಿಯಂತ್ರಿಸಿ ಸಾರ್ವಜನಿಕರಿಗೆ ಅಗತ್ಯವಾದ ಎಲ್ಲ ಸರಕು/ಸೇವೆಗಳು ಲಭ್ಯವಾಗುವಂತೆ ಕಾರ್ಯನಿರ್ವಹಣೆ ಮಾಡಬೇಕಾಗುತ್ತದೆ.

## ಅಭಿವೃದ್ಧಿಯ ಮಾದರಿ

11 ಮತ್ತು 12ನೇ ಪಂಚವಾರ್ಷಿಕ ಯೋಜನೆಗಳ ಧೋರಣಾ ಪತ್ರದಲ್ಲಿ ಉಲ್ಲೇಖಿತವಾದ ಧ್ಯೇಯೋದ್ದೇಶಗಳ ನಡುವಿನ ಸೂಕ್ಷ್ಮವಾದ ವ್ಯತ್ಯಾಸವನ್ನು ಗಮನಿಸಬೇಕು. 11ನೇ ಯೋಜನೆಯಲ್ಲಿ (2007–2012) ತ್ವರಿತಗತಿಯ ಮತ್ತು ಅಧಿಕ ಒಳಗೊಳ್ಳುವಿಕೆಯ ಬೆಳವಣಿಗೆಯು, ಧ್ಯೇಯುವಾಗಿದ್ದರೆ; 12ನೇ ಯೋಜನೆಯು (2012–17), ತ್ವರಿತಗತಿಯ, ಸುಸ್ಥಿರ ಹಾಗೂ ಹೆಚ್ಚು ಒಳಗೊಳ್ಳುವಂತಹ ಬೆಳವಣಿಗೆಯ ಗುರಿಯನ್ನು ಹೊಂದಿದೆ. 12ನೇ ಯೋಜನೆಯಲ್ಲಿ 4, ಸುಸ್ಥಿರ ಅಭಿವೃದ್ಧಿಯು ಪ್ರಾಧಾನ್ಯತೆಯುನ್ನು ಗುರುತಿಸಲಾಗಿದೆ. ಎಲ್ಲ ಪ್ರಕಾರದ ಅಸಮಾನತೆಗಳು ಸುಸ್ಥಿರ ಅಭಿವೃದ್ಧಿಗೆ ಮಾರಕವಾಗಿವೆ. ಅಸಮಾನತೆ ಮತ್ತು ಅನ್ಯಾಯ ಒಂದೇ ನಾಣ್ಯದ ಎರಡು ಮುಖಗಳಾಗಿರುವುದರಿಂದ, ಅಸಮಾನತೆಯು ನಿವಾರಣೆಗೆ ವಾಗ್ಬಲ ನೀಡಿ, ನಿರಂತರವಾದ ಹೋರಾಟ ನಡೆಸಲಾಗುತ್ತದೆ. ಲಿಂಗ ಅಸಮಾನತೆ ಬಹು ಚರ್ಚಿತವಾದ ಮಹತ್ವದ ವಿವಾದಾಂಶವಾಗಿದೆ. ಸುಸ್ಥಿರ ಅಭಿವೃದ್ಧಿಯ ಸಾಧನೆಗಾಗಿ, ಪೂರ್ವಸಿದ್ಧತೆಯು ಅತ್ಯವಶ್ಯಕವಾಗಿದೆ. ಲಿಂಗ ಅಸಮಾನತೆಯ ದೆಸೆಯಿಂದ, ಮಹಿಳಾಭಿವೃದ್ಧಿಯು ಮಂದಗತಿಯಲ್ಲಿ ಸಾಗಿವೆ. ಅದಲ್ಲದೆ, ತಟಸ್ಥಲಿಂಗಿಗಳು ನ್ಯಾಯಕ್ಕಾಗಿ ಹೋರಾಟ ಆರಂಭಿಸಿದ್ದಾರೆ.

ಅಭಿವೃದ್ಧಿಯ ಪರಿಕಲ್ಪನೆಯು, ಎಲ್ಲ ಪ್ರದೇಶ, ವರ್ಗ, ವೃತ್ತಿ/ಉದ್ಯೋಗ, ಲಿಂಗ ಇತ್ಯಾದಿಗಳನ್ನು ಸಮಾನವಾಗಿ ಒಳಗೊಳ್ಳಬೇಕು. ಆದರೆ ಅದು ದುರ್ಧೈವದಿಂದ, ಎಲ್ಲರನ್ನು ಒಳಗೊಳ್ಳುವ ಪ್ರಕ್ರಿಯೆಯಲ್ಲಿ ವಿಫಲವಾಗಿರುವಂತೆ ಕಾಣುತ್ತದೆ. ಶ್ರೀಮಂತರು, ಉದ್ದಿಮೆದಾರರು, ವ್ಯಾಪಾರಸ್ಥರು, ಶಕ್ತಿ-ಸಂಪನ್ನರು, ಪ್ರಭಾವಶಾಲಿಗಳು, ಅಧಿಕಾರ ಶಾಹಿಗಳು, ಉನ್ನತ ಜಾತಿ/ಕುಲದ ವ್ಯಕ್ತಿಗಳು, ಪುರುಷರು, ಬಹುಸಂಖ್ಯಾತರು ಮೊದಲಾದವರು; ರಾಷ್ಟ್ರ/ರಾಜ್ಯದ ಸಂಪನ್ಮೂಲ ಹಾಗೂ ಆದಾಯದ ಮೇಲೆ ಲಕ್ಷ್ಯವನ್ನು ಕೇಂದ್ರೀಕರಿಸಿ ನಿಯಂತ್ರಣವನ್ನು ಸಾಧಿಸುತ್ತಾರೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ, ಕಡುಬಡವರು, ಹಿಂದುಳಿದವರು, ಮಹಿಳೆಯರು, ಮಕ್ಕಳು, ಅಂಗ ಮತ್ತು ಮನೋವಿಕಲರು, ಅಲ್ಪಸಂಖ್ಯಾತರು, ಇತ್ಯಾದಿ ವ್ಯಕ್ತಿ/ವರ್ಗಗಳು, ಅಸಮಾನತೆ/ಅನ್ಯಾಯಕ್ಕೆ ಬಲಿಯಾಗಿ ಅವಕಾಶವಂಚಿತರಾಗುತ್ತಾರೆ. ಅವರಿಗೆ ಅಭಿವೃದ್ಧಿಯು ದೂರದ ಬೆಳ್ಳಿ-ಚುಕ್ಕೆಯಂತೆ ಕಾಣುತ್ತದೆ.

ಕಳೆದ ಹದಿನೆಂಟು ವರ್ಷಗಳಲ್ಲಿ, ಕ್ರಿಯಾತ್ಮಕವಾದ ಅಭಿವೃದ್ಧಿಯ ಮಾದರಿಗಾಗಿ ಒತ್ತು ನೀಡಲಾಗಿದೆ. ಹಲವಾರು ಪ್ರಜ್ಞಾವಂತ ಮಹಿಳೆಯರು ಸುಸ್ಥಿರ ಅಭಿವೃದ್ಧಿಯ ಮಹಿಳಾ ಪರವಾದ ಮರು-ವ್ಯಾಖ್ಯೆಗಾಗಿ ಸಮರ್ಥನೆ ನೀಡಿದ್ದಾರೆ. ಆರ್ಥಿಕಾಭಿವೃಧಿಯನ್ನು ತ್ವರಿತಗೊಳಿಸುವ, ಸುಸ್ಥಿರ ಬೆಳವಣಿಗೆಗೆ ಪ್ರೇರಕವಾದ, ಸಮಾನತೆ, ಸಶಕ್ತೀಕರಣ ಮತ್ತು ಭದ್ರತೆಯನ್ನು ಖಚಿತಪಡಿಸುವ ಹಾಗೂ ಸರ್ವರನ್ನು ಒಳಗೊಂಡ ಅಭಿವೃದ್ಧಿ ಮಾದರಿಗೆ ಪ್ರಾಧಾನ್ಯತೆ ಕೊಡಲಾಗಿದೆ. ನೈಜವಾದ ಸುಸ್ತಿರ ಅಭಿವೃದ್ಧಿಯು ಜನಪರ, ನಿಸರ್ಗಪರ, ಉದ್ಯೋಗಪರ, ಮಹಿಳಾ ಪರವಾಗಿರುತ್ತದೆ. ಇಂತಹ ಅಭಿವೃದ್ಧಿಯು ಭವಿಷ್ಯತ್ತಿನ ಜನಾಂಗಕ್ಕೆ ಮಾರಕವಾಗಿರುವುದಿಲ್ಲ.

## ಒಳಗೊಳ್ಳುವಿಕೆಯ ಪ್ರಜಾಸತಾತ್ಮಕ ವ್ಯವಸ್ಥೆ

1990ರ ದಶಕದ ಉತ್ತರಾರ್ಧದಲ್ಲಿ, ಒಳಗೊಳ್ಳುವಿಕೆಯ ಪ್ರಜಾಪ್ರಭುತ್ವದ ಪರಿಕ್ಪನೆಯನ್ನು, ಟಿ. ಫೋಟೊ ಪೌಲಪ್ ಕೃತಿಯಲ್ಲಿ ನಿರೂಪಿಸಲಾಗಿದೆ. ಈ ವ್ಯವಸ್ಥೆಯಲ್ಲಿ ರೂಪಿಸುವಂತಹ ಯೋಜನೆಗಳು ಸ್ವಾತಂತ್ರ್ಯವನ್ನು ಸಂರಕ್ಷಿಸುವುದರ ಜೊತೆಗೆ, ವ್ಯಕ್ತಿ ಹಾಗೂ ಸಾಮುದಾಯಿಕ ಸ್ವಾಯುತ್ತತೆಯನ್ನು ಸಮರ್ಥಿಸುತ್ತವೆ. ಸಮಕಾಲೀನ ಸಮಾಜದ ಎಲ್ಲ ಕ್ಷೇತ್ರಗಳಲ್ಲಿ, ಬಹು-ಆಯಾಮೀ ಸ್ವರೂಪ ಹೊಂದಿರುವ ಪ್ರಸ್ತುತ ಬಿಕ್ಕಟ್ಟಿನ ಬೇರುಗಳು, ಸರ್ವ ಸ್ಥಾನಗಳಲ್ಲಿ ಸ್ಥಾಪಿತವಾದ ಪ್ರಜಾಸತ್ತಾತ್ಮಕತೆಯ ವಿರೋಧಿ ಶಕ್ತಿಗಳಲ್ಲಿ ಅಡಗಿಕೊಂಡಿವೆ. ಕೆಲವು ಪಟ್ಟಭದ್ರ ಹಿತಾಸಕ್ತಿಗಳ ವಜ್ರಮುಷ್ಟಿಯಲ್ಲಿ ಅಧಿಕಾರದ ಕೇಂದ್ರೀಕರಣವಾಗಿದೆ. ಇಂತಹ ಕೇಂದ್ರೀಕರಣ ಹಾಗೂ ಏಕಸ್ವಾಮ್ಯತೆಯನ್ನು ನಿರ್ಮೂಲನೆಗೊಳಿಸುವ ಧ್ಯೇಯವನ್ನು, ಒಳಗೊಳ್ಳು ವಿಕೆಯ ಪ್ರಜಾಸತಾತ್ಮಕ ವ್ಯವಸ್ಥೆಯು ಹೊಂದಿದೆ.

ಅಭಿವೃದ್ಧಿ ಮತ್ತು ಪ್ರಜಾಸತ್ತಾತ್ಮಕ ವ್ಯವಸ್ಥೆಯ ನಡುವಿನ ಸಂಬಂಧ ಸಮಸ್ಯೆಯನ್ನು ವಿಶ್ಲೇಷಿಸ ಲಾಗುತ್ತದೆ. ಆದರೆ ಸಾರ್ವಜನಿಕ ಜೀವನದ ಜ್ವಲಂತ ಸಮಸ್ಯೆಗಳನ್ನು ನಿರ್ಲಕ್ಷಿಸಿ; ಅಭಿವೃದ್ಧಿಯನ್ನು ಕುರಿತು ಚರ್ಚಿಸಲು ಸಾಧ್ಯವಿಲ್ಲ. ಉತ್ಪಾದನೆಯ ಹೆಚ್ಚಳ, ಒಟ್ಟು ದೇಶೀಯ ಉತ್ಪನ್ನಗಳ ಏರಿಕೆ; ಆದಾಯ ವೃದ್ಧಿ, ಬೃಹದಾಕಾರದ ಬಂಡವಾಳ ಹೂಡಿಕೆ ಇತ್ಯಾದಿಗಳು ಎಷ್ಟರ ಮಟ್ಟಿಗೆ ಜನಸಾಮಾನ್ಯರ ಪ್ರಗತಿಗೆ ಉಪಯುಕ್ತವಾಗಿವೆಯೇ; ವಾಸ್ತವಿಕ ಸಂಗತಿಯನ್ನು ಪರಿಶೀಲಿಸಬೇಕು. ಕಳೆದ ಆರವತ್ತೇಳು ವರ್ಷಗಳಲ್ಲಿ, ಹಲವಾರು ಬಗೆಯ ಅಸಮಾನತೆಗಳನ್ನು ನಿವಾರಿಸಲು ವಿಫಲವಾಗಿರುವುದರಿಂದ, ಅಭಿವೃದ್ಧಿಯ ಪ್ರಯೋಜನ ಗಳು ಎಲ್ಲ ವರ್ಗಗಳಿಗೆ ಸಮಾನವಾಗಿ ಲಭ್ಯವಾಗಿಲ್ಲ. ಆದುದರಿಂದ, ವ್ಯವಸ್ಥೆಯನ್ನು ಸದೃಢಗೊಳಿಸಲು, ಎಲ್ಲರನ್ನು ಒಳಗೊಳ್ಳುವ ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ಸಕ್ರಿಯ ಸಹಭಾಗಿತ್ವ ಹೊಂದಬೇಕು.

# ಆರೋಗ್ಯ

# ಮನೆಯಲ್ಲಿಯೇ ತೂಕ ಇಳಿಸಲು ಸುಲಭ ಮಾರ್ಗಗಳು – ಸ್ಥೂಲಕಾಯ (ಅಧಿಕತೂಕ)

* ಡಾ॥ ಲಕ್ಷ್ಮೀಶ್ ಡಿ.ಆರ್

ಆಧುನಿಕ ಜೀವನ ಶೈಲಿಯಲ್ಲಿ ತಪ್ಪು ಆಹಾರ ಕ್ರಮ ಮತ್ತು ಕಡಿಮೆ ದೈಹಿಕ ವ್ಯಾಯಾಮಗಳಿಂದ ಸ್ಥೂಲಕಾಯ ಸಮಸ್ಯೆ ಸರ್ವೇ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತಿರುವ ಸಮಸ್ಯೆಯಾಗಿದೆ. ಆದ್ದರಿಂದ ಈ ಲೇಖನವನ್ನು ಓದಿ ಕೇಳಿಕೊಂಡು ಮನೆಯಲ್ಲಿಯೇ ಇದ್ದು ಸ್ವಲ್ಪ ತೂಕವನ್ನು ಕಡಿಮೆ ಮಾಡಿಕೊಳ್ಳಬೇಕು ಎನ್ನುವುದು ಮುಖ್ಯ ಉದ್ದೇಶ.

ಸ್ಥೂಲಕಾಯ ಎಂದರೆ ದೇಹದಲ್ಲಿ ಅತಿ ಹೆಚ್ಚು ಕೊಬ್ಬು (ಅಡಿಪೋಸ್) ಅಂಗಾಂಶಗಳಲ್ಲಿ ಸಂಗ್ರಹಗೊಳ್ಳುವುದು. ಅದರಿಂದ ದೇಹವು ಅಗತ್ಯಕ್ಕಿಂತ ಹೆಚ್ಚು ತೂಕವಾಗುವುದು ಎಂದರ್ಥ.

**ಯಾವುದೇ ಚಿಕಿತ್ಸಾ ಕ್ರಮವನ್ನು ಅನುಸರಿಸುವ ಮೊದಲು ವೈದ್ಯರ ಸಲಹೆ ಪಡೆಯುವುದು ಅತ್ಯವಶ್ಯ**




## ಕಾರಣಗಳು:

1. ತಪ್ಪು ಆಹಾರಕ್ರಮ (ಹೆಚ್ಚು ಕೊಬ್ಬಿನಾಂಶದ ಆಹಾರ ಸೇವನೆ)
2. ವ್ಯಾಯಾಮ ಇಲ್ಲದೇ ಇರುವುದು
3. ಜನ್ಮತ ಬರುವ ಬೊಜ್ಜು
4. ಹೆಚ್ಚು ಮದ್ಯಪಾನ ಸೇವನೆ
5. ಹೈಪೋಥೈರಾಯ್ಡಿಸಂ (ಕಡಿಮೆಯಾದ ಥೈರಾಯಿಡ್ ಹಾರ್ಮೋನಿನ ಪ್ರಮಾಣ)
6. ಹೆಣ್ಣು ಮಕ್ಕಳಲ್ಲಿ ಹಾರ್ಮೋನಲ್ ಅಸಮತೋಲನದಿಂದ ಬರುವ ಬೊಜ್ಜು

* ಸಹಾಯಕ ಪ್ರಾಧ್ಯಾಪಕರು, ಎಸ್.ಡಿ. ಎಂ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕಾಲೇಜು, ಧರ್ಮಸ್ಥಳ.

7. ಅಧಿಕ ಕರಿದ ಪದಾರ್ಥಗಳ ಸೇವನೆಯಿಂದ
8. ಮಾನಸಿಕ ಅಸಮತೋಲನ
9. ಔಷಧಿಗಳ ಅಡ್ಡ ಪರಿಣಾಮ
10. ಕುಶಿಂಗ್ ಸಿಂಡ್ರೋಮ್ (ಕುಶಿಂಗ್ ಕಾಯಿಲೆ)

## ನಮ್ಮ ತೂಕದ ಅಳತೆ ಮತ್ತು ಗ್ರೇಡ್‌ಗಳು

ಪ್ರತಿ ಮನುಷ್ಯ ತನ್ನ ಎತ್ತರಕ್ಕೆ ಅನುಗುಣವಾಗಿ ತಮ್ಮ ತೂಕವನ್ನು ಹೊಂದಿರಬೇಕಾಗುತ್ತದೆ. ಇದನ್ನು ಸಾಮಾನ್ಯವಾಗಿ ಅಳೆಯುವುದು ದೇಹತೂಕ ಸೂಚಿ (ಬಾಡಿ ಮಾಸ್‌ಇಂಡೆಕ್ಸ್– ಬಿ.ಎಂ.ಐ) ಎನ್ನುತ್ತೇವೆ. ಇದರ ಪ್ರಕಾರ ತೂಕವನ್ನು ಕಿಲೋಗ್ರಾಂಗಳಲ್ಲಿ ಮತ್ತು ಎತ್ತರವನ್ನು ಮೀಟರುಗಳಲ್ಲಿನ ವರ್ಗದಿಂದ ಬಾಗಿಸಿ ಲೆಕ್ಕ ಮಾಡುವುದು.

ಈ ಸೂತ್ರದ ಮೂಲಕ ನಿಮ್ಮ ದೇಹದ ತೂಕವನ್ನು ಅಳೆದು ನಿಮ್ಮ ಬಿ.ಎಂ.ಐ ಅನ್ನು ತಿಳಿದುಕೊಳ್ಳಿ. ಈ ಕೆಳಗೆ ತಿಳಿಸಿದಂತೆ ಅದನ್ನು ಅರಿತುಕೊಳ್ಳಿ

| | |
|---|---|
| ಬಿ.ಎಂ.ಐ | : <18.5: ಅಪೌಷ್ಟಿಕತೆ |
| 18.5– 24.9 | : ನಾರ್ಮಲ್‌ತೂಕ |
| 25– 29.9 | : ಗ್ರೇಡ್ 1 ಸ್ಥೂಲಕಾಯ |
| 30– 39.9 | : ಗ್ರೇಡ್ 2 ಸ್ಥೂಲಕಾಯ |
| >40 | : ಮಾರ್ಬಿಡ್ ಸ್ಥೂಲಕಾಯ |

ಈ ಮೇಲೆ ತಿಳಿಸಿದಂತೆ ನಿಮ್ಮ ಬಿ.ಎಂ.ಐ ಅನ್ನು ಅಳೆದು ನೋಡಿಕೊಂಡು, ಅವಶ್ಯಕತೆ ಇದ್ದರೆ ಅಧಿಕ ತೂಕವನ್ನು ಕಡಿಮೆ ಮಾಡಿಕೊಳ್ಳಿ.

### ಸ್ಥೂಲಕಾಯದಿಂದಾಗುವಅಡ್ಡ ಪರಿಣಾಮಗಳು

1. ಅಧಿಕ ರಕ್ತದೊತ್ತಡ
2. ಮಧುಮೇಹ (ಸಕ್ಕರೆ ಕಾಯಿಲೆ)
3. ಹೃದಯಾಘಾತ
4. ಮೊಣಕಾಲಿನ ಕೀಲುನೋವು
5. ಸೊಂಟ ನೋವು
6. ಬಂಜೆತನ
7. ವೆರಿಕೋಸ್ ವೇನ್
8. ಹರ್ನಿಯಾ
9. ಮಾನಸಿಕ ಖಿನ್ನತೆ

## ಮನೆಯಲ್ಲಿಯೇ ತೂಕ ಇಳಿಸಲು ಸುಲಭ ಮಾರ್ಗಗಳು

1. ಮೊದಲನೆಯದಾಗಿ ಆಹಾರ ಪದ್ಧತಿಯಲ್ಲಿ ಬದಲಾವಣೆ. ತಿನ್ನುವ ಆಹಾರವನ್ನು ದಿನನಿತ್ಯ ಸೇವನೆಯಿಂದ ಅರ್ಧದಷ್ಟು ಕಡಿಮೆ ಮಾಡುವುದು.
2. ಪ್ರತಿನಿತ್ಯ ಆಹಾರದಲ್ಲಿ ಹೆಚ್ಚು ತಾಜಾ ಹಣ್ಣು ಮತ್ತು ತರಕಾರಿಗಳಿರಲಿ
3. ದಿನನಿತ್ಯ ಒಂದು ಗಂಟೆ ಕಾಲ ತಪ್ಪದೇ ವ್ಯಾಯಾಮ ಮಾಡುವುದು
4. ದಿನನಿತ್ಯ ಮುಂಜಾನೆ ಒಂದು ಲೋಟ ತಣ್ಣೀರಿಗೆ ನಿಂಬೆರಸ ಮತ್ತು ಒಂದು ಚಮಚ ಜೇನುತುಪ್ಪ ಹಾಕಿಕೊಂಡು ಕುಡಿಯುವುದು
5. ಹೆಚ್ಚು ನಾರಿನ ಅಂಶ ಇರುವ ಆಹಾರವನ್ನು ಸೇವಿಸುವುದು
6. ಪ್ರತಿಯೊಬ್ಬರು ತಪ್ಪದೇ ಮನಸ್ಸಿನಲ್ಲಿರಿಸಿ ಕೊಳ್ಳಬೇಕಾದ ಅಂಶವೆಂದರೆ "ತಿನ್ನಿ ವ್ಯಾಯಾಮ ಮಾಡಿ ಅದನ್ನು ಕರಗಿಸಿ. ವ್ಯಾಯಾಮ ಇಲ್ಲವೆಂದರೆ ತಿನ್ನುವುದನ್ನು ನಿಲ್ಲಿಸಿ"
7. ವಾರದಲ್ಲಿ ಒಂದು ದಿನ ಉಪವಾಸ

## ಬೇಡವಾದವುಗಳು

- ಕರಿದ ಪದಾರ್ಥಗಳು, ಮಸಾಲೆ ಪದಾರ್ಥಗಳು, ಅಧಿಕ ಉಪ್ಪು ಸೇವನೆ
- ಅಧಿಕ ಮಾಂಸಾಹಾರ ಸೇವನೆ
- ಮೊಟ್ಟೆ, ಪಾಲಿಶ್ ಮಾಡಿದ ಅಕ್ಕಿ
- ಐಸ್‌ಕ್ರೀಂ, ಜಂಕ್‌ಫುಡ್, ಫಾಸ್ಟ್‌ಫುಡ್‌ಗಳು ಬೇಡ

- ಒಮ್ಮೆಲೆ ತೂಕವನ್ನು ಕಡಿಮೆ ಮಾಡುವುದು ಬೇಡ
- ಕ್ರಮೇಣವಾಗಿ ತೂಕವನ್ನು ಇಳಿಸಬೇಕು
- ಅಧಿಕ ಮದ್ಯಪಾನ ಬೇಡ

ಯಾವುದೇ ರೀತಿಯ ಚಿಕಿತ್ಸಾ ಪದ್ಧತಿಗಳನ್ನು ಅಳವಡಿಸಿಕೊಳ್ಳುವ ಮೊದಲು ಸೂಕ್ತವಾದ ವೈದ್ಯರ ಸಲಹೆ ಪಡೆಯುವದು ಅತ್ಯವಶ್ಯ. ಬಹಳ ಸಂದರ್ಭಗಳಲ್ಲಿ ಮನಸ್ಸಿಗೆ ಬಂದ ಹಾಗೆ ತೂಕ ಇಳಿಸುವ ಕ್ರಮಗಳು ಅಳವಡಿಸಿಕೊಂಡು ಅದರಿಂದ ಆಗುವ ಉಪಯೋಗಕ್ಕಿಂತ ಹೆಚ್ಚು ಅಡ್ಡ ಪರಿಣಾಮಗಳು ಆಗುತ್ತವೆ.

## ಪ್ರಕೃತಿ ಮತ್ತು ಯೋಗಚಿಕಿತ್ಸೆ

ಮನೆಯಲ್ಲಿ ಮಾಡಿಕೊಂಡು ಅಳವಡಿಸಿಕೊಳ್ಳ ಬಹುದಾದ ಪದ್ಧತಿ.

## ಉಪವಾಸ ಚಿಕಿತ್ಸೆ:

ಉಪವಾಸ ಚಿಕಿತ್ಸೆಯನ್ನು ಮನೆಯಲ್ಲಿ ಮಾಡಬಹುದು. ಆದರೆ ದೇಹದ ತೂಕ ಮಾತ್ರವಲ್ಲದೇ ತಮಗಿರುವ ಬೇರೆ ಕಾಯಿಲೆಗಳನ್ನು ಗಮನದಲ್ಲಿರಿಕೊಳ್ಳುವುದು ಅತ್ಯವಶ್ಯ. ಯಾರಿಗೆ ಮಧುಮೇಹ ಮತ್ತು ದೀರ್ಘಕಾಲದಿಂದ ಔಷಧಿ ತೆಗೆದುಕೊಳ್ಳುತ್ತಿರುವವರು ಉಪವಾಸವನ್ನು ಮಾಡಬಾರದು. ತಮ್ಮ ದೇಹ ಮತ್ತು





ಮಾಡುತ್ತಿರುವ ಕೆಲಸಗಳಿಗೆ ಅನುಗುಣವಾಗಿ ಉಪವಾಸವನ್ನು ಮಾಡಬೇಕು. ತಾವು ಅಳವಡಿಸಿಕೊಳ್ಳ ಬಹುದಾದ ಬೇರೆ ಬೇರೆ ರೀತಿಯ ಉಪವಾಸ ಪದ್ಧತಿಗಳೆಂದರೆ,

1. **ನೀರಿನ ಉಪವಾಸ–** ಎಂದರೆ ಬರೀ ನೀರನ್ನು ಕುಡಿದು ಉಪವಾಸ ಮಾಡುವುದು (ಸುಮಾರು 3–4 ಲೀಟರ್ ಅನ್ನು ಒಂದು ದಿನಕ್ಕೆ ಕುಡಿಯಬೇಕು)
2. **ಜ್ಯೂಸ್ ಉಪವಾಸ–** ಬೇರೆ ಬೇರೆ ರೀತಿಯ ತಾಜಾ ಹಣ್ಣಿನ ತಾಜಾ ತರಕಾರಿಯ ಅಥವಾ ತಾಜಾ ಸೊಪ್ಪಿನ ರಸವನ್ನು ಕುಡಿದು ಉಪವಾಸ ಮಾಡುವುದು (ಸುಮಾರು 4–6 ಗ್ಲಾಸ್‌ಜ್ಯೂಸ್ ಒಂದು ದಿನಕ್ಕೆ) ಜ್ಯೂಸ್ ಮಾತ್ರವಲ್ಲದೇ ಅದರೊಂದಿಗೆ ಬಹಳ ನೀರು ಕುಡಿಯುವುದು ಅತ್ಯವಶ್ಯ.
3. **ಹಣ್ಣಿನ ಉಪವಾಸ–** ಬೇರೆ ಬೇರೆ ರೀತಿಯ ತಾಜಾ ಹಣ್ಣುಗಳನ್ನು ಸೇವಿಸಿಕೊಂಡು ಉಪವಾಸ ಮಾಡುವುದು. ತಮ್ಮ ದೈನಂದಿನ ದೈಹಿಕ ಕೆಲಸ ಮತ್ತು ದೇಹ ಸಾಮರ್ಥ್ಯದ ಮೇಲೆ ಯಾವ ರೀತಿಯ ಉಪವಾಸ ಮಾಡಬೇಕು ಎನ್ನುವುದು ಅವಲಂಬಿತವಾಗಿರುತ್ತದೆ.

**ಸೂಚನೆ:** ಯಾವುದೇ ರೀತಿಯ ಉಪವಾಸ ಮಾಡಿದರೂ ಸುಮಾರು 3–4 ಲೀಟರ್ ನೀರು ಕುಡಿಯುವುದು ಅತ್ಯವಶ್ಯ.

## ದೈಹಿಕ ವ್ಯಾಯಾಮ:

ದಿನಕ್ಕೆ ಸುಮಾರು 45 ನಿಮಿಷದಿಂದ ಒಂದು ಗಂಟೆಯ ಕಾಲ ದೈಹಿಕ ವ್ಯಾಯಾಮವನ್ನು ಮಾಡುವುದು. ಕೇವಲ ದೇಹದ ತೂಕ ಮಾತ್ರ ಕಡಿಮೆಯಾಗುವುದಲ್ಲದೆ ಸ್ಥೂಲಕಾಯ ಬರುವ ಇತರೆ ಅಡ್ಡ ಪರಿಣಾಗಳು ನಿಯಂತ್ರಣಗೊಳ್ಳುತ್ತದೆ. ಆದ್ದರಿಂದ ದಿನನಿತ್ಯ ದೈಹಿಕ ವ್ಯಾಯಾಮ ಮಾಡುವುದು ಅತ್ಯವಶ್ಯಕ.

## ಆಹಾರ ಪದ್ಧತಿ:

ಒಳ್ಳೆಯ ಪೌಷ್ಠಿಕ ಆಹಾರವನ್ನು ಸೇವಿಸಬೇಕು ಹೆಚ್ಚು ತಾಜಾ ತರಕಾರಿಗಳು, ತಾಜಾ ಹಣ್ಣುಗಳು, ಮತ್ತು ತಾಜಾ ಸೊಪ್ಪುಗಳನ್ನು ಬೇಯಿಸಿ ಸೇವಿಸಬೇಕು. ಬಹಳ ಜನದೇಹದ ತೂಕ ಕಡಿಮೆ ಮಾಡಿಕೊಳ್ಳಬೇಕು ಎಂದು ಮನಸ್ಸಿಗೆ ಬಂದ ಹಾಗೆ ಆಹಾರವನ್ನು ಸೇವಿಸುತ್ತಿರುತ್ತಾರೆ. ಹಾಗೆ ಮಾಡುವುದರಿಂದ ಗ್ಯಾಸ್ಟ್ರಿಕ್ ಮತ್ತು ಹಲವಾರು ಸಮಸ್ಯೆಗಳು ಬರುತ್ತವೆ. ಆದ್ದರಿಂದ ತಾವು ಸೇವಿಸುತ್ತಿರುವ ಆಹಾರವನ್ನೇ ಕ್ರಮ ಬದ್ಧವಾಗಿ ಸೇವಿಸಿದಾಗ ದೇಹಕ್ಕೆ ಯಾವುದೇ ತೊಂದರೆಯಾಗದೆ



ತೂಕವನ್ನು ಕಡಿಮೆ ಮಾಡಿಕೊಳ್ಳಬಹುದು ಮತ್ತು ಸಮತೋಲನವನ್ನು ಕಾಪಾಡಿಕೊಳ್ಳಬಹುದು.



## ಯೋಗಚಿಕಿತ್ಸೆ:

ಬೇರೆ ಬೇರೆ ರೀತಿಯ ಯೋಗಾಸನಗಳು, ಪ್ರಾಣಾಯಾಮಗಳು ಮತ್ತು ಧ್ಯಾನವನ್ನು ಮಾಡುವುದರಿಂದ ಮನಸ್ಸನ್ನು ಹಿಡಿತದಲ್ಲಿರಿ ಸಬಹುದು. ದಿನನಿತ್ಯ ಒಂದು ಗಂಟೆ ಕಾಲ ಯೋಗ ಮಾಡುವುದರಿಂದ ದೇಹದತೂಕವನ್ನು ನಿಯಂತ್ರಣದಲ್ಲಿ ಡಬಹುದು. ತಿನ್ನುವ ಆಹಾರದ ಮೇಲೆ ನಿಯಂತ್ರಣ ಬರುತ್ತದೆ.

ಇತ್ತೀಚಿನ ದಿನಗಳಲ್ಲ ತೂಕ ಕಡಿಮೆ ಮಾಡಿಕೊಳ್ಳಲು ಬೇರೆ ಬೇರೆ ರೀತಿಯ ಚಿಕಿತ್ಸೆಗಳು ಉದ್ಭವವಾಗಿವೆ. ಆದರೆ ಯಾವರೀತಿಯ ಚಿಕಿತ್ಸೆ ತನ್ನ ದೇಹದ ಪ್ರಕೃತಿಗೆ ಒಗ್ಗುತ್ತದೆ ಎನ್ನುವುದು ಬಹಳ ಮುಖ್ಯ. ಮನಸ್ಸಿಗೆ ಬಂದ ಹಾಗೆ ತಪ್ಪು ಚಿಕಿತ್ಸಾ ಪದ್ಧತಿಯನ್ನು ಅಳವಡಿಸಿಕೊಂಡರೆ ದೇಹದ ಮೇಲೆ ಅಡ್ಡಪರಿಣಾಮವಾಗುವುದಲ್ಲದೆ ಇನ್ನೂ ಇತರ ಕಾಯಿಲೆಗಳು ದೇಹವನ್ನು ಆಕ್ರಮಿಸಿಕೊಳ್ಳುತ್ತವೆ. ಆದ್ದರಿಂದಯಾವುದೇ ರೀತಿಯಚಿಕಿತ್ಸಾ ಪದ್ಧತಿಯನ್ನು ಅಳವಡಿಸಿಕೊಳ್ಳುವ ಮೊದಲು ವೈದ್ಯರ ಸೂಕ್ತ ಸಲಹೆ ಪಡೆಯುವುದು ಅತ್ಯವಶ್ಯಕ.

ಕವಿಯ(ಕ್ಷ) ಪ್ರಶ್ನೆಗಳು...

# ಶೌಚಾಲಯ ನಿರ್ಮಿಸಿಕೊಳ್ಳಲು ನೋಟೀಸ್ ಪಡೆಯಬೇಕೇ?

ತಮ್ಮ ಮನೆಯಲ್ಲಿಯೇ ಶೌಚಗೃಹ ಕಟ್ಟಿಸಿಕೊಂಡಿರದ ಗ್ರಾಮ ಪಂಚಾಯತ್‌ನ ಉಪಾಧ್ಯಕ್ಷರು ಮತ್ತು ಸದಸ್ಯರಿಗೆ ಒಂದು ವಾರದೊಳಗೆ ಶೌಚಗೃಹ ನಿರ್ಮಿಸಿಕೊಳ್ಳದಿದ್ದರೆ ಸದಸ್ಯತ್ವ ರದ್ದುಪಡಿಸುವ ಬಗ್ಗೆ ಎಚ್ಚರಿಕೆ ನೀಡಲಾಗಿರುವ ಸುದ್ದಿಯನ್ನು ಇತ್ತೀಚಿನ ದಿನಪತ್ರಿಕೆಯೊಂದರಲ್ಲಿ ಓದಿ ನಿಜಕ್ಕೂ ಆಶ್ಚರ್ಯ, ಜೊತೆಗೆ ವಿಷಾದವೂ ಉಂಟಾಯಿತು. 'ಸಂಪೂರ್ಣ ಸ್ವಚ್ಛತಾ ಆಂದೋಲನ' ಎಂಬ ಕಾರ್ಯಕ್ರಮ 2005ರಿಂದಲೇ ಜಾರಿಗೊಂಡು ಪ್ರಸಕ್ತ 'ನಿರ್ಮಲ ಭಾರತ ಅಭಿಯಾನ' ಎಂಬ ಯೋಜನೆಗಳೊಂದಿಗೆ ಇಡೀ ರಾಜ್ಯವನ್ನೇ 2019ರೊಳಗೆ ಬಯಲು ಮಲ ವಿಸರ್ಜನಾ ಮುಕ್ತ ಪ್ರದೇಶವನ್ನಾಗಿ ಪರಿವರ್ತಿಸಲು ಸರ್ಕಾರವು ಪಣತೊಟ್ಟು ಕಾರ್ಯನಿರ್ವಹಿಸುತ್ತಿದೆ.

ಇಂತಹ ಯೋಜನೆಗಳ ಬಗ್ಗೆ ಗ್ರಾಮೀಣ ಜನತೆಯ ಮನವೊಲಿಸುವುದು ಅಧಿಕಾರಿಗಳೊಂದಿಗೆ ಚುನಾಯಿತ ಪ್ರತಿನಿಧಿಗಳ ಪಾತ್ರ ಬಹುಮುಖ್ಯವಾಗಿದ್ದು ಅವರ ಸಹಕಾರ ಅಗತ್ಯವಾಗಿರುತ್ತದೆ.




## ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು:

1. ಸಂಪ್ರದಾಯದ ಹೆಸರಿನಲ್ಲಿಯೋ ಅಥವಾ ಮೂಢನಂಬಿಕೆಯೊಂದಿಗೆ ತಮ್ಮ ತಮ್ಮ ಮನೆಗಳಲ್ಲಿ ಶೌಚಾಲಯ ಕಟ್ಟಿಸಿಕೊಳ್ಳುವುದನ್ನು ತಪ್ಪಿಸುವ ಗ್ರಾಮಸ್ಥರನ್ನು ಇನ್ನೂ ಕೆಲವು ಹಳ್ಳಿಗಳಲ್ಲಿ ಕಾಣಬಹುದಾಗಿದ್ದು, ಇದಕ್ಕೆ ಯಾರು ಹೊಣೆ?

2. ಬಯಲು ಮಲ ವಿಸರ್ಜನೆಯಿಂದಾಗುವ ತೊಂದರೆಗಳ ಬಗ್ಗೆ ಮನವರಿಕೆ ಮಾಡಿಕೊಡಲು ಅಧಿಕಾರಿಗಳೊಂದಿಗೆ ಚುನಾಯಿತ ಪ್ರತಿನಿಧಿಗಳು ಸಹಕರಿಸಬೇಕಲ್ಲವೇ?

3. ಇತರರಿಗೆ ಮಾದರಿಯಾಗಬೇಕಾದವರೇ ಯೋಜನೆಯ ಬಗ್ಗೆ ಅನಾಸಕ್ತಿ ಏಕೆ?

4. ಇನ್ನಾದರೂ ಸರ್ಕಾರದ ಈ ಯೋಜನೆಗೆ ನಾವೆಲ್ಲರೂ ಸ್ಪಂದಿಸಿ ಸಹಕರಿಸೋಣವೇ?

5. ಸ್ವಯಂ ಪ್ರೇರಣೆಯಿಂದ ಸಾರ್ವಜನಿಕರಾಧಿಯಾಗಿ ಎಲ್ಲರೂ ಯೋಜನೆಯ ಬಗ್ಗೆ ಆಸಕ್ತಿ ತೋರಿದರೆ ನಮ್ಮ ರಾಜ್ಯವನ್ನು 'ಬಯಲು ಬಹಿರ್ದೆಸೆ ಮುಕ್ತ' ರಾಜ್ಯವನ್ನಾಗಿ ಮಾಡಬಹುದಲ್ಲವೇ?

**– ಶ್ರೀನಿವಾಸ ವಿ.**
ನಂ.6, 13ನೇ ಅಡ್ಡರಸ್ತೆ, ಕೇತಮಾರನಹಳ್ಳಿ,
ರಾಜಾಜಿನಗರ, ಬೆಂಗಳೂರು 560010

# ಗ್ರಾಮ ಪಂಚಾಯತಿಗಳ ಜಿಲ್ಲಾವಾರು ಪಂಚತಂತ್ರ ಪ್ರಗತಿಯ ವರದಿ ದಿನಾಂಕ 28-07-2014ರಲ್ಲಿದ್ದಂತೆ

| ಜಿಲ್ಲೆಯ ಹೆಸರು | ಪಂಚಾಯತಿಗಳ ಸಂಖ್ಯೆ | 2011-12ನೇ ಸಾಲಿನ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂಗಳು | 2012-13ನೇ ಸಾಲಿನ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂಗಳು | 2013-14ನೇ ಸಾಲಿನಲ್ಲಿ ಬೇಡಿಕೆಯಂತೆ ಶೇ 60ಕ್ಕಿಂತ ಹೆಚ್ಚು ಆಸ್ತಿ ತೆರಿಗೆ ವಸೂಲಾತಿ ಮಾಡಿರುವ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ರಾಜ್ಯದ ಸರಾಸರಿಗಿಂತ ಶೇಕಡ 75ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ಪಡೆದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ಶೇಕಡ 95 ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ನಿಗದಿತ ಸಮಯದಲ್ಲಿ ವಿತರಿಸಿದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ, ಹಿಂದಿನ ಮಾಹೆಯಲ್ಲಿ ನಡೆಸಿದ ಸಾಮಾನ್ಯ ಸಭೆ ಹಾಗೂ ಅದರ ನಡವಳಿಯನ್ನು ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡಿರುವ ಶೇಕಡವಾರು ಗ್ರಾ.ಪಂ.ಗಳು | ಹಿಂದಿನ ದಿನದ ಹಾಜರಾತಿ ದಾಖಲಿಸಿದ ಶೇಕಡವಾರು ಗ್ರಾ.ಪಂ.ಗಳು | ಒಟ್ಟಾರೆ ಶೇಕಡ ವಾರು ಸಾಧನೆ | ಶ್ರೇಣಿ |
|---|---|---|---|---|---|---|---|---|---|---|
| ಉಡುಪಿ | 146 | 100 | 99 | 41 | 48 | 83 | 81 | 80 | 76 | 1 |
| ದಕ್ಷಿಣ ಕನ್ನಡ | 203 | 100 | 79 | 58 | 40 | 90 | 46 | 84 | 71 | 2 |
| ಉತ್ತರ ಕನ್ನಡ | 207 | 100 | 25 | 50 | 57 | 97 | 74 | 88 | 70 | 3 |
| ಧಾರವಾಡ | 127 | 100 | 100 | 0 | 94 | 99 | 27 | 63 | 69 | 4 |
| ಹಾವೇರಿ | 208 | 100 | 99 | 0 | 65 | 87 | 48 | 50 | 64 | 5 |
| ರಾಮನಗರ | 130 | 100 | 100 | 0 | 92 | 96 | 22 | 43 | 64 | 6 |
| ಮೈಸೂರು | 235 | 100 | 85 | 1 | 74 | 84 | 53 | 39 | 62 | 7 |
| ಕೊಡಗು | 98 | 100 | 94 | 23 | 6 | 87 | 39 | 83 | 61 | 8 |
| ಶಿವಮೊಗ್ಗ | 260 | 100 | 99 | 6 | 43 | 90 | 38 | 52 | 61 | 9 |
| ಬಾಗಲಕೋಟೆ | 161 | 100 | 97 | 4 | 73 | 98 | 30 | 26 | 61 | 10 |
| ಚಿಕ್ಕಮಗಳೂರು | 226 | 100 | 100 | 19 | 14 | 66 | 46 | 70 | 59 | 11 |
| ದಾವಣಗೆರೆ | 230 | 100 | 81 | 3 | 88 | 96 | 24 | 23 | 59 | 12 |
| ಚಿತ್ರದುರ್ಗ | 185 | 100 | 99 | 0 | 62 | 81 | 17 | 37 | 56 | 13 |
| ಮಂಡ್ಯ | 232 | 100 | 17 | 0 | 79 | 97 | 33 | 67 | 56 | 14 |
| ಬೆಂಗಳೂರು (ಗ್ರಾ) | 98 | 100 | 100 | 0 | 25 | 54 | 37 | 75 | 55 | 15 |
| ಹಾಸನ | 258 | 100 | 100 | 3 | 22 | 76 | 36 | 44 | 54 | 16 |
| ಚಿಕ್ಕಬಳ್ಳಾಪುರ | 151 | 100 | 55 | 1 | 60 | 88 | 22 | 46 | 53 | 17 |
| ಬೆಂಗಳೂರು (ನ) | 86 | 100 | 29 | 8 | 47 | 62 | 38 | 86 | 52 | 18 |
| ಬೆಳಗಾವಿ | 486 | 99 | 100 | 1 | 20 | 60 | 19 | 53 | 50 | 19 |
| ಬಿಜಾಪುರ | 199 | 100 | 100 | 1 | 27 | 58 | 20 | 35 | 48 | 20 |
| ಗದಗ | 106 | 100 | 13 | 1 | 84 | 93 | 18 | 27 | 48 | 21 |
| ತುಮಕೂರು | 321 | 100 | 100 | 0 | 22 | 50 | 12 | 47 | 47 | 22 |
| ಬಳ್ಳಾರಿ | 189 | 100 | 77 | 2 | 21 | 61 | 30 | 35 | 46 | 23 |
| ಗುಲ್ಬರ್ಗಾ | 220 | 100 | 55 | 0 | 71 | 57 | 19 | 11 | 44 | 24 |
| ಕೋಲಾರ | 156 | 100 | 57 | 0 | 19 | 73 | 9 | 44 | 43 | 25 |
| ಬೀದರ | 175 | 100 | 89 | 0 | 6 | 39 | 19 | 29 | 40 | 26 |
| ಕೊಪ್ಪಳ | 134 | 100 | 38 | 2 | 19 | 72 | 9 | 44 | 40 | 27 |
| ಚಾಮರಾಜನಗರ | 120 | 100 | 9 | 0 | 32 | 90 | 26 | 27 | 40 | 28 |
| ರಾಯಚೂರು | 165 | 99 | 0 | 1 | 17 | 48 | 9 | 38 | 30 | 29 |
| ಯಾದಗಿರಿ | 117 | 100 | 8 | 0 | 0 | 42 | 0 | 6 | 22 | 30 |

# ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಜಿಲ್ಲಾವಾರು ಸಕಾಲ ಪ್ರಗತಿ ವರದಿ (ಜುಲೈ 2014)

| ಜಿಲ್ಲೆ | ತಿಂಗಳಲ್ಲಿ ಜಿಎಸ್‌ಸಿ ಸ್ವೀಕೃತಿ (ಸಂಖ್ಯೆ) A | ತಿಂಗಳಲ್ಲಿ ಜಿಎಸ್‌ಸಿ ವಿಲೇವಾರಿ B | ವಿಳಂಬವಾಗಿ ವಿಲೇವಾರಿ ಆಗಿರುವುದು (ಶೇಕಡವಾರು) C | ವಿಳಂಬ ವಿಲೇವಾರಿ ಆಧರಿಸಿ ಪಡೆದ ಶ್ರೇಣಿ D | ಒಂದು ಲಕ್ಷ ಜನಸಂಖ್ಯೆಗೆ ಸ್ವೀಕೃತಿಯಾದ ಜಿಎಸ್‌ಸಿಗಳು E | ಒಂದು ಲಕ್ಷ ಜನಸಂಖ್ಯೆಗೆ ಜಿಎಸ್‌ಸಿ ಸ್ವೀಕೃತಿ ಆಧರಿಸಿ ಪಡೆದ ಶ್ರೇಣಿ F | ಅಂತಿಮವಾಗಿ ಪಡೆದ ಶ್ರೇಣಿ [(ಆ)ಯ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 30 ರಷ್ಟು ಮತ್ತು (ಈ)ನ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 70 ರಷ್ಟು] G |
|---|---|---|---|---|---|---|---|
| ಚಿತ್ರದುರ್ಗ | 8865 | 8731 | 0.5 | 9 | 554 | 2 | 1 |
| ಹಾವೇರಿ | 6597 | 6602 | 0.5 | 9 | 439 | 3 | 2 |
| ಮಂಡ್ಯ | 6123 | 5198 | 0.1 | 3 | 340 | 6 | 3 |
| ರಾಯಚೂರು | 15067 | 9336 | 1 | 15 | 793 | 1 | 4 |
| ಗದಗ | 2832 | 2722 | 0.1 | 3 | 283 | 7 | 5 |
| ರಾಮನಗರ | 4171 | 4281 | 0.6 | 12 | 417 | 4 | 6 |
| ಚಾಮರಾಜನಗರ | 2788 | 2642 | 0.6 | 12 | 278 | 8 | 7 |
| ಚಿಕ್ಕಬಳ್ಳಾಪುರ | 2401 | 2335 | 0.1 | 3 | 200 | 12 | 8 |
| ಬಾಗಲಕೋಟೆ | 3993 | 4085 | 0.4 | 8 | 221 | 10 | 9 |
| ಬೆಳಗಾವಿ | 19388 | 19214 | 3.2 | 21 | 412 | 5 | 10 |
| ಶಿವಮೊಗ್ಗ | 2851 | 2509 | 0.2 | 6 | 167 | 14 | 11 |
| ಮೈಸೂರು | 6096 | 5780 | 0.7 | 14 | 210 | 11 | 12 |
| ಚಿಕ್ಕಮಗಳೂರು | 2830 | 2563 | 3.2 | 21 | 257 | 9 | 13 |
| ದಾವಣಗೆರೆ | 3231 | 3301 | 1.2 | 16 | 170 | 13 | 14 |
| ಉಡುಪಿ | 1564 | 1527 | 0.5 | 9 | 142 | 16 | 15 |
| ಉತ್ತರ ಕನ್ನಡ | 1791 | 1900 | 0 | 1 | 127 | 20 | 16 |
| ಧಾರವಾಡ | 1476 | 1485 | 0 | 1 | 82 | 23 | 17 |
| ಕೊಪ್ಪಳ | 1183 | 982 | 0.3 | 7 | 91 | 22 | 18 |
| ತುಮಕೂರು | 4231 | 4134 | 4.8 | 24 | 162 | 15 | 19 |
| ಕೋಲಾರ | 1968 | 1883 | 2.5 | 19 | 131 | 18 | 20 |
| ಬೆಂಗಳೂರು ಗ್ರಾಮಾಂತರ | 1271 | 1358 | 24 | 30 | 141 | 17 | 21 |
| ಬಿಜಾಪುರ | 2726 | 2438 | 6.9 | 26 | 129 | 19 | 22 |
| ದಕ್ಷಿಣ ಕನ್ನಡ | 1617 | 1510 | 2 | 18 | 80 | 24 | 23 |
| ಹಾಸನ | 1709 | 1712 | 9.3 | 28 | 100 | 21 | 24 |
| ಬೆಂಗಳೂರು | 5862 | 4171 | 2.8 | 20 | 61 | 25 | 25 |
| ಕೊಡುಗು | 204 | 211 | 1.9 | 17 | 40 | 28 | 26 |
| ಬಳ್ಳಾರಿ | 1419 | 1281 | 3.7 | 23 | 56 | 26 | 27 |
| ಗುಲ್ಬರ್ಗಾ | 1337 | 1272 | 6.6 | 25 | 53 | 27 | 28 |
| ಬೀದರ್ | 507 | 390 | 9.2 | 27 | 29 | 29 | 29 |
| ಯಾದಗಿರಿ | 260 | 251 | 11.2 | 29 | 23 | 30 | 30 |

ಕರ್ನಾಟಕ ಸರ್ಕಾರ

ಗ್ರಾಅಪ 175 ಉಖಾಯೋ 2012

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 15-07-2014

# ಸುತ್ತೋಲೆ

**ವಿಷಯ:** ನಿರ್ಮಲ್ ಭಾರತ್ ಅಭಿಯಾನ ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಹಣ ಸಂದಾಯಗಳನ್ನು ಪ್ರತಿ ಮನೆಗೂ ಪ್ರತ್ಯೇಕವಾದ ಶೌಚಾಲಯಗಳ ಫಲಾನುಭವಿಗಳಿಗೆ ಬಿಡುಗಡೆ ಮಾಡುವ ಕುರಿತು ಜಂಟಿ ಸುತ್ತೋಲೆ

**ಉಲ್ಲೇಖ:** ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಜಂಟಿ ಕಾರ್ಯದರ್ಶಿಯವರ ಪತ್ರದ ಸಂಖ್ಯೆ ಎ-11017/41/2013-MGNREGA(UN) ದಿನಾಂಕ: 06-01-2014

ನಿರ್ಮಲ್ ಭಾರತ್ ಅಭಿಯಾನದಡಿಯ ಫಲಾನುಭವಿಗಳು/ಕುಟುಂಬದವರು ನಿರ್ಮಲ್ ಭಾರತ್ ಅಭಿಯಾನದಡಿ ಶೌಚಾಲಯಗಳ ನಿರ್ಮಾಣವು ಪೂರ್ಣಗೊಂಡಿದ್ದರು ಸಹ ಹಣ ಸಂದಾಯಗಳನ್ನು ಪಡೆಯದೇ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇದರ ಪರಿಣಾಮ ಫಲಾನುಭವಿಗಳಿಗೆ ಅನಗತ್ಯವಾಗಿ ಪಾವತಿಯಲ್ಲಿ ವಿಳಂಬವಾಗಿರುತ್ತದೆ. ಇನ್ನು ಮುಂದೆ ಈ ರೀತಿ ಮರುಕಳಿಸದಂತೆ, ಈ ಕೆಳಕಂಡ ಕ್ರಮಗಳನ್ನು ಪಾವತಿಯಲ್ಲಿ ಸುಧಾರಣೆಗಾಗಿ ನೀಡಲಾಗಿದೆ.

1. ನಿರ್ಮಲ್ ಭಾರತ್ ಅಭಿಯಾನದಡಿ ಫಲಾನುಭವಿಗಳ ಪ್ರತಿಯೊಂದು ಪ್ರಕರಣದಲ್ಲಿ ಕಾಮಗಾರಿ ಆದೇಶದ ಜೊತೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಫಲಾನುಭವಿಗಳ ಹೆಸರಿನಲ್ಲಿ ಅಂದರೆ ಅವನ ಅಥವಾ ಆಕೆಯ ಕುಟುಂಬದ ಹೆಸರಿನಲ್ಲಿ ಇ-ಹಾಜರಾತಿ ಪಟ್ಟಿಗಳನ್ನು (e-NMR) ಹೊರಡಿಸುವುದು.

2. ಪುನರ್‌ಚ್ಚರಣೆ - ನಿರ್ಮಲ್ ಭಾರತ್ ಅಭಿಯಾನದಡಿ ಫಲಾನುಭವಿಗಳ ಪ್ರತಿಯೊಂದು ಪ್ರಕರಣಕ್ಕೆ ಕಾಮಗಾರಿ ಆದೇಶದೊಂದಿಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಇ-ಹಾಜರಾತಿ ಪಟ್ಟಿಗಳನ್ನು ತಪ್ಪದೇ ಹೊರಡಿಸುವುದು.

3. ಶೌಚಾಲಯ ನಿರ್ಮಾಣ ಪೂರ್ಣಗೊಂಡನಂತರ ಹಾಗೂ ಬಳಕೆಯಾದ ಕೂಡಲೇ, ನಿರ್ಮಲ್ ಭಾರತ್ ಅಭಿಯಾನ ಯೋಜನೆಯ ವಂತಿಗೆಯಾದ ರೂ. 4700/-ಗಳನ್ನು ತಕ್ಷಣವೇ ಬಿಡುಗಡೆ ಮಾಡಲು ಕ್ರಮವಹಿಸುವುದು.

4. ನಿರ್ಮಲ್ ಭಾರತ್ ಅಭಿಯಾನದಡಿ ಯೋಜನೆಯ ಹಣ ಸಂದಾಯಗಳನ್ನು ಶೌಚಾಲಯಗಳ ನಿರ್ಮಾಣವು ಪೂರ್ಣಗೊಂಡ ನಂತರವೇ, ಮಾಡತಕ್ಕದ್ದು.

5. ಪಾರದರ್ಶಕತೆಯನ್ನು ಕಾಪಾಡುವ ಸಲುವಾಗಿ ಹಾಗೂ ಹಣ ಬಿಡುಗಡೆಯ ಸಂಬಂಧ ಈ ಕೆಳಗೆ ಸೂಚಿಸಿದಂತೆ ಹಣ ಬಿಡುಗಡೆಗೆ ಕ್ರಮವಹಿಸಬಹುದಾಗಿರುತ್ತದೆ. (ವಾಸ್ತವಿಕವಾಗಿ ಅಭಿಯಂತರರ ಅಳತೆ ವಿವರಗಳನ್ನು ಆಧರಿಸಿ ಯೋಜನೆಯ ನಿಯಮಗಳನ್ವಯ)

| ಹಂತ | ಹಂತದ ವಿವರಗಳು | ಬಿಡುಗಡೆ ಮಾಡಬೇಕಾದ ಹಂತವಾರು ಸಂದಾಯಗಳು | | |
|---|---|---|---|---|
| | | ಮಹಾತ್ಮ ಗಾಂಧಿ ನರೇಗಾ ರೂ. ಗಳಲ್ಲಿ | ನಿರ್ಮಲ್ ಭಾರತ್ ಅಭಿಯಾನ ರೂ. ಗಳಲ್ಲಿ | ಒಟ್ಟಾರೆ ಬಿಡುಗಡೆ ರೂ. ಗಳಲ್ಲಿ |
| 1 | ಫಲಾನುಭವಿಗಳಿಗೆ ಕಾಮಗಾರಿ ಆದೇಶದೊಂದಿಗೆ ( e-NMR) ಹೊರಡಿಸುವುದು. | ಇಲ್ಲ | ಇಲ್ಲ | 0 |
| 2 | ಎರಡು ಗುಂಡಿಗಳನ್ನು ತೋಡುವುದು | ರೂ. 764/– | ಇಲ್ಲ | ರೂ. 764/– |
| 3 | ಫ್ಯಾನ್ ಅಳವಡಿಸುವುದು ಮತ್ತು ನೆಲ ಮಟ್ಟದ ಶೌಚಾಲಯ ತಯಾರಿ, ಇಂಗುಗುಂಡಿ ತಯಾರಿ | ರೂ. 3056/– | ಇಲ್ಲ | ರೂ. 3820/– |
| 4 | ನೆಲ ಮಟ್ಟದವರೆಗೆ ಶೌಚಾಲಯ ನಿರ್ಮಾಣ ಹಾಗೂ ಶೌಚಾಲಯ ನಿರ್ಮಾಣಕ್ಕೆ ಅಗತ್ಯ ಸಾಮಗ್ರಿಗಳ ಶೇಖರಣೆಗಳನ್ನು ಆಧರಿಸಿ | ರೂ. 1580/– | ಇಲ್ಲ | ರೂ. 5400/– |
| 5 | ಮೇಲ್ ಚಾವಣಿ ನಿರ್ಮಾಣ | – | ಇಲ್ಲ | – |
| 6 | ಪೂರ್ಣಗೊಂಡು ಮತ್ತು ಶೌಚಾಲಯ ಬಳಕೆಯಾದ ಮೇಲೆ | – | ರೂ. 4700/– | ರೂ. 10,100/– |
| ಒಟ್ಟು | | ರೂ. 5400/– | ರೂ. 4700/– | ರೂ. 10,100/– |

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಹಣಪಾವತಿ ವಿಳಂಬವಾಗಿದ್ದ ಸಂಧರ್ಭಗಳಲ್ಲಿ, ನಿರ್ಮಲ್ ಭಾರತ್ ಅಭಿಯಾನದಡಿ ತಪ್ಪದೇ ರೂ. 4700/–ನ್ನು ಪಾವತಿ ಮಾಡತಕ್ಕದ್ದು.

ಸಹಿ/-
ಮಿಷನ್ ನಿರ್ದೇಶಕರು
ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಇಲಾಖೆ

ಸಹಿ 16/7/14
ಆಯುಕ್ತರು
ಗ್ರಾಮೀಣಾಭಿವೃದ್ಧಿ,
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಇಲಾಖೆ

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ನಿರ್ಮಲ ಭಾರತ್ ಅಭಿಯಾನ ಕಾರ್ಯಕ್ರಮದ ಅನುಷ್ಠಾನಕ್ಕಾಗಿ 2014-15ನೇ ಸಾಲಿಗೆ ನಿಗದಿಯಾಗಿರುವ ಕೇಂದ್ರದ ಪಾಲಿನ 1ನೇ ಕಂತಿನ ಅನುದಾನದಲ್ಲಿ ಭಾಗಶ: ಅನುದಾನವನ್ನು ಬಿಡುಗಡೆಗೊಳಿಸುವ ಕುರಿತು.

**ಓದಲಾಗಿದೆ :** 1. ಸರ್ಕಾರದ ಆದೇಶ ಸಂಖ್ಯೆ.ಎಫ್.ಡಿ.03.ಟಿ.ಎಫ್.ಪಿ.2014,ಬೆಂಗಳೂರು, ದಿ.4.04.2014.

2. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ-W-11023/01/2014 NBA dtd.27.06.2014

3. ಕೇಂದ್ರ ಸರ್ಕಾರದ -D.O.No.W-11023/01/2014-NBA, dtd.4.7.2014

4.ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ,ಎಫ್.ಆರ್&ಸಿ.ಸಿ. ರವರ ಪತ್ರ ಸಂಖ್ಯೆ. C.C.S.No.FD/25/BGL/2014, dtd.5.7.2014

5. ಸರ್ಕಾರಿ ಆದೇಶ ಸಂಖ್ಯೆ.ಗ್ರಾಅಪ/ರಾನೀನೈಮಿ/ನಿಭಾಅ/27/2014-15 ದಿ.19.07.2014

**ಪ್ರಸ್ತಾವನೆ:-**

ನಿರ್ಮಲ ಭಾರತ್ ಅಭಿಯಾನ ಕಾರ್ಯಕ್ರಮದ ಅನುಷ್ಠಾನಕ್ಕಾಗಿ 2014-15ನೇ ಸಾಲಿಗೆ ಕೇಂದ್ರ ಸರ್ಕಾರವು ಉಲ್ಲೇಖ (3)ರನ್ವಯ 2014-15ನೇ ಸಾಲಿನ ವಾರ್ಷಿಕ ಅನುಷ್ಟಾನ ಯೋಜನೆ ಪ್ರಕಾರ ಭೌತಿಕ ಗುರಿ ಹಾಗೂ ಆರ್ಥಿಕ ಗುರಿಯನ್ನು ನಿಗಧಿಪಡಿಸಲಾಗಿದೆ ಹಾಗೂ ಲಭ್ಯವಿರುವ ಅನುದಾನವನ್ನು ಪರಿಗಣಿಸಿ ರೂ.314.88 ಕೋಟಿಗಳನ್ನು ಕೇಂದ್ರದ ಪಾಲಿನ ಅನುದಾನವಾಗಿ ನಿಗದಿಪಡಿಸಲಾಗಿರುತ್ತದೆ. ಉಲ್ಲೇಖ (2)ರಂತೆ ರೂ.6074.66 ಲಕ್ಷಗಳನ್ನು ಸಾಮಾನ್ಯ ವರ್ಗದವರಿಗೆ, ರೂ.2548.95 ಲಕ್ಷಗಳನ್ನು ಪರಿಶಿಷ್ಟವರ್ಗದವರಿಗೆ, ರೂ.664.07 ಲಕ್ಷಗಳು ಒಟ್ಟಾರೆ ರೂ.9287.68 ಲಕ್ಷಗಳನ್ನು ಕೇಂದ್ರದ ಪಾಲಿನ ಅನುದಾನವಾಗಿ ಬಿಡುಗಡೆಗೊಳಿಸಿ ಆದೇಶ ಹೊರಡಿಸಲಾಗಿರುತ್ತದೆ.

2014-15 ನೇ ಸಾಲಿನ ಆಯವ್ಯಯದಲ್ಲಿ ರಾಜ್ಯ ಸರ್ಕಾರ ಒಟ್ಟು ರೂ.14709.18 ಲಕ್ಷಗಳ ಅನುದಾನವನ್ನು ಲೆಕ್ಕ ಶೀರ್ಷಿಕೆ-2215-00-102-0-91 (2215-01-198-2-02) ರಡಿ ನಿಗಧಿಪಡಿಸಲಾಗಿದೆ. ನಿಗಧಿಯಾಗಿರುವ ಅನುದಾನದಲ್ಲಿ ಕೇಂದ್ರದ ಪಾಲಿನ ಅನುದಾನ ಸೇರಿರುವುದರಿಂದ ಆರ್ಥಿಕ ಇಲಾಖೆಯ ಆದೇಶ ಉಲ್ಲೇಖ (1) ರಂತೆ ಈ ಕಚೇರಿಯ ಆದೇಶ ಉಲ್ಲೇಖ(5) ರನ್ವಯ ರೂ.3527.73 ಲಕ್ಷಗಳನ್ನು ಖಜಾನೆಯಿಂದ ಡ್ರಾ ಮಾಡಿ ರಾಜ್ಯ ಸಿ.ಸಿ.ಡಿ.ಯು ಯೋಜನಾ ಬ್ಯಾಂಕ್ ಖಾತೆಗೆ ಜಮಾ ಆಗಿರುತ್ತದೆ.

**ಈ ಕೆಳಕಂಡ ಅಂಶಗಳನ್ನು ಪರಿಗಣಿಸಿ ಮರುಹಂಚಿಕೆ ಮಾಡಿ ಜಿಲ್ಲೆಗಳಿಗೆ ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ.**

- 2014-15ನೇ ಸಾಲಿನ ವಾರ್ಷಿಕ ಅನುಷ್ಟಾನ ಕ್ರಿಯಾ ಯೋಜನೆಯಲ್ಲಿ ನಿಗಧಿಪಡಿಸಿರುವ ಭೌತಿಕ ಗುರಿ ಹಾಗೂ ಆರ್ಥಿಕ ಗುರಿಯಂತೆ ಪ್ರಗತಿಗನುಗುಣವಾಗಿ ಅವಶ್ಯವಿರುವ ಅನುದಾನ.
- ವಾರ್ಷಿಕ ಅನುಷ್ಟಾನ ಯೋಜನೆಯ ವೈಯಕ್ತಿಕ ಗೃಹ ಶೌಚಾಲಯಗಳ ಭೌತಿಕ ಗುರಿಯಲ್ಲಿ ಶೇ.30 ರಷ್ಟು ಭೌತಿಕ ಗುರಿ ಪರಿಗಣಿಸಿ, ಭೌತಿಕ ಗುರಿಗನುಗುಣವಾಗಿ ಅವಶ್ಯವಿರುವ ಅನುದಾನ.
- ಶೇ.30 ರವರೆಗಿನ ಮಿತಿಗೊಳಪಟ್ಟು ಅನುದಾನ ಅವಶ್ಯವಿರುವ ಜಿಲ್ಲೆಗಳಿಗೆ, ಜಿಲ್ಲೆಗಳಲ್ಲಿ ಪ್ರಸ್ತುತ ಲಭ್ಯವಿರುವ ಅನುದಾನ ಹೊರತುಪಡಿಸಿದಂತೆ ಬಿಡುಗಡೆ ಮಾಡಲು ತೀರ್ಮಾನಿಸಲಾಗಿದೆ.
- ಜಿಲ್ಲಾವಾರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ವೈಯುಕ್ತಿಕ ಶೌಚಾಲಯ ನಿರ್ಮಿಸಿಕೊಳ್ಳಲು ಬಿಡುಗಡೆಯಾಗಿರುವ ಮೊತ್ತದಲ್ಲಿ ಕ್ರಮವಾಗಿ 27.44% ಹಾಗೂ ಶೇ.7.15 ರಷ್ಟು ಬಳಸಬೇಕಾಗಿರುತ್ತದೆ.

ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ ಪ್ರಸ್ತುತ ಜಿಲ್ಲಾ ಕೋಡ್‌ಗಳಲ್ಲಿ ಲಭ್ಯವಿರುವ ಅನುದಾನವನ್ನು ಮರುಹಂಚಿಕೆ ಮಾಡಿ ಬಿಡುಗಡೆ ಮಾಡಬೇಕಾಗಿರುತ್ತದೆ. ಅದರಂತೆ ಕೇಂದ್ರದ ಪಾಲಿನ 1ನೇ ಕಂತಿನ ಅನುದಾನ ರೂ.3527.73 ಲಕ್ಷಗಳನ್ನು ರಾಜ್ಯ ಸರ್ಕಾರವು ಈ ಕೆಳಕಂಡ ಜಿಲ್ಲೆಗಳಿಗೆ ಮಾಡಲು ಮಂಜೂರಾತಿ ನೀಡಿದೆ. ಆದುದರಿಂದ ಈ ಆದೇಶ

**ಸರ್ಕಾರಿ ಆದೇಶ ಸಂ.ಗ್ರಾ.ಅ.ಪ/ರಾನೀನೈಮಿ/ನಿಭಾಅ/27/2014–15, ದಿನಾಂಕ : 25.07.2014**

ಪ್ರಸ್ತಾವನೆಯಲ್ಲಿ ತಿಳಿಸಲಾಗಿರುವ ಅಂಶಗಳನ್ನು ಪರಿಗಣಿಸಿ 2014–15ನೇ ಆರ್ಥಿಕ ಸಾಲಿಗೆ ಯೋಜನೆಯ ಅನುಷ್ಠಾನಕ್ಕಾಗಿ ರೂ.3527.73 ಲಕ್ಷಗಳ ಕೇಂದ್ರದ ಪಾಲಿನ ಅನುದಾನವನ್ನು ಜಿಲ್ಲೆಗಳಿಗೆ ಪ್ರಗತಿ ಆಧಾರದ ಮೇರೆಗೆ, ಭೌತಿಕ ಗುರಿಗನುಗುಣವಾಗಿ ಬೇಡಿಕೆ ಇರುವ ಜಿಲ್ಲೆಗಳಿಗೆ ಈ ಕೆಳಕಂಡ ಷರತ್ತುಗೊಳಪಟ್ಟು ಅನುದಾನವನ್ನು ಈ ಕೆಳಕಂಡಂತೆ ಮರುಹಂಚಿಕೆ ಮಾಡಿ ಬಿಡುಗಡೆ ಮಾಡಿದೆ.

| ಕ್ರ.. ಸಂ. | ಜಿಲ್ಲೆಗಳ ಹೆಸರು | ಬಿಡುಗಡೆ ಮಾಡಲು ಉದ್ದೇಶಿಸಿರುವ 1ನೇ ಕಂತಿನ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1 | ಬಾಗಲಕೋಟೆ | 200.00 |
| 2 | ಬೆಂಗಳೂರು (ಗ್ರಾಮೀಣ) | 200.00 |
| 3 | ಬೆಳಗಾಂ | 600.00 |
| 4 | ಬಿಜಾಪುರ | 300.00 |
| 5 | ಬೀದರ್ | 150.00 |
| 6 | ಬಳ್ಳಾರಿ | 200.00 |
| 7 | ಚಾಮರಾಜನಗರ | 200.00 |
| 8 | ಚಿಕ್ಕಬಳ್ಳಾಪುರ | 300.00 |
| 9 | ಚಿಕ್ಕಮಗಳೂರು | 200.00 |
| 10 | ಚಿತ್ರದುರ್ಗ | 101.28 |
| 11 | ಹಾಸನ | 400.00 |
| 12 | ಮಂಡ್ಯ | 450.00 |
| 13 | ತುಮಕೂರು | 200.00 |
| 15 | ಕೇಂದ್ರ ಕಚೇರಿ ಐ.ಇ.ಸಿ. ಚಟುವಟಿಕೆಗಳಗಾಗಿ | 26.45 |
| | ಒಟ್ಟು | **3527.73** |

(ರೂ. ಮೂರು ಸಾವಿರದ ಐದುನೂರ ಇಪ್ಪತ್ತೇಳು ಲಕ್ಷಗಳು ಹಾಗೂ ಎಪ್ಪತ್ತು ಮೂರು ಸಾವಿರಗಳು ಮಾತ್ರ)

* ಮೇಲಿನ ಅನುದಾನದಲ್ಲಿ ಪರಿಶಿಷ್ಟ ಜಾತಿಗೆ ಶೇ.27.44 ಹಾಗೂ ಪರಿಶಿಷ್ಟ ಪಂಗಡಕ್ಕೆ ಶೇ.7.15 ರಷ್ಟು ಬಳಸತಕ್ಕದ್ದು

**ಷರತ್ತು ಹಾಗೂ ನಿಭಂದನೆಗಳು :–**

1. ಬಿಡುಗಡೆ ಮಾಡಲಾಗಿರುವ ಅನುದಾನವನ್ನು ನಿರ್ಮಲ ಭಾರತ್ ಅಭಿಯಾನ ಕಾರ್ಯಕ್ರಮದ ಅನುಷ್ಟಾನಕ್ಕಾಗಿ ಬಿಡುಗಡೆ ಮಾಡಲಾಗಿದ್ದು, ಈ ಅನುದಾನವನ್ನು ಸದರಿ ಯೋಜನೆಯ ಉದ್ದೇಶಕ್ಕಾಗಿ ಮಾತ್ರ ಬಳಸತಕ್ಕದ್ದು. ಈ ಮೊತ್ತವನ್ನಾಗಲಿ ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ಇತರೆ ಯಾವುದೇ ಉದ್ದೇಶಗಳಿಗೆ ಬಳಸುವಂತಿಲ್ಲ.

2. ಈ ಅನುದಾನವನ್ನು ಪಡೆಯುವ ಸಂಸ್ಥೆ/ ಜಿಲ್ಲಾ ಪಂಚಾಯತ್ ಈ ಯೋಜನೆಗೆ ಸಂಬಂದಿಸಿದಂತೆ ಪ್ರತ್ಯೇಕ ಲೆಕ್ಕಪತ್ರಗಳನ್ನು ನಿರ್ವಹಿಸತಕ್ಕದ್ದು. ಈ ಅನುದಾನದಲ್ಲಿ ವೆಚ್ಚ ಮಾಡದೇ ಉಳಿದ ಹಣವನ್ನು ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್‌ಗೆ ಯೋಜನೆ ಮುಗಿದ ಕೂಡಲೇ ಹಿಂತಿರುಗಿಸತಕ್ಕದ್ದು.

3. ಯೋಜನೆಯ ಘಟಕವಾರು ವೆಚ್ಚ ಹಾಗೂ ಅದರ ಫಲಿತಾಂಶದೊಂದಿಗೆ ಬಳಕೆ ಪ್ರಮಾಣ ಪತ್ರ ಹಾಗೂ ವಾರ್ಷಿಕ ಲೆಕ್ಕ ಪರಿಶೋಧನೆಯ ತಃಖ್ತೆಯನ್ನು ನಿಗಧಿತ ನಮೂನೆಯಲ್ಲಿ ಸಲ್ಲಿಸತಕ್ಕದ್ದು

4. ಈ ಅನುದಾನದ ಒಟ್ಟು ಅಥವಾ ಭಾಗಶಃ ಮೊತ್ತದಿಂದ ನಿರ್ಮಾಣವಾದ ಅಸೆಟ್ಟನ್ನು ವಿಲೇವಾರಿ ಅಥವಾ ಅಡಮಾನ ಮಾಡಬಾರದು ಹಾಗೂ ಉದ್ದೇಶಿತ ಉಪಯೋಗಕಲ್ಲದೇ ಬೇರೆ ಯಾವುದೇ ಉದ್ದೇಶಗಳಿಗಾಗಿ ಬಳಸಬಾರದು.

5. ಕೇಂದ್ರ ಸರ್ಕಾರವು ದಿನಾಂಕ :01.04.2012 ರಿಂದ ಜಾರಿಗೆ ಬರುವಂತೆ ಹೊರಡಿಸಿರುವ ನಿರ್ಮಲ ಭಾರತ್ ಅಭಿಯಾನ ಕಾರ್ಯಕ್ರಮದ ಮಾರ್ಗಸೂಚಿಗಳು ಮತ್ತು ಕೇಂದ್ರ ಸರ್ಕಾರದಿಂದ ಯೋಜನಾ ಘಟಕಾಂಶಗಳಿಗೆ ಮಂಜೂರಾತಿ ದೊರೆತಿರುವ ಮಿತಿಯೊಳಗೆ ವೆಚ್ಚ ಮಾಡತಕ್ಕದ್ದು. ಈ ಸಂಬಂಧ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕಾಲ ಕಾಲಕ್ಕೆ ಹೊರಡಿಸಲಾಗುವ ಆದೇಶ/ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

6. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ನಿಗಧಿಪಡಿಸಿರುವಂತೆ ಅನುದಾನವನ್ನು ಬಳಸತಕ್ಕದ್ದು.

7. ಈ ಯೋಜನೆಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು (ಈ ಅನುದಾನಕ್ಕೆ ಸಂಬಂಧಿಸಿದಂತೆ) ಮುಕ್ತವಾಗಿಟ್ಟು ಅನುದಾನ ನೀಡುವ ಪ್ರಾಧಿಕಾರ ಹಾಗೂ Comptroller and Audit General of India under the provisions of (DPC) Act, 1971 ರವರ ಲೆಕ್ಕಪರಿಶೋಧನೆಗೆ ಮತ್ತು ಆಂತರಿಕ ಲೆಕ್ಕ ಪರಿಶೋಧನೆಗೆ (Internal Audit of the Pr.Accounts office functioning under Chief Controller of Accounts) ಇವರುಗಳಿಗೆ ಯಾವುದೇ ಸಂದರ್ಭದಲ್ಲಿ ಕೋರಿದಾಗ ಎಲ್ಲಾ ಲೆಕ್ಕಪತ್ರಗಳನ್ನು ಪರಿಶೋಧನೆಗೆ ಒದಗಿಸತಕ್ಕದ್ದು

8. ಯೋಜನೆಯ ಅನುಷ್ಠಾನದ ಪ್ರಗತಿಯನ್ನು ಕೇಂದ್ರ/ರಾಜ್ಯ ಸರ್ಕಾರದಿಂದ ನೇಮಿಸಲಾದ Review Mission ನ ಸದಸ್ಯರುಗಳಿಂದ ಮುಂದಿನ ಅನುದಾನದ ಕಂತಿನ ಬಿಡುಗಡೆಗೆ ಮುನ್ನ ಪರಿಶೀಲಿಸಲಾಗುವುದು.

9. ಬಿಡುಗಡೆ ಮಾಡಲು ಉದ್ದೇಶಿಸಿರುವ ಅನುದಾನವನ್ನು ನಿರ್ಮಲ ಭಾರತ್ ಅಭಿಯಾನ ಯೋಜನೆಗೆ ಮೀಸಲಿಟ್ಟಿರುವ ಬ್ಯಾಂಕ್ ಖಾತೆಗೆ ಆರ್.ಟಿ.ಜಿ.ಎಸ್ ಮೂಲಕ ಬಿಡುಗಡೆಗೊಳಿಸಲಾಗಿದೆ.

10. ಅನುಮೋದಿತ ವಾರ್ಷಿಕ ಅನುಷ್ಠಾನ ಯೋಜನೆಯ ಪ್ರಕಾರ ನಿಗಧಿಪಡಿಸಿರುವ ಗುರಿಗೆ ಎದುರಾಗಿ ಮಾಸಿಕ, ತ್ರೈಮಾಸಿಕ ವರದಿಯನ್ನು ಸಲ್ಲಿಸತಕ್ಕದ್ದು

11. ಐ.ಇ.ಸಿ ಚಟುವಟಿಕೆಗಾಗಿ (ಆರಂಬಿಕ ಚಟುವಟಿಕೆಗಳು ಸೇರಿದಂತೆ) ಜಿಲ್ಲೆಗಳಿಗೆ ನಿಗಧಿಪಡಿಸಿರುವ ಯೋಜನಾ ವೆಚ್ಚದ (Project Cost 15%) ಶೇ.15 ರಷ್ಟು ಮೊತ್ತದಲ್ಲಿ ಶೇ.5% ರಷ್ಟು ಮೊತ್ತವನ್ನು ರಾಜ್ಯ ಕಚೇರಿಯಲ್ಲಿ ಐ.ಇ.ಸಿ.ಚಟುವಟಿಕೆಗಳಿಗೆ ಬಳಸಲು ಅವಕಾಶವಿರುತ್ತದೆ. ಬಾಕಿ ಅನುದಾನವನ್ನು ಮಾತ್ರ ಜಿಲ್ಲೆಗಳು ಕೇಂದ್ರ ಹಾಗೂ ರಾಜ್ಯ ಸರ್ಕಾರದ 80:20 ಅನುಪಾತದಲ್ಲಿ ಬಳಸಲು 2013–14ನೇ ಸಾಲಿನಿಂದ ಬಳಸಬೇಕಾಗಿರುತ್ತದೆ ಹಾಗೂ ಬಳಸುವಾಗ ಕಡ್ಡಾಯವಾಗಿ KTPP Act ನ್ನು ಅಳವಡಿಸಿಕೊಳ್ಳುವುದು. ಐ.ಇ.ಸಿ ಚಟುವಟಿಕೆಗಾಗಿ ಬಳಸುವಾಗ ಕಡ್ಡಾಯವಾಗಿ KTPP Act ನ್ನು ಅಳವಡಿಸಿಕೊಳ್ಳುವುದು.

12. ಈಗ ಬಿಡುಗಡೆ ಮಾಡಿರುವ ಅನುದಾನದಲ್ಲಿ ಶೇ.60 ಬಳಕೆಯ (ಆರಂಭಿಕ ಶಿಲ್ಕು, ಪ್ರಸ್ತುತ ಬಿಡುಗಡೆ ಹಾಗೂ ಬಡ್ಡಿಯಿಂದ) ನಂತರವಷ್ಟೇ ಕೇಂದ್ರ/ರಾಜ್ಯ ಪಾಲಿನ ಅನುದಾನವನ್ನು ಪ್ರತ್ಯೇಕವಾಗಿ ಹಣ ಬಳಕೆ ಪ್ರಮಾಣ ಪತ್ರವನ್ನು ಹಾಗೂ ಆಡಿಟ್ ವರದಿಗಳನ್ನು ಈ ಕಛೇರಿಗೆ ಸಲ್ಲಿಸುವುದು. ಅವುಗಳನ್ನು ಪಡೆದ ನಂತರವೇ ಕೇಂದ್ರ/ರಾಜ್ಯದ ಅನುದಾನಗಳ ಮುಂದಿನ ಕಂತಿನ ಹಣವನ್ನು ಬಿಡುಗಡೆ ಮಾಡಲು ಕ್ರಮ ವಹಿಸಲಾಗುವುದು.

13. ಮಾರ್ಗಸೂಚಿಯಂತೆ ಜಿಲ್ಲೆಗಳು ಕೇಂದ್ರ ಕಚೇರಿಯಿಂದ ಬಿಡುಗಡೆ ಮಾಡಿದ ಅನುದಾನವನ್ನು 15 ದಿನಗಳೊಳಗಾಗಿ ಗ್ರಾಮ ಪಂಚಾಯತಿಗಳಿಗೆ ಅನುಷ್ಠಾನಕ್ಕಾಗಿ ಬಿಡುಗಡೆ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಸಲ್ಮಾ ಕೆ.ಫಾಹಿಂ)**
ಮಿಷನ್ ನಿರ್ದೇಶಕರು,
ರಾ.ನೀ.ನೈ.ಮಿಷನ್ ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿಗಳು,
ಗ್ರಾ ಅ ಮತ್ತು ಪಂಚಾಯತ್ ರಾಜ್ ಇಲಾಖೆ

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಪ್ರತಿ ಗ್ರಾಮ ಪಂಚಾಯಿತಿಗೆ ಒಂದರಂತೆ ಒಟ್ಟು 6,000 ಸುವ್ಯವಸ್ಥಿತವಾದ ಮುಕ್ತಿದಾಮ ಅಭಿವೃದ್ಧಿ ಪಡಿಸಲು 2014–15ನೇ ಸಾಲಿನಲ್ಲಿ ಅನುಷ್ಠಾನಗೊಳಿಸುವ ಕುರಿತು.

**ಉಲ್ಲೇಖ:** 1) 2014–15ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಣೆ ಮಾಡಿರುವುದರ ಮೇಲೆ ಕೈಗೊಳ್ಳುವ ಕ್ರಮದ ಕುರಿತು.

2) ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣಿ ಉದ್ಯೋಗ ಖಾತರಿ ಅಧಿನಿಯಮದ ಅನುಸೂಚಿ–**I** ಮತ್ತು ಅನುಸೂಚಿ–**II** ಗಳನ್ನು ಪರಿಷ್ಕೃತ ರಾಜ್ಯ ಪತ್ರದಲ್ಲಿ ಪ್ರಕಟಿಸಿರುವ ಕೇಂದ್ರ ಸರ್ಕಾರದ ಅಧಿಸೂಚನೆಯ ಪತ್ರದ ಸಂಖ್ಯೆ: ಈ**No** ಎ–11011/5/2006 **MGNREGA** ದಿನಾಂಕ: 03.01.2014.

**ಪ್ರಸ್ತಾವನೆ:–**

2014–15ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿದಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ನಿರ್ವಹಿಸುತ್ತಿರುವ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಪ್ರತಿ ಗ್ರಾಮ ಪಂಚಾಯಿತಿಗೆ ಒಂದರಂತೆ ಸ್ಮಶಾನ ಭೂಮಿ/ಮುಕ್ತಿದಾಮ ಅಭಿವೃದ್ಧಿ ಕಾರ್ಯವನ್ನು ಸುವ್ಯವಸ್ಥಿತವಾಗಿ ಪೂರ್ಣಗೊಳಿಸಲು, ಒಟ್ಟು 6000 ಸ್ಮಶಾನ ಭೂಮಿಗಳನ್ನು 2014–15ನೇ ಸಾಲಿನಲ್ಲಿ ಅಭಿವೃದ್ಧಿ ಪಡಿಸಲು ಪ್ರಸ್ತಾಪಿಸಲಾಗಿರುತ್ತದೆ. ಗ್ರಾಮಗಳಲ್ಲಿ ಮೃತರ ಅಂತ್ಯ ಕ್ರಿಯೆಗಳನ್ನು ನಡೆಸಲು ಸ್ಮಶಾನ ಭೂಮಿಯು ಅತ್ಯಂತ ಅವಶ್ಯಕವಾಗಿದೆ. ಈಗಾಗಲೇ, ರುದ್ರಭೂಮಿ/ಸ್ಮಶಾನ ಭೂಮಿಗಳನ್ನು ಅಭಿವೃದ್ಧಿ ಪಡಿಸಲು ರಾಜ್ಯದ ಯೋಜನೆಯಾದ ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತದಡಿ ಆಯ್ಕೆಯಾದ ಗ್ರಾಮಗಳಲ್ಲಿ ಯೋಜನೆಯಡಿ ಶೇಕಡಾ 8 ರಷ್ಟು ಅನುದಾನವನ್ನು ಉಪಯೋಗಿಸಿಕೊಳ್ಳಲು ನಿಗಧಿಪಡಿಸಿರುತ್ತದೆ. ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಪ್ರತಿ ಗ್ರಾಮ ಪಂಚಾಯಿತಿಗೆ ಒಂದರಂತೆ ತೆಗೆದುಕೊಳ್ಳಲು ಸುವರ್ಣ ಗ್ರಾಮೋದಯಡಿ ಒದಗಿಸಿರುವ ಅನುದಾನದಿಂದ ಸ್ಮಶಾನ ಭೂಮಿಯನ್ನು ಅಭಿವೃದ್ಧಿ ಪಡಿಸಲು, ಪೂರೈಕೆ ಮಾಡಲು ಸಾಧ್ಯವಾಗದ ಕಾರಣ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಲಭ್ಯವಿರುವ ಅನುದಾನಗಳನ್ನು ಉಪಯೋಗಿಸಿಕೊಂಡು ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಕನಿಷ್ಠ ಒಂದು ಸ್ಮಶಾನ ಭೂಮಿಯನ್ನು ಅಭಿವೃದ್ಧಿ ಪಡಿಸಬಹುದೆಂದು ತೀರ್ಮಾನಿಸಲಾಗಿರುತ್ತದೆ. ಮುಂದುವರೆದು ಉಲ್ಲೇಖದಲ್ಲಿ 2013–14ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಅಧಿನಿಯಮದ ಅನುಸೂಚಿ-I ಮತ್ತು ಅನುಸೂಚಿ–**II** ಇವುಗಳಿಗೆ ಸೂಕ್ತವಾದ ತಿದ್ದುಪಡಿ ತಂದು ಹಲವಾರು ಬದಲಾವಣೆಗಳನ್ನು ಪ್ರಕಟಿಸಿದೆ. ಪರಿಷ್ಕೃತ ಆದೇಶದ ಪ್ರಕಾರ, ಸ್ಮಶಾನ ಭೂಮಿ/ರುದ್ರ ಭೂಮಿಗಳನ್ನು ಅಭಿವೃದ್ಧಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಿರುತ್ತದೆ ಹಾಗೂ ಸ್ಮಶಾನ ಭೂಮಿ/ರುದ್ರ ಭೂಮಿಗಳ ಕಾಮಗಾರಿಗಳ

ನಿರ್ಮಾಣವನ್ನು  ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸ್ವತಂತ್ರವಾಗಿ ಅಥವಾ ಇತರೆ ಯೋಜನೆಗಳಲ್ಲಿ ಒಗ್ಗೂಡಿಸುವಿಕೆಯ ಮೂಲಕ ಅಭಿವೃದ್ಧಿ ಪಡಿಸಿಕೊಳ್ಳಬಹುದಾಗಿರುತ್ತದೆ. 2014–15ನೇ ಸಾಲಿನಲ್ಲಿ ಪ್ರತಿ ಗ್ರಾಮ ಪಂಚಾಯಿತಿಗೆ ಒಂದರಂತೆ ಒಟ್ಟು 6000 ಸುವ್ಯವಸ್ಥಿತವಾದ ಸ್ಮಶಾನ ಭೂಮಿಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅಭಿವೃದ್ಧಿಗೊಳಿಸಲು ನಿರ್ಧರಿಸಲಾಗಿರುತ್ತದೆ. ಆದ್ದರಿಂದ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/ 332 /ಉಖಾಯೋ/2014 ದಿನಾಂಕ: 13–06–2014**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಪ್ರತಿ ಗ್ರಾಮ ಪಂಚಾಯಿತಿಗೆ ಒಂದರಂತೆ ಒಟ್ಟು 6,000 ಸುವ್ಯವಸ್ಥಿತವಾದ ಮುಕ್ತಿದಾಮ/ಸ್ಮಶಾನ ಭೂಮಿಯ ಕಾಮಗಾರಿಗಳನ್ನು ಅಂದಾಜು ವೆಚ್ಚದಲ್ಲಿ ಜಿಲ್ಲಾವಾರು ಗುರಿಗಳನ್ನು ಅನುಬಂಧದಲ್ಲಿ ತೋರಿಸಿರುವಂತೆ ನಿರ್ಮಾಣ ಮಾಡಿ ಅಭಿವೃದ್ಧಿ ಪಡಿಸಲು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅಧಿನಿಯಮದ ಪರಿಷ್ಕೃತ ಅನುಸೂಚಿ–ಖ ಮತ್ತು ಅನುಸೂಚಿ–ಖಖರಂತೆ, ಸ್ವತಂತ್ರವಾಗಿ ಅಥವಾ ಇತರೆ ಯೋಜನೆಗಳೊಂದಿಗೆ ಒಗ್ಗೂಡಿಸುವಿಕೆಯ ಮೂಲಕ ಈ ಕೆಳಕಂಡ ಷರತ್ತುಗಳ ಅನುಪಾಲನೆಗೆ ಒಳಪಟ್ಟು 2014–15ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಆದೇಶಿಸಿದೆ.

1. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುದಾನವನ್ನು ಬಳಸಿ ಸ್ಮಶಾನ ಭೂಮಿ ಕಾಮಗಾರಿಗಳನ್ನು ಅಗತ್ಯವಾದ ಸೌಲಭ್ಯಗಳೊಂದಿಗೆ ನಿರ್ಮಾಣ ಮಾಡುವುದು.

2. ಸ್ಮಶಾನ ಭೂಮಿ ಅಭಿವೃದ್ಧಿ ಪಡಿಸಲು ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತದಡಿ ಆಯ್ಕೆಯಾದ ಗ್ರಾಮಗಳಲ್ಲಿ ಶೇ. 8ರಷ್ಟಿನ ಅನುದಾನವನ್ನು ಉದ್ಯೋಗ ಖಾತರಿ ಯೋಜನೆಯ ಅನುದಾನದೊಂದಿಗೆ ಒಗ್ಗೂಡಿಸಿಕೊಳ್ಳುವುದು.

3. ಸ್ಮಶಾನ ಭೂಮಿ ಕಾಮಗಾರಿಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸ್ವತಂತ್ರವಾಗಿ ಅಥವಾ ಇತರೆ ಯೋಜನೆಗಳೊಂದಿಗೆ ಒಗ್ಗೂಡಿಸುವಿಕೆಯ ಮೂಲಕ ನಿರ್ಮಾಣ ಮಾಡಬಹುದಾಗಿರುತ್ತದೆ.

4. ಮಾದರಿ ಅಂದಾಜು ಪತ್ರಿಕೆಯನ್ನು ಇದರೊಂದಿಗೆ ಲಗತ್ತಿಸಿದೆ. ಜಮೀನಿನ ಲಭ್ಯತೆ/ಅಗತ್ಯತೆಗೆ ಅನುಗುಣವಾಗಿ ಅಂದಾಜು ಪತ್ರಿಕೆಯನ್ನು ಪರಿಷ್ಕರಿಸಬಹುದು.

5. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಿಯಮಾನುಸಾರ ಅನುಮೋದಿಸಿದ ಮಾದರಿ ಅಂದಾಜು ಪಟ್ಟಿಯನ್ವಯ ಕೆಲಸ ನಿರ್ವಹಿಸುವುದು. ಒಂದು ವೇಳೆ ಮಾದರಿ ಅಂದಾಜು ಪಟ್ಟಿ ಸ್ಥಳೀಯ ಪರಿಸ್ಥಿತಿಗಳಿಗೆ ಹೊಂದದೆ ಇದ್ದಲ್ಲಿ ಅಂದರೆ ಗ್ರಾಮದ ಜನಸಂಖ್ಯೆಯನ್ನು ಆಧರಿಸಿ ಸ್ಮಶಾನದ ಗಾತ್ರವನ್ನು ನಿರ್ಧರಿಸಿ ಅಗತ್ಯವಾದ ಬದಲಾವಣೆಗಳನ್ನು ಮಾಡಿಕೊಳ್ಳಬಹುದು.

6. ಒಂದು ವೇಳೆ ಕಾಮಗಾರಿಗೆ ಆದ ವೆಚ್ಚ ಅಂದಾಜು ಪಟ್ಟಿಗಿಂತ ಕಡಿಮೆಯಾದಲ್ಲಿ ಅದೇ ಮೊತ್ತಕ್ಕೆ ಸೀಮಿತಗೊಳಿಸತಕ್ಕದ್ದು.

7. ಕಾಮಗಾರಿಯನ್ನು ನಿರ್ವಹಿಸುವಾಗ ಕೂಲಿ ಮತ್ತು ಸಾಮಗ್ರಿಗಳ 60:40ರ ಅನುಪಾತವನ್ನು ಕಡ್ಡಾಯವಾಗಿ ಗ್ರಾಮ ಪಂಚಾಯಿತಿಯ ಮಟ್ಟದಲ್ಲಿ ನಿರ್ವಹಿಸುವುದು.

8. ಕೇಂದ್ರ ಸರ್ಕಾರವು ಹೊರಡಿಸಿರುವ ಕಾರ್ಯಚರಣೆಯ ಮಾರ್ಗಸೂಚಿಗಳು–2013, 4ನೇ ಆವೃತ್ತಿಯನ್ನು ಕಡ್ಡಾಯವಾಗಿ ಪಾಲನೆ ಮಾಡುವುದು ಮತ್ತು ಯೋಜನೆಯ ಮಾರ್ಗಸೂಚಿಯಂತೆ ಕಡ್ಡಾಯವಾಗಿ ಗ್ರಾಮ ಸಭಾ ಅನುಮೋದನೆ ನಂತರ ಕ್ರಿಯಾಯೋಜನೆಯಲ್ಲಿ ಸೇರಿಸಿಕೊಂಡು ಅನುಷ್ಠಾನಗೊಳಿಸುವುದು.

9. ಕಾಮಗಾರಿಯ ಕೆಲಸವನ್ನು ಉದ್ಯೋಗ ಚೀಟಿ ಹೊಂದಿದ ಅಕುಶಲ ಕೂಲಿ ಕಾರ್ಮಿಕರಿಂದ ನಿರ್ವಹಿಸತಕ್ಕದ್ದು,

10. ಗುತ್ತಿಗೆ ದಾರರನ್ನು ಮತ್ತು ಯಂತ್ರಗಳನ್ನು ಅನುಷ್ಠಾನದಲ್ಲಿ ಬಳಸಲು ನಿಷೇದಿಸಿದೆ.

11. ಕಾಮಗಾರಿಯ ನಿರ್ಮಾಣದ ಮೊತ್ತವು ಅಂದಾಜು ಪಟ್ಟಿಯ ಮೊತ್ತಕ್ಕೆ ಮೀರುವಂತಿಲ್ಲ.

12. ನಿರ್ಮಾಣವಾದ ಕಾಮಗಾರಿಗಳನ್ನು ಸಮುದಾಯದ ಆಸ್ತಿಯೆಂದು ಪರಿಗಣಿಸಿ ಸಾಮಾಜಿಕ ಅರಣ್ಯೀಕರಣದಡಿ ಗಿಡ ಮರ ಬೆಳೆಸುವುದು, ಜೈವಿಕ ಬೇಲಿ ನಿರ್ಮಿಸುವುದು ಹಾಗೂ ಹೊಲಗಳಿಗೆ ಹೋಗುವ ದಾರಿಯಲ್ಲಿ ಸ್ಮಶಾನಗಳು ಇದ್ದಲ್ಲಿ/ನಿರ್ಮಾಣ ಮಾಡಲು ಪ್ರಸ್ತಾಪಿಸಿದ್ದಲ್ಲಿ ದಾರಿಗಳನ್ನು "ನಮ್ಮ ಹೊಲ ನಮ್ಮ ದಾರಿ" ಕಾರ್ಯಕ್ರಮದಡಿ ನಿಯಾಮನುಸಾರ ನಿರ್ಮಿಸುವುದು.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಚಂದ್ರಶೇಖರ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಕರ್ನಾಟಕ ಸರ್ಕಾರ

ಸಂ:ಗ್ರಾಅಪ 78 ಗ್ರಾನೀಸ(2)2014

# ಸುತ್ತೋಲೆ

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:15.7.2014

NRDWPಯಡಿ 2014–15ರ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ ಅನುಮೋದನೆ ಕಾಯ್ದಿರಿಸಿ, ಈಗಾಗಲೇ 2013–14ರ ಸಾಲಿನಲ್ಲಿ ಸಕ್ಷಮ ಪ್ರಾಧಿಕಾರದಿಂದ / ಸರ್ಕಾರದಿಂದ ಅಧಿಕೃತವಾಗಿ ಅನುಮೋದನೆಯಾಗಿ 2014–15ರ ಸಾಲಿಗೆ ಮುಂದುವರಿದಿರುವ ಎಲ್ಲಾ ಕುಡಿಯುವ ನೀರಿನ ಕಾಮಗಾರಿಗಳ ಬಿಲ್‌ಗಳನ್ನು ಪಾವತಿ ಮಾಡಲು ಅನುಮತಿಸಿದೆ.

ಅಂತೆಯೇ ಸರ್ಕಾರದಿಂದ ಅಧಿಕೃತವಾಗಿ ಆಡಳಿತಾತ್ಮಕ ಅನುಮೋದನೆ ಹೊಂದಿರುವ ಬಹು ಗ್ರಾಮ ಯೋಜನೆಗಳು / DBOT ಯೋಜನೆಗಳಿಗೆ ಸಂಬಂಧಿಸಿದಂತೆ ಸಹ PRED ಕಾರ್ಯಪಾಲಕ ಇಂಜಿನಿಯರ್ ಟೆಂಡರ್ / ToR ನಿಬಂಧನೆಗಳನ್ವಯ ಪ್ರಸ್ತಾಪಿಸುವ ಬಿಲ್‌ಗಳನ್ನು ಸಹ ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿಗಳು ಮಾನ್ಯ ಮಾಡಿ SWSM ಬ್ಯಾಂಕ್ ಖಾತೆಗೆ authorization ಕಳುಹಿಸಲು ಕ್ರಮವಹಿಸಬೇಕು. ಇದಲ್ಲದೆ, 2014–15ರ ಸಾಲಿನ ಕ್ರಿಯಾ ಯೋಜನೆ ಸಂಬಂಧ ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪ 12 ಗ್ರಾನೀಸ(2)2014, ದಿನಾಂಕ:16.05.2014ರಲ್ಲಿ ನಿಗಧಿಪಡಿಸಿರುವ ಅನುದಾನದ ವ್ಯಾಪ್ತಿಯೊಳಗೆ ಬಿಲ್‌ಗಳನ್ನು ಮಾನ್ಯ ಮಾಡಲು ಸಹ ಕ್ರಮವಹಿಸಬೇಕು. ಆದರೆ, ಈ ರೀತಿಯ authorization ಮಾಡುವ ಮುನ್ನ EE/PRED ರವರು IMISನಲ್ಲಿ ಸದರಿ ಯೋಜನೆಗಳ ಮಾಹಿತಿ ದಾಖಲಿಸಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು. ಆದರೆ, ಯಾವುದೇ ಕಾರಣಕ್ಕೂ ಒಟ್ಟಾರೆ ಜಿಲ್ಲಾ ಪಂಚಾಯತಿಗೆ ಕ್ರಿಯಾ ಯೋಜನೆ ಸಂಬಂಧ ಅನುಮತಿಸಿರುವ ಗರಿಷ್ಠ ಮಿತಿಯನ್ನು ಮೀರಿ ಗೊತ್ತುಪಡಿಸಿದ SWSM ಬ್ಯಾಂಕ್ ಖಾತೆಗೆ authorization ಕಳುಹಿಸತಕ್ಕದಲ್ಲ. ಅಂತೆಯೇ, ಸಿಂಡಿಕೇಟ್ ಬ್ಯಾಂಕ್, ಬೆಂಗಳೂರು, ಅಧಿಕೃತವಾಗಿ EE/PRED, ಅಂಔಗಳು ಧೃಢೀಕರಿಸಿ, ನಿಗದಿತ ಪ್ರಪತ್ರದಲ್ಲಿ ಸಲ್ಲಿಸಿದ ಬಿಲ್‌ಗಳನ್ನು ಮಾನ್ಯ ಮಾಡಲು ಕ್ರಮವಹಿಸಬೇಕೆಂದು ತಿಳಿಸಿದೆ.

15/7/14

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# ಉತ್ತರ ಕನ್ನಡ ಜಿಲ್ಲೆಯಲ್ಲಿ ಗ್ರಾಮೀಣ ನಿರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಯ ಚಟುವಟಿಕೆಗಳು



ಗೇರಾಳ ಗ್ರಾ.ನೀ.ಸ ಮತ್ತು ನೈ ಸಮಿತಿಯ ತರಬೇತಿ ಕಾರ್ಯಕ್ರಮದ
ಸಭಾ ವೇದಿಕೆಯ ಒಂದು ನೋಟ



ತರಬೇತಿ ಕಾರ್ಯಕ್ರಮದಲ್ಲಿ ತಾವರಕಟ್ಟಾ ಗ್ರಾ.ನೀ.ಸ.ಮತ್ತು ನೈ.ಸಮಿತಿಯ
ಸದಸ್ಯರಾದ ಶ್ರೀಮತಿ ಅಂಜಲೀನ ಸಿದ್ದಿ(ಉತ್ತರ ಕನ್ನಡ ಜಿಲ್ಲೆ
ಯಲ್ಲಾಪುರ ತಾಲೂಕಿನ ಮದನೂರು ಗ್ರಾ.ಪಂ)

# KARNATAKA VIKAS : AUGUST 2014

A Monthly Magazine for Rural Development and Panchayat Raj Department, Government of Karnataka
Regd No. KA/ BGGPO/2531/2012-14, Licence to Post "without Prepayment" WPP-32
RNI No. : 28103/1974 Total No. of Pages 52, Posted at Bangalore GPO on 9th, 10th, 11th of Every Month


## 'ಕರ್ನಾಟಕ ವಿಕಾಸ' ಮಾಸ ಪತ್ರಿಕೆಯ ಚಂದಾಹಣ ಪರಿಷ್ಕೃತಗೊಂಡಿದೆ.

| | |
|---|---|
| ಪತ್ರಿಕೆಯ ಬಿಡಿ ಪ್ರತಿ | ₹ 10 |
| ವಾರ್ಷಿಕ ಚಂದಾಹಣ ವ್ಯಕ್ತಿಗಳಿಗೆ | ₹ 100 |
| ಸಂಘ / ಸಂಸ್ಥೆಗಳಿಗೆ | ₹ 120 |

ವಾರ್ಷಿಕ ಚಂದಾಹಣವನ್ನು ಒಂದು ವರ್ಷದ ಕಾಲಾವಧಿಗಾಗಿ ಮಾತ್ರ ಪಾವತಿಸಲು ಕೋರಿದೆ. ಚಂದಾಹಣವನ್ನು ಡಿ.ಡಿ/ಚೆಕ್ ರೂಪದಲ್ಲಿ ಸ್ವೀಕರಿಸಲಾಗುವುದಿಲ್ಲ. ಚಂದಾದಾರರು ಪೋಸ್ಟಲ್ ಮನಿ ಆರ್ಡರ್ ಮೂಲಕ ಮಾತ್ರ ಚಂದಾಹಣವನ್ನು ಪಾವತಿಸಲು ಕೋರಿದೆ.

ಚಂದಾದಾರರು ಚಂದಾಹಣವನ್ನು ಅಂಚೆ ಕಚೇರಿಯಲ್ಲಿ ಪೋಸ್ಟಲ್ ಮನಿ ಆರ್ಡರ್ ಮೂಲಕ ಪಾವತಿಸುವಾಗ ಮನಿ ಆರ್ಡರ್ ಫಾರಂನಲ್ಲಿ ಚಂದಾದಾರರ ಹೆಸರು ಮತ್ತು ಸಂಪೂರ್ಣ ಅಂಚೆ ವಿಳಾಸ ಪಿನ್‌ಕೋಡ್‌ನೊಂದಿಗೆ ಸ್ಪಷ್ಟವಾಗಿ ನಮೂದಿಸಿದೆಯೇ? ಎಂದು ಖಚಿತಪಡಿಕೊಳ್ಳಲು ಕೋರಿದೆ. ಚಂದದಾರರ ಮೊಬೈಲ್ ಸಂಖ್ಯೆ ನಮೂದಿಸಿದರೆ ಉತ್ತಮ. ಸ್ಪಷ್ಟ ಅಂಚೆ ವಿಳಾಸಗಳಿಲ್ಲದ ವಾರ್ಷಿಕ ಚಂದಾಹಣವನ್ನು ಸ್ವೀಕರಿಸಲಾಗುವುದಿಲ್ಲ. ಚಂದಾಹಣವನ್ನು ಪಾವತಿಸಬೇಕಾದ 'ಕರ್ನಾಟಕ ವಿಕಾಸ'ದ ಕಚೇರಿ ವಿಳಾಸ ಈ ಕೆಳಕಂಡಂತಿದೆ.


**ಸಂಪಾದಕರು**

**ಕರ್ನಾಟಕ ವಿಕಾಸ,**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,**
ನಂ.309, 3ನೇ ಮಹಡಿ, ಗೇಟ್ ನಂ.1, ಬಹುಮಹಡಿ ಕಟ್ಟಡ, ಡಾ||ಅಂಬೇಡ್ಕರ್ ವೀಧಿ, ಬೆಂಗಳೂರು – 560 001.
ದೂರವಾಣಿ ಸಂಖ್ಯೆ : 080 – 22353857.
ಇ–ಮೇಲ್: kvrdpr@gmail.com, ವೆಬ್‌ಸೈಟ್: www.rdpr.kar.nic.in



Published & Owned by :
**Director ( Panchayat Raj)**
Rural Development and
Panchayat Raj Department

Name of the Editor
**Y. Mahankalappa**

Place & Publications
**Karnataka Vikas**
No. 309, 3rd Floor, Gate No.1,
M.S. Building, Dr. Ambekar Veedhi,
Bangalore - 560 001.

Printed by
The Director,
**Government Press**
Bangalore, Karnataka.

Price : ₹ 10.00
ಬೆಲೆ : ₹ 10.00